# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಸೆಪ್ಟೆಂಬರ್, ೨೦೧೫

ಸಂಪಾದಕ : ಡಿ.ಎಸ್.ನಾಗಭೂಷಣ

ಸಂಪುಟ: ೫ ಸಂಚಿಕೆ: ೨

**ಚಂದಾ :** ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/- ಪುಟ: ೨೪



**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ನಮ್ಮ ವಾರ್ಷಿಕ ವಿಶೇಷಾಂಕಕ್ಕೆ ನಿಮ್ಮಿಂದ ದೊರೆತ ತುಂಬು ಹೃದಯದ ಸ್ವಾಗತಕ್ಕೆ ಹೇಗೆ ಧನ್ಯವಾದಗಳನ್ನು ತಿಳಿಸಬೇಕೋ ಗೊತ್ತಾಗದಾಗಿದೆ. ಹಲವಾರು ಕಡೆಯಿಂದ ಬಂದ ದೂರವಾಣಿ ಕರೆಗಳು ಮತ್ತು ಬಂದಿರುವ ಪತ್ರಗಳು ನಮ್ಮ ಕೆಲಸ ಸಾರ್ಥಕವೆನಿಸುವಂತೆ ಮಾಡಿವೆ. ಪತ್ರಗಳಲ್ಲಿ ಕೆಲವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದ್ದು, ಮಿಕ್ಕವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ವಿಶೇಷಾಂಕದ ಬಗೆಗಿನ ಕೆಲ ಪತ್ರಗಳು ಕೆಲ ಟೀಕೆಗಳನ್ನೂ ಒಳಗೊಂಡಿವೆ ಎಂಬುದನ್ನೂ ಇಲ್ಲಿ ತಿಳಿಸಬೇಕು. ಆ ಟೀಕೆಗಳನ್ನೂ ಪತ್ರಗಳ ವಿಭಾಗದಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಬಂಧ ಒಂದು ಮಾತನ್ನು ನಮ್ಮ ಓದುಗರಿಗೆ ತಿಳಿಸಬೇಕಿದೆ. ಅದೆಂದರೆ, 'ಹೊಸ ಮನುಷ್ಯ' ಒಂದು ಸಾರ್ವತ್ರಿಕ ಪತ್ರಿಕೆಯಲ್ಲ. ಹುಟ್ಟಿನಿಂದಲೇ ಅದು ತನ್ನನ್ನು ತಾನು ಸಮಾಜವಾದಿ ಮಾಸಿಕ ಎಂದು ಕರೆದುಕೊಂಡಿದೆ. ಹಾಗಾಗಿ ಈ ಪತ್ರಿಕೆಯಲ್ಲಿ ಏನು ಚರ್ಚೆಗೆ ಬಂದರೂ ಅದು ಸ್ಥೂಲವಾಗಿಯಾದರೂ ಸಮಾಜವಾದದ ವಿಶಾಲ ಚೌಕಟ್ಟಿಗೆ ಒಳಪಡುವಂತಿರಬೇಕು ಮತ್ತು ಆ ಚೌಕಟ್ಟಿನಲ್ಲಿ ಮಾತ್ರ ಮುಕ್ತ ಚರ್ಚೆಗೆ ಅವಕಾಶ. ಅಲ್ಲದೆ, ನೀವು ಗಮನಿಸಿರಬಹುದಾದಂತೆ, ಪತ್ರಿಕೆ ಎತ್ತಿಹಿಡಿಯುವ ಸಮಾಜವಾದ ಈಗಾಗಲೇ ವ್ಯಾಖ್ಯಾನಿಸಲ್ಪಟ್ಟ ಸಮಾಜವಾದವಲ್ಲ;ಅದೊಂದು ಬಾಗಿಲು ಮುಚ್ಚಿಕೊಂಡ ಸಿದ್ಧಾಂತವಲ್ಲ. ಎಲ್ಲ ರೀತಿಯ ಸಮಕಾಲೀನ-ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ-ಸಾಹಿತ್ಯಿಕ- ಸೂಕ್ಷ್ಮತೆಗಳಿಗೆ, ಸವಾಲುಗಳಿಗೆ ಸ್ಪಂದಿಸಿ ಬೆಳೆಯಬಯಸುವ, ವಿಶೇಷಾಂಕದ ಸಂಪಾದಕೀಯದಲ್ಲಿ ತಿಳಿಸಿದಂತೆ, ಸಮಕಾಲೀನ ಧರ್ಮವೇ ಆಗಬಯಸುವ ಸಮಾಜವಾದ. ಹಾಗಾಗಿ ಅದೆಂದೂ ಕುರುಡಾಗದು.

ಆದರೆ, ಸಮಾಜವಾದ ಎಂದರೇ, ರಾಜಕಾರಣ ಎಂದರೇ ಸಂಕೋಚ ಪಡುವ ಜನ ಇಷ್ಟಪಡಬಹುದಾದ ಪತ್ರಿಕೆ ನಮ್ಮದೆಂದು ನಾನು ಹೇಳಲಾರೆ. ಹಾಗೇ ನಾವು ಬಹುವಾಗಿ ಗೌರವಿಸುವ ಸಮಾಜವಾದಿ ಚಳುವಳಿಯ ನಾಯಕರನ್ನು ವ್ಯಕ್ತಿಗತವಾಗಿ ಅವಹೇಳನ ಮಾಡುವುದನ್ನೇ ಒಂದು ಉದ್ಯೋಗ ಮಾಡಿಕೊಂಡಿರುವವರಿಂದಲೂ ನಮ್ಮ ಪತ್ರಿಕೆ ದೂರವಿರಬಯಸುತ್ತದೆ. ನೀವು ಮಾರ್ಕ್ಸ್ ಬಗ್ಗೆ ಬರೆಯುವುದಿಲ್ಲ;ಮಾವೋ ಬಗ್ಗೆ ಬರೆಯುವುದಿಲ್ಲ;ಲೆನಿನ್ ಬಗ್ಗೆ ಬರೆಯುವುದಿಲ್ಲ; ಕ್ಯೂಬಾದ ಬಗ್ಗೆ ಬರೆಯುವುದಿಲ್ಲ; ನಮ್ಮ ತ್ರಿಪುರ ಮುಖ್ಯ ಮಂತ್ರಿ ಬಗ್ಗೆ ಬರೆಯುವುದಿಲ್ಲ; ಲ್ಯಾಟಿನ್ ಅಮೆರಿಕಾದಲ್ಲಿ, ಆಫ್ರಿಕಾದಲ್ಲಿ ನಡೆದಿರುವ ಮಾರ್ಕ್ಸ್‌ವಾದಿ ಹೋರಾಟಗಳ ಬಗ್ಗೆ ಬರೆಯುವುದಿಲ್ಲ ಎಂದು ನನ್ನೊಬ್ಬ ಗೆಳೆಯರು ಮೊನ್ನೆ ದೂರಿದರು. ನಾನು ಹೇಳಿದೆ: ಅವಕ್ಕೆಲ್ಲ ನಿಮ್ಮದೇ ಆದ ಪತ್ರಿಕೆಗಳಿವೆಯಲ್ಲ! ನಾವು ನಮಗೆ ನಂಬಿಕೆ ಇರುವ, ನಮ್ಮ ತಾತ್ವಿಕ ಗ್ರಹಿಕೆಯ ತೆಕ್ಕೆಗೆ ಒಗ್ಗುವ ವಿಷಯಗಳಿಗಷ್ಟೇ ಸೀಮಿತ. ಹಾಗೆಂದು ನಾವು ಈ ವಿಷಯಗಳ ಬಗ್ಗೆ ಬರೆಯದೇ ಇಲ್ಲ. ಸಾಂದರ್ಭಿಕವಾಗಿ ಬರೆದೇ ಇದ್ದೇವೆ.

ಇರಲಿ. ಈ ನಮ್ಮ ಮನೆಯ ಮಾತು ಮುಗಿಸುವ ಮುನ್ನ, ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕಾದ ಹಲವರಿದ್ದಾರೆ. ದಕ್ಷಿಣದ ಚಾಮರಾಜನಗರದ ಅಪೂರ್ವ






ಟಿ.ಎಲ್.ರೇಖಾಂಬ ಎಂ.ರಾಜು ನಿಸಾರ್ ಅಹಮದ್ ಶೇಖರ್ ಗೌಳೇರ್

ಡಿ'ಸಿಲ್ವರಿಂದ ಹಿಡಿದು ಬೆಂಗಳೂರಿನ ಪ್ರೊ. ಜಿ.ಬಿ. ಶಿವರಾಜು ಮತ್ತು ರುದ್ರಪ್ಪ ಹನಗವಾಡಿ, ತಿಪಟೂರಿನ ಕ್ಯಾ. ಹರಿಪ್ರಸಾದ್, ಹಾಸನದ ಬಿ. ಶಿವಕುಮಾರ್, ದಾವಣಗೆರೆಯ ಡಿ.ಜಿ.ಪುಟ್ಟರಾಜು, ಹೆಗ್ಗೋಡಿನ ಎನ್.ಎಂ. ಕುಲಕರ್ಣಿ, ಧಾರವಾಡದ ಬಿ.ವಿ. ಸುರೇಂದ್ರ ಮತ್ತು ಉತ್ತರದ ರಾಮದುರ್ಗದ ಹಸನ್ ನಯೀಂ ಸುರಕೋಡರವರೆಗೆ- ಇವರೆಲ್ಲ, ಇದು ತಮ್ಮದೇ ಪತ್ರಿಕೆ ಎಂಬಂತೆ ಚಂದಾದಾರರನ್ನು ಒಗ್ಗೂಡಿಸಿ ಕೊಡುತ್ತಿದ್ದಾರೆ;ಜಾಹೀರಾತು ಕ್ರೋಢೀಕರಿಸಿ ನೀಡಿದ್ದಾರೆ. ಇವರನ್ನು ಪತ್ರಿಕೆ ಕೃತಜ್ಞತೆಯಿಂದ ನೆನೆಯುತ್ತದೆ. ಇವರಲ್ಲದೆ, ಶಿವಮೊಗ್ಗದಲ್ಲಿ ನಮ್ಮ *ಬಳಗ* ಒಂದಿದೆ. ನನ್ನ ಪತ್ನಿ ಸವಿತಾ ಅಲ್ಲದೆ, ಗೆಳೆಯರಾದ ಎಂ. ರಾಜು, ಟಿ.ಎಲ್.ರೇಖಾಂಬ, ನಿಸಾರ್ ಅಹಮದ್ ಮತ್ತು ಶೇಖರ್ ಗೌಳೇರ್‌ರನ್ನೊಳಗೊಂಡ ಈ ಬಳಗ ಪ್ರತಿ ತಿಂಗಳು ಪತ್ರಿಕೆ ಬಂದೊಡನೆ ಅವುಗಳಿಗೆ ವಿಳಾಸ ಪಟ್ಟಿ-ಅಂಚೆ ಚೀಟಿ ಅಂಟಿಸಿ, ಪಿನ್ ಮಾಡಿ ಅಂಚೆಗೆ ಹೋಗುವವರೆಗೆ ನಮ್ಮೊಡನೆ ಸಹಕರಿಸುತ್ತಾರೆ. ಈ ನಮ್ಮ ಬಳಗವನ್ನೂ ಇಲ್ಲಿ ನೆನೆಯಬೇಕು!

ಈ ಸಂದರ್ಭದಲ್ಲಿ ಹಂಚಿಕೊಳ್ಳಬಹುದಾದ ಇನ್ನೊಂದು ಖುಷಿಯ ಸಂಗತಿ ಎಂದರೆ, ಹೋದ ವರ್ಷದಂತೆ ಈ ವರ್ಷವೂ ನಮ್ಮ ವಿಶೇಷಾಂಕದ ಲೇಖಕರೆಲ್ಲರಿಗೂ ಯಥಾ ಶಕ್ತಿ ಗೌರವಧನ ನೀಡಿದ್ದೇವೆ. ಹೀಗೆ ನಾವು ನೀಡಿರುವ ಗೌರವ ಧನ ಸುಮಾರು ಐವತ್ತು ಸಾವಿರ ರೂಪಾಯಿಗಳು. ಇದೊಂದು ನಮಗೆ ಹೆಮ್ಮೆಯ ವಿಚಾರ. ಇದು ಸಾಧ್ಯಮಾಡಿರುವವರು ನಮ್ಮ ವಿಶೇಷಾಂಕಕ್ಕೆ ಉದಾರವಾಗಿ ಜಾಹೀರಾತು ನೀಡಿದ ಮಿತ್ರರು ಮತ್ತು ಅವನ್ನು ಒದಗಿಸಿಕೊಟ್ಟ ಪತ್ರಿಕೆಯ ಅಭಿಮಾನಿ ಓದುಗರು. ಅವರಿಗೆಲ್ಲ ನಮ್ಮ ನಿಮ್ಮೆಲ್ಲರ ಕೃತಜ್ಞತೆಗಳು ಸಲ್ಲಬೇಕು.

*** *** ***

ಮೋದಿಯವರ ಅಚ್ಚೇ ದಿನಗಳು ಈ ಬಾರಿಯ ಮುಂಗಾರಿನ ಮೋಡಗಳಂತೆಯೇ ನಮ್ಮಿಂದ ದೂರವಾಗಿಯೇ ಉಳಿದುಬಿಟ್ಟಿವೆ. ರೈತರು ಸಾಯುತ್ತಿದ್ದಾರೆ, ಬೆಲೆಗಳು ಏರುತ್ತಿವೆ, ಅವರ ಮಂತ್ರಿ-ಮುಖ್ಯಮಂತ್ರಿಗಳು ವಿವಿಧ ಹಗರಣಗಳಲ್ಲಿ ಸಿಕ್ಕಿಕೊಂಡುದನ್ನು ಕಂಡು ಜನ ಛೀ ಎನ್ನುತ್ತಿದ್ದಾರೆ. ಆದರೆ ನಮ್ಮ ಧೀರ ಪ್ರಧಾನ ಮಂತ್ರಿಯವರು ಇದರ ಯಾವುದೇ ನೆದರಿಲ್ಲದೆ ಒಂದಾದರಮೇಲೊಂದರಂತೆ ವಿದೇಶ ಯಾತ್ರೆಗಳಲ್ಲೇ ಮುಳುಗಿ ಹೋಗಿದ್ದಾರೆ. ಆಗಾಗ ದೇಶದೊಳಕ್ಕೂ ಬಂದು, ಸಾರ್ವಜನಿಕ ಭಾಷಣಗಳೆಂಬ ಅರಚಾಟಗಳಲ್ಲಿ ತೊಡಗುತ್ತಾರೆ. ಇದನ್ನು ನಮ್ಮ ಮಾಧ್ಯಮಗಳು ಅಪ್ರತಿಮ ಸಾರ್ವಜನಿಕ ವಾಕ್ಚಾತುರ್ಯ ಎಂದು ಬಣ್ಣಿಸುತ್ತವೆ. ಸದ್ಯಕ್ಕೆ ಸರ್ಕಾರ ತನ್ನದೇ ಸರ್ವಜ್ಞ ಗರ್ವದಲ್ಲಿ ಮುಳುಗಿದ ಭಂಡ ಸರ್ಕಾರವೆನಿಸುತ್ತದೆ. ಇಲ್ಲದಿದ್ದರೆ, ಲಲಿತ್

ಮೋದಿ ದುರ್ವ್ಯವಹಾರಗಳಿಗೆ ಸಂಬಂಧಿಸಿದಂತೆ ಇವರ ಸುಷ್ಮಾ, ವಸುಂಧರಾ ರಾಜೇ ಮತ್ತು ಬೃಹತ್ ಭ್ರಷ್ಟಾಚಾರ ಮತ್ತು ಹತ್ಯೆಗಳನ್ನೊಳಗೊಂಡ *ವ್ಯಾಪಂ* ಹಗರಣದ ಶಿವರಾಜ್ ಚೌಹಾಣ್‌ರನ್ನು ಯಾವತ್ತೋ ಮನೆಗೆ ಕಳಿಸಬೇಕಿತ್ತು. ಬಿಹಾರ ಚುನಾವಣೆಯ ಕಾರಣದಿಂದ–ತಮ್ಮದು ಕಳಂಕರಹಿತ ಸರ್ಕಾರ ಎಂದು ಹೇಳಿಕೊಳ್ಳಲು ಅನುವಾಗುವಂತೆ–ಇದನ್ನು ತಡೆಹಿಡಿಯಲಾಗಿದೆಯಂತೆ! ಇವರು ಜನರನ್ನು ಏನೆಂದು ತಿಳಿದುಕೊಂಡಿದ್ದಾರೋ ತಿಳಿಯದು! ಪ್ರಧಾನಿ ಮೋದಿಯವರನ್ನು ನೋಡಿ; ಸರ್ಕಾರದ ಮುಖ್ಯಸ್ಥನಾಗಿ ಇಡೀ ಸಂಸತ್ ಕಲಾಪದಲ್ಲಿ ಕಾಣೆಯಾಗಿದ್ದ ಇವರು, ಬಿಹಾರ ಚುನಾವಣಾ ಪ್ರಚಾರ ಸಭೆಯಲ್ಲಿ ದಿಢೀರನೆ ಕಾಣಿಸಿಕೊಂಡಿದ್ದಾರೆ. ಅದೂ ಹೇಗೆ? ಒಬ್ಬ ಹರಾಜು ಕೂಗುವ ಮನುಷ್ಯನಂತೆ. ಮೊನ್ನೆ ಅವರು ಯಾವುದೇ ಎಗ್ಗಿಲ್ಲದೆ–ತಾನು ದೇಶದ ಪ್ರಧಾನಿ ಎಂಬುದನ್ನೂ ಮರೆತಂತೆ–ಇಷ್ಟು ದಿನ ಮೀನ ಮೇಷ ಎಣಿಸಿ ಈಗ ಚುನಾವಣಾ ಸಭೆಯೊಂದರಲ್ಲಿ ಬಿಹಾರಕ್ಕೆ ವಿಶೇಷ ಪ್ಯಾಕೇಜೊಂದನ್ನು, ಎಷ್ಟು ಹೇಳಿ? ಹತ್ತು ಸಾವಿರ ಕೋಟಿ? ಇಪ್ಪತ್ತು ಸಾವಿರ ಕೋಟಿ? ಐವ್ವತ್ತು ಸಾವಿರ ಕೋಟಿ? ಒಂದು ಲಕ್ಷ ಕೋಟಿ? ಎಂದು ಜನರನ್ನು ಕೇಳುತ್ತಾ, ಅವರ ಕುತೂಹಲ ಕೆರಳಿಸುತ್ತಾ, ಅಲ್ಲಲ್ಲ ಒಂದೂ ಕಾಲು ಲಕ್ಷ ಕೋಟಿ ರೂಪಾಯಿಗಳ ಪ್ಯಾಕೇಜ್! ಎಂದು ಕೂಗಿ ಹೇಳಿ ಜನರ ಚಪ್ಪಾಳೆ ಗಿಟ್ಟಿಸಿದ್ದಾರೆ. ಇದೇನು ಮೋದಿಯವರು ತಮ್ಮ ಸಂಪಾದನೆಯಿಂದ ಕೊಡುತ್ತಿರುವ ಪ್ಯಾಕೇಜೇ? ಪ್ರಧಾನ ಮಂತ್ರಿಯೊಬ್ಬರು ಈ ಮಟ್ಟಕ್ಕೆ ಇಳಿಯಬಾರದು. ಬಿಹಾರದ ಜನ ಇದಕ್ಕೆಲ್ಲ ಹೇಗೆ ಉತ್ತರ ಕೊಡುತ್ತಾರೋ ಕಾದು ನೋಡಬೇಕು.

ಇನ್ನು ಲೋಕಸಭೆಯಲ್ಲಿ ಸುಷ್ಮಾ ಸ್ವರಾಜ್ ಇಳಿದ ಮಟ್ಟ ನೋಡಿ. ಅವರು ಲಲಿತ್ ಮೋದಿ ಪ್ರಕರಣದಲ್ಲಿ ತಮ್ಮ ಹಸ್ತಕ್ಷೇಪವನ್ನು ಸಮರ್ಥಿಸಿಕೊಳ್ಳಲು ರಾಹುಲ್ ಗಾಂಧಿಗೆ ಕೇಳಿದ ಪ್ರಶ್ನೆಗಳನ್ನು ನೋಡಿ: ಭೂಪಾಲ್ ವಿಷಾನಿಲ ದುರಂತದ ಅಪರಾಧಿ ಆಂಡರ್ಸನ್ನನ್ನು ಭಾರತದಿಂದ ತಪ್ಪಿಸಿಕೊಂಡು ಹೋಗಲು ಸಹಾಯ ಮಾಡಿದವರು ನಿಮ್ಮ ತಂದೆ ರಾಜೀವ್ ಗಾಂಧಿ ಅಲ್ಲವೆ? ಬೋಫರ್ಸ್ ಹಗರಣದಲ್ಲಿ ಕ್ವಟ್ರೋಚಿ ತಪ್ಪಿಸಿಕೊಳ್ಳಲು ಆತ ನಿಮ್ಮಮ್ಮನಿಗೆ ಎಷ್ಟು ಹಣ ನೀಡಿದ ಎಂದು ಕೇಳಿ ನೋಡು! ಅವರ ಇನ್ನೊಂದು ಕುಟುಕು: ಈ ದೇಶದ ಎಲ್ಲರೂ ಗಾಂಧಿ ಕುಟುಂಬದವರಂತೆ ಸುಮ್ಮನೆ ಕೂತು ಉಣ್ಣುವವರಲ್ಲ! ಆಶ್ಚರ್ಯವೆಂದರೆ, ರಾಹುಲರಾಗಲೀ ಅಥವಾ ಆತನ ತಾಯಿಯಾಗಲೀ ಇದಕ್ಕೆಲ್ಲ ತುಟಕ್‌ಪಿಟಕ್ ಎನ್ನದೇ ಕೂತದ್ದು! ಇದೆಲ್ಲ ಏನನ್ನು ಸೂಚಿಸುತ್ತದೆ? ದೇಶವೀಗ ಒಂದು ಭಂಡ ಸರ್ಕಾರ ಮತ್ತು ಒಂದು ಭಂಡ ವಿರೋಧ ಪಕ್ಷದ ನಡುವೆ ಸಿಲುಕಿಕೊಂಡುಬಿಟ್ಟಿದೆ! ಇದರಿಂದ ದೇಶ ಪಾರಾಗುವುದಾದರೂ ಹೇಗೆ? ಭರವಸೆಯ ನಿತೀಶ್ ಕುಮಾರ್ ಬೇರೆ ಮೋದಿ ಬಲವನ್ನು ಎದುರಿಸಲು ಮತ್ತೆ ಲಾಲೂ ಜೊತೆ ಕೈಜೋಡಿಸಿದ್ದಾರೆ. ಪಕ್ಕದಲ್ಲಿ ಅಪಾಯಕಾರಿ ಮುಲಾಯಂ ಕೂಡ ಇದ್ದಾರೆ! ನಿಜವಾಗಿಯೂ ಭಯವಾಗುತ್ತದೆ.

ಈ ಭಯ ಹೆಚ್ಚಾಗುತ್ತಾ ಹೋಗುವುದು ಮೋದಿ ಸರ್ಕಾರ ಜನತೆಯ ಹಕ್ಕುಗಳನ್ನು ದಮನಗೊಳಿಸಲು ಯತ್ನಿಸುತ್ತಿರುವ ಪರಿಯನ್ನು ನೋಡಿದಾಗ. ಹುಸಿ ಎನ್‌ಕೌಂಟರ್ ಪ್ರಕರಣದಲ್ಲಿ ಸಿಬಿಐ ವಾದವನ್ನು ದುರ್ಬಲವಾಗುವಂತೆ ನೋಡಿಕೊಂಡು ಬಿಜೆಪಿ ಅಧ್ಯಕ್ಷ ಅಮಿತ್ ಶಾರನ್ನು ಪಾರು ಮಾಡಿದ ಸರ್ಕಾರ, ಸಿ.ಬಿ.ಐ.ಗೆ ಈಗ ಮೋದಿ ಕಾಲದ ಗುಜರಾತ್ ಪೋಲೀಸ್ ಅಧಿಕಾರಿಗಳನ್ನು ತುಂಬತೊಡಗಿದೆ ಎಂಬ ಸುದ್ದಿ ಇದೆ. ಗುಜರಾತ್ ಹತ್ಯಾಕಾಂಡದ ವಿರುದ್ಧ ಯಶಸ್ವಿಯಾಗಿ ಹೋರಾಟ ನಡೆಸಿರುವ ತೀಸ್ತಾ ಸೆಟ್ಲ್‌ವಾಡ್‌ರ ವಿರುದ್ಧ ಸಿಬಿಐನ್ನು ಛೂಬಿಟ್ಟು ಇವರ ಬಂಧನಕ್ಕೆ ಹರಸಾಹಸ ನಡೆಸಿದೆ. ರಾಷ್ಟ್ರದ ವಿವಿಧ ಉನ್ನತ ಅಧ್ಯಯನ ಮತ್ತು ವೃತ್ತಿ ತರಬೇತಿ ಸಂಸ್ಥೆಗಳಿಗೆ ಆರೆಸ್ಸೆಸ್ ಹಿನ್ನೆಲೆಯ ಜನರನ್ನು ತುಂಬತೊಡಗಿ ಅವನ್ನು ರಾಜಕೀಯಗೊಳಿಸುತ್ತಿರುವುದಲ್ಲದೆ, ಅವುಗಳ ಗುಣಮಟ್ಟವನ್ನೂ ಹಾಳುಮಾಡತೊಡಗಿದೆ. ಪುಣೆ ಚಲಚಿತ್ರ ಸಂಸ್ಥೆಯಲ್ಲಿ ಎರಡು ತಿಂಗಳುಗಳಿಂದ ನಡೆದಿರುವ ಪ್ರತಿಭಟನೆಯೇ ಇದಕ್ಕೆ ಸಾಕ್ಷಿ. ಇನ್ನು ಮುಂಬೈ ಬಾಂಬ್ ಸ್ಫೋಟಗಳ ಅಪರಾಧಿಗಳಲ್ಲೊಬ್ಬರಾದ ಯಾಕೂಬ್ ಮೆಮೊನ್‌ನನ್ನು ಗಲ್ಲಿಗೇರಿಸಿದ ಸಂದರ್ಭದಲ್ಲಿನ ಚರ್ಚೆಗಳು 'ಮಿತಿ' ಮೀರಿದ್ದವೆಂದು ಎರಡು ಮೂರು ಟಿವಿ ವಾಹಿನಿಗಳಿಗೆ ನೋಟೀಸ್ ನೀಡಲಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರ ರಕ್ಷಣೆಯ ಕಾನೂನುಗಳನ್ನು ದುರ್ಬಲಗೊಳಿಸಿ ಪರಿಸರ ಸಂರಕ್ಷಣಾ ಸಂಸ್ಥೆಗಳನ್ನು ರಾಷ್ಟ್ರವಿರೋಧಿ ಎಂದು ಕರೆದು ಅವುಗಳಿಗೆ ಕಿರುಕುಳ ನೀಡಲಾಗುತ್ತಿದೆ. ಇವೆಲ್ಲಕ್ಕೆ ಕಳಸವಿಟ್ಟಂತೆ ಈ ಸರ್ಕಾರದ ಅಡ್ವೋಕೇಟ್ ಜನರಲ್ ಸರ್ವೋಚ್ಚ ನ್ಯಾಯಾಲಯದ ಮುಂದೆ ಈ ದೇಶದ ಪ್ರಜೆಗಳಿಗೆ ಯಾವುದೇ ಖಾಸಗಿತನದ ಹಕ್ಕಿಲ್ಲ ಎಂದು ಘೋಷಿಸಿಬಿಟ್ಟಿದ್ದಾರೆ. ಈ ಗಾಯದ ಮೇಲೆ ಉಪ್ಪು ಸುರಿದಂತೆ ಸರ್ಕಾರ ಲೋಕಸಭೆಯಲ್ಲಿ ಪ್ರಜೆಗಳ ವಂಶವಾಹಿನಿ(ಡಿಎನ್‌ಎ) ಮಾಹಿತಿಯನ್ನು ತನ್ನ ಹಕ್ಕಿನ ಆಸ್ತಿ ಮಾಡಿಕೊಳ್ಳುವ ಮಸೂದೆಯೊಂದನ್ನು ಮಂಡಿಸಿದೆ! ಇದರರ್ಥ ಏನು ಗೊತ್ತೆ? ನಾವೆಲ್ಲ–ನಮ್ಮ ಅಧ್ಯಾತ್ಮಿಕ ಅಸ್ತಿತ್ವವೂ ಸೇರಿದಂತೆ–ಸರ್ಕಾರದ ಆಸ್ತಿ. ಸರ್ಕಾರದ ಪೋಲೀಸ್‌ಗಿರಿಯಡಿಯಲ್ಲಿಯೇ ಸದಾ ಬದುಕಬೇಕಾಗುತ್ತದೆ. ರಾಷ್ಟ್ರ–ರಾಷ್ಟ್ರೀಯತೆಗಳೆಂಬುವವು ಇದಕ್ಕಿಂತ ಹೆಚ್ಚು ರಾಕ್ಷಸೀಯವಾಗಲಾರವು.

ಆದರೆ ಹೀಗೆ ರಾಕ್ಷಸೀಯವಾಗಿ ಬೆಳೆಯುತ್ತಿರುವ ರಾಷ್ಟ್ರ ಪ್ರಭುತ್ವವನ್ನು ನಿಯಂತ್ರಿಸಬಲ್ಲ ನೈತಿಕ ಶಕ್ತಿಯಾಗಲೀ, ರಾಜಕೀಯ ಶಕ್ತಿಯಾಗಲೀ ಇರುವ ರಾಜಕೀಯ ಪಕ್ಷವೇ ನಮ್ಮಲ್ಲೀಗ ಇಲ್ಲದಾಗಿದೆ. ಸಿದ್ಧರಾಮಯ್ಯನವರು ಈಗ ದೇವರಾಜ್ ಅರಸರ ಜನ್ಮಶತಾಬ್ಧಿ ಆಚರಿಸಿ ಸಾಮಾಜಿಕ ನ್ಯಾಯದ ಇನ್ನಷ್ಟು ಪಾಠಗಳನ್ನು ಕಲಿತು ಇನ್ನಷ್ಟು ಮಹಾನಗರಪಾಲಿಕೆ ಚುನಾವಣೆಗಳನ್ನು ಸೋಲಲಿದ್ದಾರೆ. (ಅರಸ್ ರಾಜಕಾರಣದಿಂದ ಕಲಿಯಬೇಕಾದ ಧೀರ ಮತ್ತು ಘನತೆಯ ರಾಜಕೀಯ ಪಾಠಗಳು ಬೇರೆಯೂ ಇವೆ ಎಂಬುದನ್ನು ಅವರಿಗೆ ಯಾರಾದರೂ ಹೇಳಬೇಕಿದೆ)

ಇನ್ನು ನಮ್ಮ ಗೆಳೆಯರ ಪರ್ಯಾಯ ರಾಜಕಾರಣದ ಪ್ರಯತ್ನಗಳೆಲ್ಲ ಮಕ್ಕಳ ಆಟದ ಮಟ್ಟಕ್ಕೆ ಇಳಿದು ಹಾಸ್ಯಾಸ್ಪದವಾಗುತ್ತಿವೆ. ತಮ್ಮ ಜಾಣ ಮಾತುಗಳು ಯಾರನ್ನೂ ಏನನ್ನೂ ಒಗ್ಗೂಡಿಸಲಾರವು ಎಂದು ಈ ಹಳೆಯ ಗಿರಾಕಿಗಳಿಗೆ ಇನ್ನೂ ಅರ್ಥವಾಗದಿರುವುದು ಆಶ್ಚರ್ಯ. ಈಗ ನಾವು ಎತ್ತನೋಡಬೇಕೆಂಬುದೇ ಗೊತ್ತಾಗದಾಗಿದೆ! ನಿಮಗೇನಾದರೂ ತೋಚುತ್ತಿದ್ದರೆ ಹೇಳಿ.

**–ಸಂಪಾದಕ**

## ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ(ರಿ.), ಶಿವಮೊಗ್ಗ

## ಸಮಾಜವಾದಿ ಅಧ್ಯಯನ ಶಿಬಿರ–2015

**ನಮ್ಮ ಪ್ರತಿಷ್ಠಾನವು ಪ್ರತಿವರ್ಷದಂತೆ ಈ ವರ್ಷವೂ ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ ಸಮಾಜವಾದಿ ಅಧ್ಯಯನ ಶಿಬಿರವೊಂದನ್ನು ಆಯೋಜಿಸುತ್ತಿದ್ದು, ಅದು ಈ ವರ್ಷ ಅಕ್ಟೋಬರ್ 17 ಹಾಗೂ 18ರಂದು(ಶನಿವಾರ ಮತ್ತು ಭಾನುವಾರ) ಕುಪ್ಪಳ್ಳಿಯ ಕುವೆಂಪು ಜನ್ಮಶತಮಾನೋತ್ಸವ ಭವನದಲ್ಲಿ ನಡೆಯಲಿದೆ. ಈ ಬಾರಿಯ ಶಿಬಿರದ ವಿಷಯ: 'ಸಮಾಜವಾದ ಮತ್ತು ಆಧುನಿಕ ಕನ್ನಡ ಸಾಹಿತ್ಯ'. ಈ ಶಿಬಿರದಲ್ಲಿ ಕುವೆಂಪು, ಯು.ಆರ್. ಅನಂತಮೂರ್ತಿ, ಪಿ.ಲಂಕೇಶ್, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಮುಖ್ಯ ಕೃತಿಗಳನ್ನು ಸಮಾಜವಾದಿ ಆಶಯಗಳ ಹಿನ್ನೆಲೆಯಲ್ಲಿ ಅಭ್ಯಾಸ ಮಾಡುವ ಪ್ರಯತ್ನ ಮಾಡಲಾಗುವುದು. ಕನ್ನಡದ ಮುಖ್ಯ ಚಿಂತಕರು ಸಂಪನ್ಮೂಲ ವ್ಯಕ್ತಿಗಳಾಗಿ ಅಗಮಿಸಿ ಚರ್ಚೆಗಳನ್ನು ನಡೆಸಿಕೊಡುವರು.**

**ಆಸಕ್ತರು ಮತ್ತು ಎರಡೂ ದಿನ ಪೂರ್ತಿ ಶಿಬಿರದಲ್ಲಿ ಭಾಗವಹಿಸಲು ಸಾಧ್ಯವಿದ್ದವರು ಶಿಬಿರಾರ್ಥಿಗಳಾಗಿ ಬರಲು ತಮ್ಮ ಹೆಸರನ್ನು ಆದಷ್ಟು ಬೇಗ ನೊಂದಾಯಿಸಿಕೊಳ್ಳಬೇಕು. ಶಿಬಿರದಲ್ಲಿ ವಸತಿ ವ್ಯವಸ್ಥೆ ಸೀಮಿತವಾಗಿರುವುದರಿಂದ ಅಗತ್ಯ ಸಂಖ್ಯೆಯ ಶಿಬಿರಾರ್ಥಿಗಳ ನೊಂದಾವಣೆ ಆದ ಕೂಡಲೆ ನೊಂದಾವಣೆಯನ್ನು ನಿಲ್ಲಿಸಲಾಗುವುದು. ಪ್ರತಿ ಶಿಬಿರಾರ್ಥಿಗೆ ಶಿಬಿರ ಶುಲ್ಕ ರೂ. 250/–, ವಿದ್ಯಾರ್ಥಿಗಳಿಗೆ ರೂ. 150/–. ಶಿಬಿರಾರ್ಥಿಗಳಿಗೆ ಎರಡೂ ದಿನ ಊಟ–ಉಪಹಾರ ಮತ್ತು ಸಾಮೂಹಿಕ ವಸತಿ ವ್ಯವಸ್ಥೆ ಮಾಡಲಾಗುವುದು. ಶಿಬಿರಾರ್ಥಿಗಳು ತಮ್ಮೊಂದಿಗೆ ಒಂದು ಹೊದಿಕೆ ಮತ್ತು ಟಾರ್ಚನ್ನು ತಂದರೆ ಒಳ್ಳೆಯದು.**

**ನೋಂದಣಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು: , 9448238638, 9535651553, 9481351079**

**ಅಧ್ಯಕ್ಷರು:** ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ

## ನಮ್ಮ ಸಮಾಜವಾದಿಗಳು

# ಸಮಾಜವಾದದ ಬೀಜಾಂಕುರದ ಆ ದಿನಗಳು

**ಕಳೆದ ತಿಂಗಳು ಮುಂಬೈನಲ್ಲಿ ಸದ್ದಿಲ್ಲದೆ ಚಿರನಿದ್ರೆಗೆ ಜಾರಿದ, ಕರ್ನಾಟಕದಲ್ಲಿ ಸಮಾಜವಾದಿ ಪಕ್ಷ ಮತ್ತು ಆಂದೋಲನದ ಅಡಿಗಲ್ಲು ಹಾಕಿದವರಲ್ಲಿ ಮುಂಚೂಣಿಯಲ್ಲಿದ್ದ ಕೋಣಿ ಸದಾಶಿವ ಕಾರಂತರ ೮೦ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರ ಗೆಳೆಯ ಅಮ್ಮೆಂಬಳ ಆನಂದರು ಬರೆದಿದ್ದ ಲೇಖನವನ್ನು, ಕಾರಂತರೊಂದಿಗೆ ಆ ಸಾಹಸದಲ್ಲಿ ಯಾರೆಲ್ಲ ಕೈಜೋಡಿಸಿದ್ದರೆಂಬ ಅಪರೂಪದ ಮಾಹಿತಿ ನೀಡುವುದರಿಂದ ಅದನ್ನು ಇಲ್ಲಿ ಅದರ ಐತಿಹಾಸಿಕ ಮಹತ್ವಕ್ಕಾಗಿ ಸಂಪಾದಿಸಿ ಪ್ರಕಟಿಸುತ್ತಿದ್ದೇವೆ–ಸಂ**

೬೦ ವರ್ಷಗಳ ಹಿಂದೆ ಕರ್ನಾಟಕದಲ್ಲಿ ಸಮಾಜವಾದೀ ತತ್ತ್ವವನ್ನು ಮುಂದಿಟ್ಟುಕೊಂಡು ಆಂಗ್ಲ ಪ್ರಭುತ್ವ ಮತ್ತು ಅಂದಿನ ಸಾಮಾಜಿಕ ವ್ಯವಸ್ಥೆಯ ವಿರುದ್ಧದ ಹೋರಾಟದ ಬೀಜಾಂಕುರ ಮಾಡಿ ಸೆಣಸಿದ ಸಮಾಜವಾದಿ ಕೆ.ಎಸ್.ಕಾರಂತರನ್ನು ಅವರ ಎಂಬತ್ತನೇ ವರ್ಷದ ಜನ್ಮೋತ್ಸವ ಸಂದರ್ಭದಲ್ಲಿ ನೆನೆಯುವುದು ಯುವಜನರಲ್ಲಿ 'ಸಮಾಜವಾದ'ದ ಚೇತನ ಮೂಡಿಸುವುದೆಂಬ ಭಾವನೆ ನನ್ನದು.

ಸಮಾಜವಾದಿ ಕಾರಂತ ಎಂದೇ ಗುರುತಿಸಲಾದ ಕೆ.ಎಸ್. ಕಾರಂತರು ಈಗ ಮುಂಬಯಿ ನಿವಾಸಿ. ಅಂದು ಅವರು ಹುಬ್ಬಳ್ಳಿ–ಧಾರವಾಡ ನಗರಿಗಳಲ್ಲಿ ಸೋಶಲಿಸ್ಟ್ ಕಾರಂತರು ಎಂದೇ ಜನಜನಿತರಿದ್ದರು.

ಸದಾಶಿವ ಕಾರಂತರ ಊರು ಕುಂದಾಪುರ ತಾಲ್ಲೂಕಿನ ಕೋಣಿ ಎಂಬ ಒಂದು ಕುಗ್ರಾಮ. ೧೯೪೨ರ ಚಲೇಜಾವ್ ಆಂದೋಲನದಲ್ಲಿ ವಿದ್ಯಾರ್ಥಿ ನಾಯಕನಾಗಿ ಭಾಗವಹಿಸಿ ಆರು ತಿಂಗಳ ಸೆರೆಮನೆ ವಾಸ ಅನುಭವಿಸಿ ಹೊರಬಿದ್ದ ಕಾರಂತರ ಮೇಲೆ ಮಾರ್ಕ್ಸ್‌ವಾದದ ಪ್ರಭಾವ ಬಿದ್ದಿತ್ತು. ಆಗ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಎಡಪಂಥೀಯರದ್ದೇ ಒಂದು ವಿಭಾಗವಿತ್ತು. ಅದು ಅಖಿಲ ಭಾರತ ನೆಲೆಯಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷ ಎಂಬ ಹೆಸರಿನಡಿಯಲ್ಲಿ ಕೆಲಸ ಮಾಡುತ್ತಿತ್ತು. ೧೯೩೪ರಲ್ಲಿ ಆಚಾರ್ಯ ನರೇಂದ್ರದೇವ ಅವರ ಆಶೀರ್ವಾದದೊಂದಿಗೆ ನಾಸಿಕ ಜೈಲಿನಲ್ಲಿ ಹುಟ್ಟಿಕೊಂಡ ಈ ಪಕ್ಷದ ಆಧಾರ ಸ್ತಂಭಗಳೆಂದರೆ ಯುವಕರು. ಆಗ ಪ್ರಬಲವಾಗಿದ್ದ ವಿದ್ಯಾರ್ಥಿ ಕಾಂಗ್ರೆಸ್ ಮತ್ತು ರಾಷ್ಟ್ರಸೇವಾದಳ.

ಕಾರಂತ ಒಬ್ಬ ವಿದ್ಯಾರ್ಥಿ ನಾಯಕನಾಗಿ ವಿದ್ಯಾರ್ಥಿ ಕಾಂಗ್ರೆಸ್ಸಿನಲ್ಲಿ ಮಿಂಚಿದ್ದವರು. ಇಂಥ ವಿದ್ಯಾರ್ಥಿ ಪುಡಾರಿಗಳು ಆಗ ರಾಜ್ಯದ ಎಲ್ಲೆಡೆ ಹರಡಿಕೊಂಡಿದ್ದರು. ಇಂಥವರನ್ನೆಲ್ಲ ತಮ್ಮ ತೆಕ್ಕೆಯಲ್ಲಿ ತಂದುಕೊಂಡು ಕೆ.ಎಸ್. ಕಾರಂತರು ೧೯೪೬ರಲ್ಲಿ ಗದುಗಿನಲ್ಲಿ ಅಂದು ತುಂಬ ಪ್ರಸಿದ್ಧಿಗೊಳಗಾದ ವಾಮಪಂಥೀಯರ ಸಮ್ಮೇಳನವನ್ನು ಯಶಸ್ವಿಯಾಗಿ ಸಂಘಟಿಸಿದ್ದರು. ಈ ಎಡಪಂಥೀಯ ಮಹಾಸಮ್ಮೇಳನದಿಂದ ಕನ್ನಡನಾಡಿನಲ್ಲಿ ಸಮಾಜವಾದಿ ಆಂದೋಲನದ ಬೀಜಾಂಕುರವಾಯಿತು ಎಂದು ಹೇಳಬಹುದು. ಈ ಸಮ್ಮೇಳನದಲ್ಲಿ ಭಾಗವಹಿಸಿದ ರಾಷ್ಟ್ರ ನಾಯಕರುಗಳಾದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ, ಅಶೋಕ ಮೆಹತಾ ಮುಂತಾದವರ ಕಣ್ಣುಗಳಲ್ಲಿ ಸದಾಶಿವ ಕಾರಂತರೇ ಅಂದು ತುಂಬಿಕೊಂಡರು. ಈ ಸಮಾವೇಶದಲ್ಲೇ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಕರ್ನಾಟಕದಲ್ಲಿ ಪಕ್ಷ ಕಟ್ಟುವ ಹೊಣೆಯನ್ನು ಕಾರಂತರಿಗೆ ವಹಿಸಿ ಅದನ್ನು ಹುಬ್ಬಳ್ಳಿಯಿಂದಲೇ ಪ್ರಾರಂಭಿಸುವದೆಂಬ ತೀರ್ಮಾನ ಕೂಡ ಆಯಿತು.

ಹುಬ್ಬಳ್ಳಿಯಲ್ಲಿ ಕಾರಂತರು ಪ್ರಾರಂಭಿಸಿದ ಕೆಲಸಕ್ಕೆ ನೆರವಾಗಲು ಒಬ್ಬ ಸಹಾಯಕನು ಬೇಕೆಂದು ಮಂಗಳೂರಿನಲ್ಲಿದ್ದ ನನ್ನನ್ನು ೧೯೪೭ರಲ್ಲಿ ಹುಬ್ಬಳ್ಳಿಗೆ ಕರೆಯಿಸಿದ್ದರು. ಕಾರಂತರು ಕರ್ನಾಟಕದಲ್ಲಿ ಸಮಾಜವಾದಿ ಆಂದೋಲನಕ್ಕೆ ತೊಡಗಲಿದ್ದಾರೆ ಎಂಬ ಸುದ್ದಿ ಹಿಂದಿನ ವಿದ್ಯಾರ್ಥಿ ಕಾಂಗ್ರೆಸ್ ಗೆಳೆಯರಿಗೆಲ್ಲಾ ವಿದ್ಯುತ್ ಸಂಚಾರವಾದಂತೆ ಮುಟ್ಟಿತು. ಕಾರಂತರು ರಾಜ್ಯದ ತುಂಬ ಸಂಚರಿಸಿ ಈ ಗೆಳೆಯರನ್ನು ಕೆಲಸಕ್ಕೆ ಅಣಿಗೊಳಿಸಿದರು. ಅವರ ಮೊಟ್ಟಮೊದಲ ಹೊಣೆ ಕರ್ನಾಟಕಕ್ಕೆ ಬರಲಿದ್ದ ಜಯಪ್ರಕಾಶ ನಾರಾಯಣರ ಪ್ರವಾಸದ ಪೂರ್ವಸಿದ್ಧತೆ. ಅದನ್ನು ಅವರು ಯಶಸ್ವಿಗೊಳಿಸಿದರು. ಕಮಲಾದೇವಿ ಮತ್ತು ಕಾರಂತರ ಜೊತೆಗೆ ಜಯಪ್ರಕಾಶ ನಾರಾಯಣರು ಹೋದಹೋದೆಲ್ಲೆಡೆ ಹಮ್ಮಿಣಿಗಳ ಸಂಗ್ರಹವೂ ಆಯಿತು. ಅವರ ಪ್ರಯಾಣ ಮಂಗಳೂರಿನಿಂದ ಪ್ರಾರಂಭವಾಗಿತ್ತು. ಅಲ್ಲೇ ೨೫ ಸಾವಿರ ರೂಪಾಯಿ ನಿಧಿಯನ್ನು ಸಾರ್ವಜನಿಕ ಸಭೆಯಲ್ಲಿ ಜೆ.ಪಿ. ಸ್ವೀಕರಿಸಿದ್ದರು. ಬೆಂಗಳೂರು, ಮೈಸೂರು, ಹರಿಹರ, ಹುಬ್ಬಳ್ಳಿ, ಗದಗ, ಬೆಳಗಾವಿ ಮುಂತಾದಲ್ಲಿ ಜೆ.ಪಿ. ಸಭೆಗಳು ಅರ್ಥಪೂರ್ಣವಾಗಿ ನಡೆದವು.

ನಾನು ಪಕ್ಷದ ಹೊಣೆಗಾರಿಕೆ ಜೊತೆಗೆ ರೈಲ್ವೆ ಕೂಲಿಕಾರರ ಸಂಘದಲ್ಲೂ ಕೆಲಸ ಮಾಡುತ್ತಿದ್ದುದರಿಂದ ಪಕ್ಷದ ಮೇಲಿನ ಅಭಿಮಾನದಿಂದ ನನ್ನ ಮತ್ತು ಕಾರಂತರ ಬೆಂಗಾವಲಾಗಿ ನಿಂತವರು ರೇಲ್ವೆ ಕಾರ್ಮಿಕ ಧುರೀಣರಾದ ಸಿದ್ದಪ್ಪ, ಎಚ್.ಎಸ್. ನಗರ, ಎನ್.ಬಿ. ಚಳ್ಳಗೇರಿ, ವಿ.ಆರ್. ಜೋಶಿ, ಮತ್ತು ಅಂದಿನ ಸಂಘದ ಅಧ್ಯಕ್ಷರಾದ ಶಂಭು ಜೋಶಿ ವಕೀಲರು ಮುಂತಾದವರು.

ಹುಬ್ಬಳ್ಳಿ–ಧಾರವಾಡ ಅವಳಿನಗರದ ವಿಚಾರವಾದಿಗಳೂ ನಮ್ಮಿಬ್ಬರನ್ನು ತಮ್ಮ ಸಹೋದರರೆಂದೇ ತುಂಬಾ ಕಕ್ಕುಲಾತಿಯಿಂದ ನೋಡಿಕೊಂಡಿದ್ದನ್ನು ಮರೆಯಲಾರೆವು. ಧಾರವಾಡದಲ್ಲಿ ಗುಂಡಪ್ಪ ನರಿಬೋಳ, ಗಂಗಾಧರ ಪದಕಿ, ಎನ್. ಬಿ. ಪೂಜಾರ, ಶಂಕರ ಕುರ್ತಕೋಟಿ ಮುಂತಾದವರು. ಹಾಗೆಯೇ ಬಳ್ಳಾರಿಯಲ್ಲಿ ಇಮ್ಮಡಿ ಬಸವರಾಜ, ಹೊಸಪೇಟೆಯಲ್ಲಿ ಅಸುಂಡಿ ತಿರುಮಲರಾಯರು ಮತ್ತು ಆರ್.ವಿ.ದೇಸಾಯಿ, ಬೀದರದಲ್ಲಿ ಆರ್.ವಿ. ಬೀಡಪ್ಪ, ಚಿಕ್ಕೋಡಿಯಲ್ಲಿ ಶೆಟ್ಟಿ ವಕೀಲರು, ಬೆಳಗಾವಿಯಲ್ಲಿ ಬಾಬು ನಾಯಕ, ನಾಥ ಪೈ, ವೆಂಕಟೇಶ ಕರಗುಪ್ಪಿಕರ, ಆರ್.ಎಚ್. ಕುಲಕರ್ಣಿ, ಖಾನಾಪುರದಲ್ಲಿ ಅಣ್ಣಾ ದೇಶಪಾಂಡೆ, ದಾವಣಗೆರೆಯಲ್ಲಿ ಎ.ಎಚ್. ಶಿವಾನಂದ ಸ್ವಾಮಿ, ಮೈಸೂರಿನಲ್ಲಿ ಕೆ.ಕಾಳಯ್ಯ, ಬಿ. ಶ್ರೀಕಂಠಪ್ಪ, ಬೆಂಗಳೂರಿನಲ್ಲಿ ಮುಲ್ಕಾ ಗೋವಿಂದ ರೆಡ್ಡಿ, ಜಿ.ವಿ. ಅಂಜನಪ್ಪ, ಕೆ.ಕಣ್ಣನ್, ಬಾಸು ಕೃಷ್ಣಮೂರ್ತಿ, ಎಸ್.ವೆಂಕಟರಾಮು, ಶಿವಮೊಗ್ಗದ ಗೋಪಾಲಗೌಡ, ಎಂ.ಈಶ್ವರಪ್ಪ, ಜಿ. ಸದಾಶಿವರಾವ್, ಮಂಗಳೂರಿನಲ್ಲಿ ಅಮ್ಮೆಂಬಳ ಬಾಳಪ್ಪ, ಡಿ. ಮೋಹನರಾವ್, ಕೆ.ಕೆ. ಶೆಟ್ಟಿ, ಮಂಗೇಶರಾವ್, ಡಾ.ಸಂಜೀವನಾಥ ಐಕಳ, ಕಾರವಾರದಲ್ಲಿ ಎಸ್.ಕೆ.ಎ. ಪೈ, ಸಾಥಿ ಎಸ್.ಜಿ. ಭಟ್, ರಾಮದಾಸ ಫೇಣಿ, ಅಂಕೋಲಾದಲ್ಲಿ ಎಸ್.ವಿ. ಪಿಕಳೆ, ಎಮ್.ಸಿ. ಮಜುಮದಾರ, ಮ.ಗ.ಶೆಟ್ಟಿ ಹೀಗೆ ನೂರಾರು ಜನರು ಹುಬ್ಬಳ್ಳಿಯ ನಮ್ಮೊಂದಿಗೆ ಸಂಪರ್ಕವಿಟ್ಟುಕೊಂಡು, ಆ ಕಾಲದಲ್ಲಿ ಪಕ್ಷಕ್ಕಾಗಿ ದುಡಿಯುತ್ತಿದ್ದರು.

ಆಗ ಖಾದ್ರಿ ಶಾಮಣ್ಣ ಅವರ ಸಂಪಾದಕತ್ವದಲ್ಲಿ ಧಾರವಾಡದಿಂದ 'ಜಾಗೃತಿ' ವಾರಪತ್ರಿಕೆ ಪ್ರಾರಂಭವಾಯಿತು. ಕಾರಂತರು ಪಕ್ಷದ ಪರವಾಗಿ ಜೆ.ಪಿ. ಬರಹಗಳುಳ್ಳ 'ಕ್ರಾಂತಿಪಥದಲ್ಲಿ' ಎಂಬ ಗ್ರಂಥವನ್ನು ಸಾಹಿತ್ಯ ಭಂಡಾರ ಪ್ರಕಟಿಸುವಂತೆ ಮಾಡಿದ್ದು ಒಂದು ದಾಖಲೆ. ನೆಗಳೂರು ಶ್ರೀನಿವಾಸರಾಯರೂ ಅಂಕೋಲೆಯ ಮ.ಗ.ಶೆಟ್ಟಿ ಅವರೂ ಜೆ.ಪಿ. ಬರಹಗಳನ್ನು ಅನುವಾದಿಸಿದ್ದು ಆ ಪುಸ್ತಕದಲ್ಲಿ ಇವೆ.

ಜೆ.ಪಿ. ಕೂಡಿಸಿಕೊಟ್ಟ ಹಮ್ಮಿಣಿ ತೀವ್ರಗತಿಯಲ್ಲಿ ಕರಗಿಹೋದ ವಿಷಯದಲ್ಲಿ ಆಗ ಪಕ್ಷದಲ್ಲಿ ತುಮುಲವೆದ್ದಿತು. ಹೊಸಪೇಟೆಯಲ್ಲಿ ಸೇರಿದ್ದ ಪಕ್ಷದ ರಾಜ್ಯಮಟ್ಟದ ಸಮಾವೇಶದಲ್ಲಿ ಅದು ಚರ್ಚೆಗೂ ಬಂತು. ಅದರ ಬಗ್ಗೆ ಕಾರಂತರು ಇತ್ತೀಚೆಗೆ ಡಾ. ಅಮ್ಮೆಂಬಳ ಬಾಳಪ್ಪ ಅವರ ಅಭಿನಂದನಾ ಗ್ರಂಥದಲ್ಲಿ ಬರೆಯುತ್ತಾ ಆಗ ನಮ್ಮ ಪಕ್ಷದಲ್ಲಿ ನುಸುಳಿಕೊಂಡ ಸ್ವಾರ್ಥಲಾಲಸೆಯ ಮತ್ತು ಮೋಜುಗಾರ 'ಸಾಥಿ'ಗಳ ಪಿತೂರಿಯಿಂದಲೋ ಒಂದು ಪ್ರಸಂಗದಲ್ಲಿ ಶ್ರೀಮತಿ ಕಮಲಾದೇವಿ ಅವರೊಂದಿಗೆ ನಾನೂ, ನನ್ನಂತೆ ಯೋಚಿಸಿದ ಕೆಲವರೂ ಗಂಭೀರವಾದ ಭಿನ್ನಾಭಿಪ್ರಾಯ ತಳೆಯುವಂತಾಯಿತು. ಪಕ್ಷದ ಸಂಘಟನೆ ಬಿಕ್ಕಟ್ಟಿಗೆ ಸಿಕ್ಕಿತು. ನನ್ನ ಬೆಂಬಲಿಗ ಗೆಳೆಯರೆಲ್ಲಾ ಆಗ ಪಕ್ಷದ ಪುನಃ ಸಂಘಟನೆಗೆ ಕೆಲವೊಂದು ರಾಜಿ ಸೂತ್ರವನ್ನು ಸಭೆಯ ಮುಂದಿಟ್ಟರು. ಅದರಲ್ಲಿ ಮುಖ್ಯವಾಗಿದ್ದ ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣದ ಯೋಜನೆಯನ್ನು, ಅದು ಕಾರ್ಯಸಾಧು ಅಲ್ಲ ಎಂದು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಅದನ್ನು ತಿರಸ್ಕರಿಸಿದರು. ಆಗ ನಾವೆಲ್ಲಾ ಪಕ್ಷದ ನಿಷ್ಠೆಯನ್ನು ಅಬಾಧಿತವಾಗಿಟ್ಟು ನಮ್ಮ ನಮ್ಮ ಕ್ಷೇತ್ರದಲ್ಲಿ ಕೆಲಕಾಲ ನಿಷ್ಕ್ರಿಯರಾಗುವುದೆಂದು ತೀರ್ಮಾನಿಸಿದೆವು ಎಂದು ಸ್ಮರಿಸಿದ್ದಾರೆ.

ಕಾರಂತರ ನಿರ್ಗಮನಾನಂತರ ಅವರ ಸ್ಥಾನವನ್ನು ಧಾರವಾಡದ ಹಿರಿಯ ವಕೀಲರಾದ ಭಾಸ್ಕರ ಗೋಖಲೆ ವಹಿಸಿಕೊಂಡರು. ನಂತರ ಪಕ್ಷದ ಪ್ರಾಂತೀಯ ಕಾರ್ಯಾಲಯ ಬೆಂಗಳೂರಿಗೆ ಹೋಯಿತು. ಸೋಗಾಲ ನಾಗಭೂಷಣ ಕೆಲಕಾಲ

ಕಾರ್ಯದರ್ಶಿಯಾದರು. ನಂತರ ಶಿವಮೊಗ್ಗದ ಜಿ. ಸದಾಶಿವರಾಯರ ಮೇಲೆ ಈ ಹೊಣೆ ಬಿತ್ತು. ಕಾರಂತರು ಹುಬ್ಬಳ್ಳಿ ತೊರೆಯುವ ಮೊದಲು ನಾವೆಲ್ಲ ಒಟ್ಟಿಗೆ ಇದ್ದೆವು. ಅವರು ಪಾಟೀಲ ಪುಟ್ಟಪ್ಪನವರ ಸಲುಗೆಯ ಗೆಳೆಯರಾಗಿದ್ದರು. ಎಚ್.ಆರ್.ಇಟಗಿ, ಮಾಮಲೆ ದೇಸಾಯಿ, ಕೆ.ಎಫ್.ಪಾಟೀಲ ಇವರು ಪ್ರಾರಂಭಿಸಿದ 'ವಿಶಾಲ ಕರ್ನಾಟಕ'ಕ್ಕೆ ಆಗ ಪಾ.ಪು. ಸಂಪಾದಕರಾಗಿದ್ದರು. ಕಾರಂತರ ಬರಹಗಳಿಗೆ ಪಾಟೀಲ ಪುಟ್ಟಪ್ಪ ಮುಕ್ತವಾದ ಅವಕಾಶ ನೀಡಿದ್ದರು. ಪಾಟೀಲಪುಟ್ಟಪ್ಪ ಮತ್ತು ಅವರ ಗೆಳೆಯರಾದ ಬಾಬು ಬೆಂಡಿಗೇರಿ, ಎಂ.ಆರ್. ಸಿದ್ದಾಪೂರ ಇವರಿಗೆ ನಾವು, ಅಂದರೆ ಸದಾಶಿವ ಕಾರಂತ, ಗುರುರಾಜ ಹಬ್ಬು ಮತ್ತು ನಾನು ಆಗಿನ ಸಮಾಜವಾದಿ ತ್ರಿಮೂರ್ತಿ ಗೆಳೆಯರಾಗಿ ಆತ್ಮೀಯರಾಗಿದ್ದೆವು.

ಕಾಂಗ್ರೆಸ್ ಸಮಾಜವಾದಿ ಪಕ್ಷದಿಂದ ನಾವು ತಟಸ್ಥ ಹೊಂದಿದ ಅಂದಿನ ದಿನಗಳಲ್ಲಿ ನಾವು ಪಟ್ಟ ಪರಿಪಾಟಲು ಅವರ್ಣನೀಯ. ದೇಶಪಾಂಡೆ ನಗರದ ರಾಮ್‌ಭಟ್ ಓಕಡೆ ಚಾಳಿನ ಒಂದು ಉಪಮನೆಯಲ್ಲಿ ವಾಸವಾಗಿದ್ದೆವು. ನಮ್ಮ ಹೊಟ್ಟೆ ತಣಿಸುವುದಕ್ಕೆ ರಾತ್ರಿ ನೆನಗಡಲೆ (ಅದನ್ನು ನಾವು ಗಾಂಧಿ ಟಾನಿಕ್ ಎನ್ನುತ್ತಿದ್ದೆವು) ಶೇಂಗಾ ತಿಂದು ನೀರು ಕುಡಿದು ಮಲಗಿದ್ದ ದಿನಗಳು ಎಷ್ಟೋ. ಓಕಡೆ ಚಾಳಿನ ಈ ನಮ್ಮ ಮನೆಯು ಕೂಡಾ ಒಂದು ರೀತಿಯ ಪರ ಊರಿಂದ ಬರುತ್ತಿದ್ದ ಗೆಳೆಯರಿಗೆ ರಾತ್ರಿ ವಾಸ್ತವ್ಯ ನೀಡುತ್ತಿತ್ತು. ಅತಿಥಿಗಳು, ನಮಗೆಲ್ಲರಿಗೂ ಬಿಟ್ಟಿ ಊಟ ಒದಗಿಸುತ್ತಿದ್ದ ಕೆನರಾ ಹೋಟೆಲ್ ಮೂಲಕ ಎಂ.ಕೆ.ಪೈ ಮತ್ತು ಬಾನಿ ಓಣಿಯಲ್ಲಿ ಖಾನಾವಳಿಯನ್ನಿಟ್ಟುಕೊಂಡಿದ್ದ ಆನಂದರಾವ್ (ಮುಳಿಯ ಗೋವರ್ಧನರಾಯರ ಅಳಿಯ) ಇವರನ್ನು ನಾವು ಹೇಗೆ ಮರೆಯಬಲ್ಲೆವು?

ಅದೇ ಆಗ ತಿ.ರು.ನೇಸ್ವಿ ಸಂಪಾದಕತ್ವದ 'ನವಯುಗ' ದಿನಪತ್ರಿಕೆ ಪ್ರಾರಂಭವಾಗಿತ್ತು. ನಮ್ಮ ಮೇಲಿದ್ದ ಅಗಾಧ ಅಭಿಮಾನದಿಂದ ಮ್ಯಾನೇಜರ್ ಕುಬಸದ ಶಿವಪ್ಪ ನಮ್ಮನ್ನು ಕರೆದು ಪತ್ರಿಕಾಲಯದಲ್ಲಿ ನೌಕರಿ ನೀಡಿದ್ದರು. ಸಂಪಾದಕೀಯ ವಿಭಾಗದಲ್ಲಿದ್ದ ಕಾರಂತರಿಗೆ ಅಲ್ಲಿಯ ಉಸಿರುಗಟ್ಟುವ ವಾತಾವರಣ ಸಹಿಸಲಾಗದೆ ಹಠಾತ್ತನೆ ರಾಜೀನಾಮೆ ನೀಡಿ ಹೊರಬಂದರೆ, ಸಮಾಜವಾದಿ ಚಟುವಟಿಕೆಗಳಲ್ಲಿ ನಿರತನಿರುವೆ ಎಂಬ ಕಾರಣ ನೀಡಿ ನನ್ನನ್ನು ಹೊರಹಾಕಲಾಯಿತು.

ಹೀಗೆ ಹುಬ್ಬಳ್ಳಿ ಬಿಟ್ಟ ಕಾರಂತರು ೧೯೪೯ರಲ್ಲಿ ಮುಂಬಯಿಗೆ ಹೋದರು. ಪ್ರೊ. ಎಂ. ಎಲ್. ದಾಂತವಾಲಾ ಅವರ ಮಾರ್ಗದರ್ಶನದಲ್ಲಿ ಅರ್ಥಶಾಸ್ತ್ರದ ವಿಶೇಷ ಅಧ್ಯಯನ ಮಾಡಿ ಡಾಕ್ಟರೇಟ್ ಪದವಿ ಗಳಿಸಿದರು. ೧೯೬೪ರಲ್ಲಿ ದಿಲ್ಲಿ ಪಂಜಾಬ ನ್ಯಾಶನಲ್ ಬ್ಯಾಂಕಿನಲ್ಲಿ ಒಬ್ಬ ಅರ್ಥಶಾಸ್ತ್ರಜ್ಞರಾಗಿ ನೌಕರಿ ಹಿಡಿದರು. ದಿಲ್ಲಿಯಲ್ಲಿದ್ದಾಗ ಡಾ. ರಾಮಮನೋಹರ ಲೋಹಿಯಾ, ಸಂಸತ್‌ನಲ್ಲಿ ಸಮಾಜವಾದಿ ಪಕ್ಷದ ಧುರೀಣರಾಗಿದ್ದರು. ಲೋಹಿಯಾ ಅವರ ಸಾಂಸದಿಕ ಕಾರ್ಯಚಟುವಟಿಕೆಗಳಿಗೆ ನೆರವು ನೀಡುತ್ತಾ ಲೋಹಿಯಾ ಅವರ ಜೊತೆಗೆ ೧೯೬೪-೬೭ರ ತನಕ ಕಾರಂತರು ದುಡಿದರು.



**(ಕೆ.ಎಸ್. ಕಾರಂತರೊಂದಿಗೆ ಹುಬ್ಬಳ್ಳಿ-ಧಾರವಾಡಗಳಲ್ಲಿ ಸಮಾಜವಾದಿ ಪಕ್ಷ ಕಟ್ಟುವಲ್ಲಿ ತೊಡಗಿಕೊಂಡಿದ್ದಲ್ಲದೆ, ದಿನಕರ ದೇಸಾಯಿ ಅವರೊಂದಿಗೂ ಉ.ಕ.ದಲ್ಲೂ ಸಮಾಜವಾದಿ ಚಳುವಳಿಯಲ್ಲಿ ಪತ್ರಕರ್ತರಾಗಿ ಕ್ರಿಯಾಶೀಲರಾಗಿದ್ದ ಅಮ್ಮೆಂಬಳ ಆನಂದರು ಈಗ ತಮ್ಮ ಮಗಳ ಕುಟುಂಬದೊಂದಿಗೆ ಮಣಿಪಾಲದಲ್ಲಿ ನೆಲೆಸಿದ್ದಾರೆ)**

## ದಾವಣಗೆರೆಯಲ್ಲಿ 'ಹೊಸ ಮನುಷ್ಯ' ವಿಶೇಷಾಂಕ ಬಿಡುಗಡೆ: ಒಂದು ವರದಿ




**ನ**ಮ್ಮ ಇಂದಿನ ಎಲ್ಲ ಸಮಸ್ಯೆಗಳಿಗೂ ರಾಜಕಾರಣದ ಮೂಲಕ ಪರಿಹಾರ ಹುಡುಕುವುದು ಒಂದು ರೂಢಿಯಾಗಿಬಿಟ್ಟಿದ್ದು, ಜನ ರಚನಾತ್ಮಕ ಕೆಲಸಗಳ ಮೂಲಕ ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಚಳುವಳಿ ಇಂದು ಆರಂಭವಾಗಬೇಕಿದೆ ಎಂದು ಹೆಗ್ಗೋಡಿನ 'ಚರಕ'ದ ಪ್ರಸನ್ನ ಹೇಳಿದ್ದಾರೆ. ಅವರು ಆಗಸ್ಟ್ ೧೧ರಂದು ದಾವಣಗೆರೆಯ ಎಂ.ಎಸ್.ಬಿ. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ 'ಹೊಸ ಮನುಷ್ಯ' ಪತ್ರಿಕೆಯ ೨೦೧೫ರ ವಾರ್ಷಿಕ ವಿಶೇಷಾಂಕವನ್ನು ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ಇಂದು ನಮ್ಮ ಮಕ್ಕಳನ್ನು ಕುರ್ಚಿಯಲ್ಲಿ ಕೂಡಿಸಿ ಶಿಕ್ಷಣ ನೀಡುತ್ತಿದ್ದು, ಇಂತಹ ಶಿಕ್ಷಣ ಕೇವಲ ಬಾಯಿ ಬಡಾಯಿಯಂತಾಗಿದೆ ಎಂದ ಪ್ರಸನ್ನ ಅವರು, ಹೀಗಾಗಿಯೇ ನಮ್ಮ ಹಳ್ಳಿಗಳ ಯುವಕರೂ ನಗರಗಳ ಕಡೆ ವಲಸೆ ಹೊರಟಿದ್ದಾರೆ ಎಂದು ಹೇಳಿದರು. ನಮ್ಮ ಪರಂಪರೆಯನ್ನು ಕಟ್ಟಿದ ಸಾಧು ಸಂತರೆಲ್ಲರೂ ಕುಶಲಕರ್ಮಿಗಳು ಎಂಬುದನ್ನು ನೆನಪಿಸಿದ ಅವರು, ಕಾಯಕದಲ್ಲಿ ಕಾಯ; ಅಂದರೆ ದೇಹದ ಶ್ರಮವೂ ಇರಬೇಕು ಎಂದು ಅಭಿಪ್ರಾಯಪಟ್ಟರು. ಎರಡು ನೂರು ವರ್ಷಗಳ ಹಿಂದೆ ಚಾಲ್ತಿಗೆ ಬಂದ ಸ್ವಯಂಚಾಲಿತ ಯಂತ್ರಗಳು ಮನುಷ್ಯನಿಗೆ ಸ್ವಲ್ಪ ಬಿಡುವು ನೀಡಿ ಅವನನ್ನು ಸಂಸ್ಕೃತಿಜೀವಿಯನ್ನಾಗಿ ಮಾಡುವ ಬದಲು ಸಂಸ್ಕೃತಿವಿಹೀನನ್ನಾಗಿ ಮಾಡಿರುವುದು ಆಧುನಿಕತೆಯ ದುರಂತವಾಗಿದೆ ಎಂದ ಪ್ರಸನ್ನ, ಮೋದಿ ಅಥವಾ ಸಿದ್ದರಾಮಯ್ಯ ಎಂತಹುದೇ ಕೆಟ್ಟ ರಾಜಕಾರಣ ಮಾಡಿಕೊಂಡಿರಲಿ, ನಾವು ಯುವಜನರಲ್ಲಿ ಚಾರಿತ್ರ್ಯ ಕಟ್ಟುವ ಕೆಲಸ ಮಾಡುವ ಮೂಲಕ ಇಂತಹ ರಾಜಕಾರಣವನ್ನು ಎದುರಿಸಬಹುದಾಗಿದೆ ಎಂದರು.

ಈ ಕಾಲದಿನಗಳಲ್ಲಿ ಸಮಾಜವಾದಕ್ಕೆ ಬದ್ಧವಾದ ಒಂದು ಮಾಸಪತ್ರಿಕೆಯನ್ನು ತರುವುದು ಒಂದು ಸಾಹಸದ ವಿಷಯವೇ ಆಗಿರುವಾಗ 'ಹೊಸ ಮನುಷ್ಯ' ಪತ್ರಿಕೆಯನ್ನು ಸತತವಾಗಿ ನಾಲ್ಕು ವರ್ಷಗಳ ಕಾಲದಿಂದ ಹೊರತರುತ್ತಿರುವುದಕ್ಕಾಗಿ ನಾಗಭೂಷಣ ದಂಪತಿಗಳನ್ನು ಅಭಿನಂದಿಸಬೇಕಿದೆ ಎಂದೂ ಪ್ರಸನ್ನ ಹೇಳಿದರು.

ವಿಶೇಷಾಂಕ ಕುರಿತು ಮಾತನಾಡಿದ ವಿಶ್ರಾಂತ ಪ್ರಾಂಶುಪಾಲರೂ ಮತ್ತು ಹಿರಿಯ ರಂಗಕರ್ಮಿಗಳೂ ಆದ ಡಾ. ಎಂ. ಜಿ. ಈಶ್ವರಪ್ಪ ಅವರು, ಪತ್ರಿಕೆ ಸಮಾಜವಾದದ ಚರಿತ್ರೆ, ವರ್ತಮಾನ ಮತ್ತು ಭವಿಷ್ಯಗಳನ್ನು ಕುರಿತ ವ್ಯಾಖ್ಯಾನಗಳನ್ನು ಒಳಗೊಂಡು ಗಮನ ಸೆಳೆಯುತ್ತದೆ ಎಂದರು. ವಿಶೇಷಾಂಕವು ಗಾಂಧಿ-ಲೋಹಿಯಾ-ಅಂಬೇಡ್ಕರ್ ವಿಚಾರಗಳನ್ನೊಳಗೊಂಡ ರಾಜಕೀಯ ಸಂಪುಟ ಮಾತ್ರವಾಗಿರದೆ, ಸಾಹಿತ್ಯ-ಸಂಸ್ಕೃತಿ-ಸಿನೆಮಾ-ಕ್ರೀಡಾ ವಿಷಯಗಳ ಕಡೆ ಕೂಡ ಗಮನ ಹರಿಸಿದ್ದು, ಒಟ್ಟಾರೆ ಒಂದು ಸಮಗ್ರ ಸಂಪುಟವಾಗಿ ಹೊರಬಂದಿದೆ ಎಂದು ಅವರು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಮಾಜವಾದಿ ಮತ್ತು ಕಾನೂನು ತಜ್ಞ ಪ್ರೊ. ಎಸ್.ಎಚ್. ಪಟೇಲ್ ಅವರು ಲೋಕಾಯುಕ್ತ ಕರ್ಮಕಾಂಡದ ಪ್ರಸ್ತಾಪ ಮಾಡಿ, ಬೇಲಿಯೇ ಎದ್ದು ಹೊಲ ಮೇಯುವ ಇಂತಹ ಕಾಲದಲ್ಲಿ, 'ಹೊಸ ಮನುಷ್ಯ'ದಂತಹ ಪತ್ರಿಕೆಗಳು ಜನರಲ್ಲಿ ವೈಚಾರಿಕ ಎಚ್ಚರ ಬೆಳೆಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಸಮಾರಂಭದ ಆರಂಭದಲ್ಲಿ ಎಲ್ಲರನ್ನೂ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಪತ್ರಿಕೆಯ ಸಂಪಾದಕ ಡಿ.ಎಸ್. ನಾಗಭೂಷಣ ಅವರು, ಮನುಷ್ಯ ಸಾಮಾಜಿಕ ಜೀವಿಯಾಗಿ ಬಾಳುವ ಅನಿವಾರ್ಯತೆ ಇರುವವರೆಗೂ ಸಮಾಜವಾದ ಬದುಕಿನ ಒಂದು ಮುಖ್ಯ ಜಿಜ್ಞಾಸೆಯಾಗಿ ಉಳಿದೇ ಇರುತ್ತದೆ; ಜಾಗತೀಕರಣದೊಂದಿಗೆ ಅದರ ಸಾವು ಸಂಭವಿಸಿದೆ ಎಂದು ಹೇಳುವವರು ಸಮಾಜವಿರೋಧಿಗಳೇ ಆಗಿದ್ದಾರೆ ಎಂದರು. ಸಮಾಜವಾದವನ್ನು ಸಮಕಾಲೀನಗೊಳಿಸುವ ಪ್ರಯತ್ನವನ್ನು ಪತ್ರಿಕೆ ಮಾಡುತ್ತಿದೆ ಎಂದು ಅವರು ಹೇಳಿದರು.

ಎಂ.ಎಸ್.ಬಿ. ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್.ಕೆ. ಹನುಮಂತಪ್ಪ ವಂದಿಸಿದರು. ದೊಗ್ಗಳ್ಳಿ ಗೌಡ್ರ ಪುಟ್ಟರಾಜು ಕಾರ್ಯಕ್ರಮ ನಿರೂಪಿಸಿದರು.

**(ಚಿತ್ರ ಮತ್ತು ವರದಿ: ಸವಿತಾ ನಾಗಭೂಷಣ)**

# ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ–೩೫

–ಇಂದಿರಾ ಬಿ. ಕೃಷ್ಣಪ್ಪ

## ಗೋಕಾಕ್ ಚಳುವಳಿ ಮತ್ತು ಬಿ.ಕೆ.

ಸಂಘಟಿತ ಚಳುವಳಿಯು ತನ್ನದೇ ಆದ ಗುರಿ, ಆಶಯ ಮಾರ್ಗಗಳನ್ನು ಹೊಂದಿದ್ದಾಗ್ಯೂ, ದೇಶ–ಕಾಲದ ಸಂದರ್ಭದಲ್ಲಿ ಉದ್ಭವಿಸುವ ವರ್ತಮಾನದ ಸಮಸ್ಯೆಗಳಿಗೆ ಮುಖಾಮುಖಿಯಾಗುವ ಮತ್ತು ಪ್ರತಿಸ್ಪಂದಿಸುವ ಗುರುತರ ಜವಾಬ್ದಾರಿಯನ್ನು ಹೊಂದಿರುತ್ತದೆ. ದಲಿತ ಚಳುವಳಿಯ ಅಂಥಹ ನೂರಾರು ಸಮಸ್ಯೆಗಳಿಗೆ, ಸವಾಲುಗಳಿಗೆ ಉತ್ತರಿಸುವ ಸಂದರ್ಭದಲ್ಲಿ, ಪ್ರೊ.ಬಿ.ಕೆ.ಯವರು ಜನಸಮುದಾಯದ ಕಾಳಜಿಯೊಂದಿಗೆ, ನಾಡುನುಡಿಯನ್ನು ಶಿಕ್ಷಣ ಮಾಧ್ಯಮವಾಗಿಸಲು ಜನಾಭಿಪ್ರಾಯ ರೂಪಿಸಲು ತೆಗೆದುಕೊಂಡ ನಿರ್ಣಯಗಳು ಅಧ್ಯಯನ ಶೀಲವಾಗಿವೆ.

ಕರ್ನಾಟಕದಲ್ಲಿ ಗೋಕಾಕ ಚಳುವಳಿ ವ್ಯಾಪಕತೆ ಪಡೆದುಕೊಳ್ಳುತ್ತಿದ್ದ ಸಂದರ್ಭವದು. ಗೋಕಾಕ್ ವರದಿಯನ್ನು ಸರ್ಕಾರ ಅಂಗೀಕರಿಸಿದರಿಂದುಂಟಾದ ಸಮಸ್ಯೆಗಳ ದೃಷ್ಟಿಯಿಂದ ಗೋಕಾಕ್ ವರದಿಯ ಯಥಾವತ್ ಅನುಷ್ಠಾನ ಚಳುವಳಿಯಲ್ಲಿ ದಲಿತ ಚಳುವಳಿ ಭಾಗವಹಿಸಬೇಕೇ? ಬೇಡವೇ? ಎಂಬ ಪ್ರಶ್ನೆಗಳು ಎದುರಾಗಿದ್ದವು. ಗೋಕಾಕ್ ವರದಿಯ, ಪರ–ವಿರೋಧಿ ಚಳುವಳಿಯಲ್ಲಿ ಅನೇಕ ಪ್ರಗತಿಪರರು ಮತ್ತು ಸಂಘಟನೆಗಳು ಸೇರಿ ಹೋಗಿದ್ದವು. ಅಪ್ರಜ್ಞಾಪೂರ್ವಕವಾಗಿ ಅಥವಾ ಸ್ಥಳೀಯ ಒತ್ತಡಗಳಿಗಾಗಿ ದಲಿತ ಸಂಘರ್ಷ ಸಮಿತಿಯ ಅನೇಕ ಜಿಲ್ಲಾ ಸಮಿತಿಗಳು – ಕೋಲಾರ, ಹಾಸನ, ಚಿಕ್ಕಮಗಳೂರು, ಕೊಡಗು, ಇತ್ಯಾದಿ ಕಡೆಗಳಲ್ಲಿ ಗೋಕಾಕ್ ವರದಿ ಯಥಾವತ್ ಜಾರಿಗಾಗಿ ಚಳುವಳಿಯಲ್ಲಿ ಭಾಗಿಯಾಗಿದ್ದವು. ನಂಜನಗೂಡಿನ ಕಾರ್ಯಕರ್ತರು ರಕ್ತದಲ್ಲಿ ಸಹಿ ಮಾಡಿ ಗೋಕಾಕ್ ವರದಿ ಜಾರಿಗಾಗಿ ಒತ್ತಾಯಿಸಿದ್ದರು. ಅನೇಕ ಕಡೆಗಳಲ್ಲಿ ದಸಂಸದ ಮುಖಂಡರುಗಳಿಗೆ ಗೋಕಾಕ್ ಚಳುವಳಿಯೊಳಗೆ ಭಾಗಿಯಾಗಲು ಒತ್ತಾಯ ಬರುತ್ತಿತ್ತು.

ಪ್ರೊ.ಬಿ.ಕೃಷ್ಣಪ್ಪನವರು ಈ ಚಳುವಳಿಯ ಬಗ್ಗೆ ತಟಸ್ಥಧೋರಣೆ ತಾಳಿದ್ದು, ದಲಿತ ಚಳುವಳಿಯೊಳಗೆ ಸಖೇದಾಶ್ಚರ್ಯ ಉಂಟು ಮಾಡಿತ್ತು. ಇವರ ಮೌನವನ್ನು ಪ್ರಶ್ನಿಸಿ, ದೇವನೂರು ಮಹಾದೇವರವರು ಪತ್ರ ಬರೆಯುತ್ತಾ, 'ಸರ್ಕಾರದ ಭಾಷಾ ನೀತಿಗೆ ನಮ್ಮ ವಿರೋಧವಿದೆ ಎಂಬುದನ್ನು ಬಹಿರಂಗ ಪಡಿಸಬೇಕೆಂದೂ, ರಾಜ್ಯ ಸಮಿತಿ ತೀರ್ಮಾನಕ್ಕಾಗಿ ಸಭೆ ಕರೆಯಬೇಕೆಂದು' ತಿಳಿಸಿದ್ದರು. ದೇವಯ್ಯ ಹರವೆರವರು ದೀರ್ಘವಾದ ಪತ್ರ ಬರೆದು – 'ಸರ್ಕಾರದ ತೀರ್ಮಾನ ಪ್ರಕಟವಾದ ಮೇಲೆ ಕನ್ನಡ ಕ್ರಿಯಾವೇದಿಕೆ ಯಾವ ನಿಲುವು ತೆಗೆದುಕೊಳ್ಳುವುದೋ ಅದಕ್ಕೆ ನಾವು ಪೂರಕವಾದ ನಿಲುವು ತೆಗೆದುಕೊಂಡು ಅದರಂತೆ ವರ್ತಿಸುವುದು ವಾಸಿ. ರಾಜ್ಯ ಸಮಿತಿ ಸಭೆ ಬೇಕಾದರೂ ಕರಿಯಿರಿ' ಎಂದಿದ್ದರು. *ಪ್ರಜಾವಾಣಿ* ಪತ್ರಿಕೆಯಲ್ಲಿ (ದಿ.೧೭–೦೫–೧೯೮೭ ಇರಬಹುದು) ಬಂಡಾಯ ಸಂಘಟನೆಯ ಬರಗೂರು ರಾಮಚಂದ್ರಪ್ಪನವರ ವಿಚಾರಗಳೂ ಮತ್ತು ರಂಜಾನ್ ದರ್ಗಾರವರ ನಿಲುವುಗಳು ಪ್ರಕಟವಾಗಿದ್ದವು. ದಸಂಸ–ದ ಜಿಲ್ಲಾ ಹಾಗೂ ತಾಲ್ಲೂಕು ಪದಾಧಿಕಾರಿಗಳಿಗೆ ಮಾಧ್ಯಮದವರು, ಕನ್ನಡ ಕ್ರಿಯಾ ಸಮಿತಿಯವರು ಗೋಕಾಕ್ ಚಳುವಳಿಯ ಬಗ್ಗೆ ದಲಿತ ಚಳುವಳಿಯ ನಿಲುವುಗಳನ್ನು ಕುರಿತು ಹಲವಾರು ಪ್ರಶ್ನೆಗಳನ್ನು ಕೇಳುತ್ತಿದ್ದ ಸಂದರ್ಭವದು. ಗುಲ್ಬರ್ಗಾದಿಂದ ಡಿ.ಜಿ.ಸಾಗರ್, ಧಾರವಾಡದಿಂದ ಶಿವಾಜಿ ಗಣೇಶನ್, ತುಮಕೂರಿನಿಂದ ಕೆ.ಬಿ.ಸಿದ್ಧಯ್ಯ, ಇನ್ನೂ ಮುಂತಾದವರು ದಸಂಸ ತೆಗೆದುಕೊಳ್ಳಬೇಕಾದ ನಿರ್ಧಾರದ ಬಗ್ಗೆ ಪತ್ರಗಳನ್ನು ಬರೆದಿದ್ದರು.

ಇದೇ ವೇಳೆಯಲ್ಲಿ ರಂಜಾನ್ ದರ್ಗಾರವರು, ಬರಗೂರು ರಾಮಚಂದ್ರಪ್ಪನವರಿಗೆ ಬರೆದ ೫ ಪುಟಗಳ ಸುದೀರ್ಘ ಪತ್ರದ ಪ್ರತಿಯನ್ನು ಪ್ರೊ.ಬಿ.ಕೃಷ್ಣಪ್ಪನವರಿಗೂ ಕಳುಹಿಸಿದ್ದರು. ಅದರಲ್ಲಿ ಅವರು, 'ನಿಮ್ಮೆಲ್ಲರ ಮಧ್ಯೆ ಕೂಡ ನಾನು ಒಂಟಿಯಾದ ಭಾವನೆ ಬೇರೂರುತ್ತಿದೆ. ದೇವನೂರು, ಗೋವಿಂದಯ್ಯ, ಕೃಷ್ಣಪ್ಪ ಮೊದಲಾದ ದಸಂಸ ಗೆಳೆಯರು ಜವಾಬ್ದಾರಿಯಾಗಿ ವರ್ತಿಸುತ್ತಿದ್ದಾರೆಂಬ ಸಮಾಧಾನವೊಂದನ್ನು ಬಿಟ್ಟರೆ, ನನಗೆ ಎಲ್ಲವೂ ಕ್ರೂರವಾಗಿ ಕಾಣುತ್ತಿದೆ. ಗೋಕಾಕ್ ವರದಿ ಇದ್ದಕ್ಕಿದ್ದಂತೆ ಜಾರಿಗೆ ಬರಬೇಕೆಂದು ಪಟ್ಟುಹಿಡಿದು, ಭಾಷಾ ಅಲ್ಪಸಂಖ್ಯಾತರ ಬಗ್ಗೆ ಸಹಾನುಭೂತಿ ತೋರುವುದು ಹಾಸ್ಯಾಸ್ಪದವಾಗುತ್ತದೆ. ಜನತೆಯ ಬದುಕಿನ ಪ್ರಶ್ನೆ ಬಂದಾಗ ಗೋಕಾಕ್ ವರದಿಯಂಥ ವಿಷಯಗಳು ನನಗೆ ತೃಣ ಸಮಾನ. ಕರ್ನಾಟಕದಲ್ಲಿ ಕನ್ನಡವನ್ನು ಎಲ್ಲರೂ ಕಡ್ಡಾಯವಾಗಿ ಕಲಿಯಬೇಕು. ಏಕೆಂದರೆ ಇದರಿಂದ ಭಾಷಾ ಅಲ್ಪಸಂಖ್ಯಾತರು ನಡುಗುಡ್ಡೆಗಳಂತೆ ಬದುಕುವುದು ತಪ್ಪುತ್ತದೆ. ಭಾವೈಕ್ಯ ಬೆಳೆಯುತ್ತದೆ. ಮುಸ್ಲಿಂ ಮೊದಲಾದ ಭಾಷಾ ಅಲ್ಪಸಂಖ್ಯಾತರ ನಾಯಕರು ಅವರನ್ನು ಭಾಷಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ರಾಜಕೀಯವಾಗಿ ಶೋಷಣೆ ಮಾಡುವುದು ತಪ್ಪುತ್ತದೆ. ಜನ ಬೆರೆಯುವುದರಿಂದ ಮತೀಯ ದಂಗೆಗಳು ಕಡಿಮೆಯಾಗುತ್ತವೆಯೆಂಬುದು ಅನುಭವದ ಮಾತು. ಅಲ್ಲದೆ ಭಾಷಾ ಅಲ್ಪಸಂಖ್ಯಾತರು ಕನ್ನಡ ಕಲಿತರೆ ಕನ್ನಡ ಸಾಹಿತ್ಯ ಹೊಸ ಆಯಾಮಗಳನ್ನು ಪಡೆಯುತ್ತದೆ. ಏಕೆಂದರೆ ಅವರವರ ಸಂಸ್ಕೃತಿಯ ಮತ್ತು ಒಟ್ಟಾರೆ ಸಾಮಾಜಿಕ ಬದುಕಿನ ಅನುಭವಗಳು ಕನ್ನಡ ಸಾಹಿತ್ಯದಲ್ಲಿ ಬರುತ್ತವೆ' ಎಂದು ವಾದಿಸಿದ್ದರು.



ಶೈಕ್ಷಣಿಕ ಸಮ್ಮೇಳನವೊಂದರಲ್ಲಿ ಪ್ರಾಂಶುಪಾಲ ಪ್ರೊ. ಬಿ.ಕೆ.(ಬಲಬದಿಯಲ್ಲಿ)

ಪ್ರೊ.ಬಿ.ಕೃಷ್ಣಪ್ಪ, ದಲಿತ ಚಳುವಳಿ ಮುಖಂಡರಾಗುವುದರೊಂದಿಗೆ, ಕನ್ನಡ ಭಾಷೆ–ಸಾಹಿತ್ಯವನ್ನು ಭೋಧಿಸುವ ಅಧ್ಯಾಪಕರೂ ಆಗಿದ್ದರು. ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಭಾಷಾಶಾಸ್ತ್ರವನ್ನು ಪ್ರಮುಖ ವಿಷಯವಾಗಿ ಅಧ್ಯಯನ ಮಾಡಿದವರೂ ಆಗಿದ್ದರು. ಚಳುವಳಿಯ ಅನುಭವ ಹಾಗೂ ನಾಡು–ನುಡಿ–ಭಾಷೆಯ ಜ್ಞಾನ– ಇವೆರಡರ ನಡುವಿನ ಜಿಜ್ಞಾಸೆಯಲ್ಲಿ ಅವರ ಮನಸ್ಸು ತೊಡಗಿತ್ತು. ಈ ಕಾರಣದಿಂದಲೇ ಮೌನವಾಗಿದ್ದ ಅವರನ್ನು, ಸಂಘಟನೆಯ ಮುಖಂಡರುಗಳ ಪತ್ರಗಳು, ಮಾಧ್ಯಮದವರ ಪ್ರಶ್ನೆಗಳು, ಗೋಕಾಕ್ ಚಳುವಳಿಯಲ್ಲಿ ಹೇಗೆ ಪಾಲ್ಗೊಳ್ಳಬೇಕೆಂಬ ಬಗ್ಗೆ ನಿರ್ಣಯ ಕೈಗೊಳ್ಳಬೇಕಾದ ತುರ್ತಿಗೆ ತಂದು ನಿಲ್ಲಿಸಿತ್ತು. ಪ್ರಜಾವಾಣಿ ಪತ್ರಿಕೆಗೆ ಈ ವಿಷಯದಲ್ಲಿ ಪತ್ರ ಬರೆದರು. ಅದರ ಭಾಗಗಳು ಹೀಗಿವೆ:

'ದಸಂಸವು, ಗೋಕಾಕ್ ಚಳುವಳಿಯಲ್ಲಿ ಬಿಕ್ಕಟ್ಟು ಉಂಟು ಮಾಡುತ್ತಿದೆ ಎಂದು ಭದ್ರಾವತಿಯ ಸ್ನೇಹಿತರೊಬ್ಬರು ಆರೋಪಿಸಿರುವುದು ಸತ್ಯಕ್ಕೆ ದೂರವಾದ ಮಾತು ಮತ್ತು ಕುಹಕದ ಮಾತಾಗಿದೆ. ದಸಂಸವು ಸಾಧ್ಯವಾದ ಕಡೆಗಳಲ್ಲಿ ಗೋಕಾಕ್ ಚಳುವಳಿಯಲ್ಲಿ ರಚನಾತ್ಮಕವಾಗಿ ಭಾಗವಹಿಸಿದೆ. ಎಷ್ಟೋ ದಸಂಸ ಕಾರ್ಯಕರ್ತರು ಜೈಲು ಕಂಡಿದ್ದಾರೆ. ದಸಂಸ ಮೂಲಭೂತ ಬದಲಾವಣೆಗಾಗಿ ಹೋರಾಟ ನಡೆಸಿದೆ. ಕರ್ನಾಟಕದಲ್ಲಿ ನಡೆಯುತ್ತಿರುವ ಗೋಕಾಕ್ ವರದಿ ಚಳುವಳಿ ಬಗ್ಗೆ ನಮ್ಮ ನಿಲುವುಗಳು ಹೀಗಿವೆ:

೧. ಗೋಕಾಕ್ ವರದಿ ಯಥಾವತ್ ಜಾರಿ ಭಾಷಾ ಅಲ್ಪಸಂಖ್ಯಾತರ ಹಿತಕ್ಕೆ ಚ್ಯುತಿ ತರುವುದರಿಂದ, ಅದು ನಮಗೆ ಸಮ್ಮತವಿಲ್ಲ.
೨. ಕನ್ನಡ, ಆಡಳಿತ ಶಿಕ್ಷಣ ಮಾಧ್ಯಮ ಭಾಷೆಯಾಗಿ ಕನ್ನಡ ನಾಡಿನಲ್ಲಿ ಅಗ್ರಪಟ್ಟ ಪಡೆದುಕೊಳ್ಳಬೇಕು. ಇದಕ್ಕೆ ನಮ್ಮ ಪೂರ್ಣ ಸಮ್ಮತಿ ಇದೆ.
೩. ಈಗ ಸರ್ಕಾರ ಗೋಕಾಕ್ ವರದಿ ಮಾರ್ಪಾಟಿನ ೩೫೦ ಅಂಕಗಳು ಪ್ರಾಥಮಿಕ ಮಕ್ಕಳಿಗೆ ಕಲಿಯಲು ಹೊರೆಯಾಗುವುದರಿಂದ, ಸರ್ಕಾರದ ಈ ಶಾಲಾ ಮಾರ್ಪಾಟು ನಮಗೆ ಒಪ್ಪಿಗೆ ಇಲ್ಲ.
೪. ಒಟ್ಟು ಭಾಷಾ ಕಲಿಕೆಗೆ ೩೦೦ ಅಂಕಗಳು ಇರತಕ್ಕದ್ದು.

ಅ) ಕನ್ನಡ ಪ್ರಥಮ ಕಡ್ಡಾಯ ಭಾಷೆಯಾಗಿ ೧೦೦ ಅಂಕಗಳು.

ಆ) ದ್ವಿತೀಯ ಭಾಷೆಯಾಗಿ ಎಲ್ಲರೂ ಇಂಗ್ಲೀಷ್ ತೆಗೆದುಕೊಳ್ಳುವುದರಿಂದ, ಅದಕ್ಕೆ ೧೦೦ ಅಂಕಗಳು.

ಇ) ಅಲ್ಪಸಂಖ್ಯಾತರು ತಮ್ಮ ಮಾತೃ ಭಾಷೆಗಳನ್ನು ತೃತೀಯ ಭಾಷೆಯಾಗಿ ಮತ್ತು ಕನ್ನಡಿಗರು ಕ್ರಮವಾಗಿ ಅವರವರ ಮಾತೃ ಭಾಷೆ ಮತ್ತು ಹಿಂದಿಯನ್ನು ಅಧ್ಯಯನ ಮಾಡುವುದರಿಂದ ಅದಕ್ಕೆ ೧೦೦ ಅಂಕಗಳು.

ಈ) ಶಿಕ್ಷಣದಲ್ಲಿ 'ಪ್ರಥಮ'–ಇತ್ಯಾದಿ ದರ್ಜೆಗಳನ್ನು ನೀಡುವಾಗ, ಭಾಷಾ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಬಾರದು.

ನಮ್ಮ ದೇಶದಲ್ಲಿರುವ ಪ್ರೈಮರಿ ಶಾಲೆಗಳ ಸ್ಥಿತಿ, ಅಧ್ಯಾಪಕರ ಬೋದನಾವಿಧಾನ, ಪ್ರೈಮರಿ ಶಾಲಾ ಆಡಳಿತ ವ್ಯವಸ್ಥೆಗಳನ್ನು ನೋಡಿದರೆ, ಮಾತೃ ಭಾಷಾ ಕಲಿಕೆಯೂ ಸಮರ್ಥವಾಗಿರಲು ಸಾಧ್ಯವಿಲ್ಲ. ಆದ್ದರಿಂದ ಕನ್ನಡವನ್ನು ೧೦೦ ಅಂಕಗಳಿಗೆ ಅಚ್ಚುಕಟ್ಟಾಗಿ ಕಲಿಸಿ. ಆದರೆ ಅದು ಆಡಳಿತ ಭಾಷೆಯಾಗಬೇಕು. ಶಿಕ್ಷಣ ಮಾಧ್ಯಮವಾಗಬೇಕು. ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳೂ ಕನ್ನಡದಲ್ಲೇ ಆಗುವಂತೆ ನೋಡಿಕೊಳ್ಳಬೇಕು'

ಬಿಕೆಯವರ ಈ ಸಲಹೆಗಳು ಗೋಕಾಕ್ ಚಳುವಳಿಯ ಪರ–ವಿರೋಧಿಗಳವರಿಗೂ ಮತ್ತು ದಲಿತ ಚಳುವಳಿಯ ಪದಾಧಿಕಾರಿಗಳಿಗೂ ಭಾಷಾ ಹೋರಾಟದ ನಿಲುವು ಸ್ಪಷ್ಟತೆಯನ್ನು ತಂದುಕೊಟ್ಟಿತು. ಕನ್ನಡ ಕ್ರಿಯಾ ಸಮಿತಿ ದಸಂಸ ನಿಲುವನ್ನು ಸಮರ್ಥಿಸಿತು. ಮೈಸೂರಿನ ಕನ್ನಡ ಕ್ರಿಯಾ ಸಮಿತಿಯ ಪ. ಮಲ್ಲೇಶ್‌ರವರು, ನೂರು ಜನರ ಕ್ರಿಯಾ ಸಮಿತಿಯೊಳಗೆ, ಕೃಷ್ಣಪ್ಪನವರೂ ಸದಸ್ಯರಾಗಿರಬೇಕೆಂದು ಬಯಸಿದ್ದರು ಮತ್ತು ಈ ಸಂಬಂಧದಲ್ಲಿ ನಡೆಯುವ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಕೃಷ್ಣಪ್ಪನವರನ್ನು ಆಹ್ವಾನಿಸಿದ್ದರು. ಪ್ರೊ.ಬಿ.ಕೃಷ್ಣಪ್ಪನವರ ಭಾಷಾ ಶಾಸ್ತ್ರ ಅಧ್ಯಯನ ಹಾಗೂ ಅಧ್ಯಾಪನಾ ವೃತ್ತಿ ಹಾಗೂ ಜನ ಚಳುವಳಿಯ ಅನುಭವ ದಸಂಸವು ಗೋಕಾಕ್ ಚಳುವಳಿಯಲ್ಲಿ ಜನಪರ ನಿಲುವನ್ನು ನಾಡುನುಡಿಯ ಅಗ್ರಪಟ್ಟದೊಂದಿಗೆ ತೆಗೆದುಕೊಳ್ಳಲು ಸಾಧ್ಯವಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

**(ಮುಂದುವರೆಯುವುದು)**

---

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ವಿಶೇಷಾಂಕ ವಿಶೇಷವಾಗಿಯೇ ಬಂದಿದೆ. ಗಂಭೀರ ಬರಹಗಳೊಂದಿಗೆ ಲಘು, ಸೃಜನಶೀಲ ಬರಹಗಳು ಗಮನ ಸೆಳೆಯುತ್ತವೆ. ಲೋಹಿಯಾ–ಗಾಂಧಿ–ಅಂಬೇಡ್ಕರ್ ಕುರಿತು ಎರಡೂ ಲೇಖನಗಳು ಆಪ್ತವೆನಿಸುತ್ತವೆ. ಆದರೆ 'ಪಶ್ಚಿಮದ ಅವನತಿ....ಒಂದೇ ಪಟ್ಟಿಗೆ ಪೂರ್ಣ ತಲೆಯಲ್ಲಿ ಇಳಿಯಲು ನಿರಾಕರಿಸುತ್ತದೆ. ಅನುವಾದವೂ ಕ್ಲಿಷ್ಟವಾಗಿದೆ. ಸಮಕಾಲಿನ ಕನ್ನಡ ಸಾಹಿತ್ಯ ಕುರಿತ ಬರಹಗಳಲ್ಲಿ ಸಿರಾಜ್ ಅಹ್ಮದ್ ಅಭಿಪ್ರಾಯ ಪಡುವಂತೆ, ಸಾಹಿತ್ಯ ಇಂದು ಕತೆ, ಕಾವ್ಯಗಳಿಗೆ ಸೀಮಿತಗೊಳ್ಳದೆ, ಒಂದು ರೀತಿಯಲ್ಲಿ ಶುದ್ಧ ಸಾಹಿತ್ಯ ಪ್ರಾಕಾರ, ಓದುಗರ ಕೊರತೆಯಿಂದ ಬಳಲುತ್ತಿದ್ದು, ಬೇರೆಬೇರೆ ರೀತಿಯ ಚಿಂತನ ಬರಹಗಳು ಮುನ್ನಲೆಗೆ ಬರುತ್ತಿವೆ. ಹೊಸ ಓದುಗ ಪೀಳಿಗೆ ಸೃಷ್ಟಿಯಾಗುತ್ತಿಲ್ಲ, ಹೀಗಾಗಿ ಸಾಹಿತ್ಯವೆಂಬುದು ಬರಬರುತ್ತ ಕೇವಲ ಬರಹಗಾರರ ಆಡುಂಬೋಲವಾಗುವ ಅಪಾಯ ಎದುರಿಸಬಹುದು. ಚಿತ್ರದುರ್ಗದ ಪಾಳೆಯಗಾರರ ಕುರಿತು ಹನೂರುರವರ ಅವಲೋಕನಗಳು ಗಮನ ಸೆಳೆಯುತ್ತವೆ. ಪೋಪರ ವಿಭಿನ್ನ ನೋಟ (ಸಂಪಾದಕೀಯ) ಹೊಸ ಭರವಸೆ ಹುಟ್ಟಿಸುತ್ತದೆ.

ರೈತರ ಸರಣಿ ಸಾವುಗಳ ಕುರಿತು ಶಾಮಣ್ಣನವರ ಅಭಿಪ್ರಾಯವನ್ನೇ ಬಹಳ ಜನ ವ್ಯಕ್ತ ಪಡಿಸುತ್ತಾರೆ. ಹೆಚ್ಚು ನೀರಾವರಿ ಪ್ರದೇಶವಿರುವ ಮಂಡ್ಯದಲ್ಲಿಯೇ ಅಧಿಕ ಸಂಖ್ಯೆಯ ಸಾವುಗಳು ಸಂಭವಿಸುತ್ತಿರುವುದಕ್ಕೆ ಕೃಷಿಯೇತರ ಕಾರಣಗಳನ್ನು ಗುರುತಿಸಲಾಗುತ್ತಿದೆ. ಬೀಜ ಗೊಬ್ಬರಗಳನ್ನು ಕಳೆದುಕೊಂಡು, ಬ್ಯಾಂಕುಗಳ ಸಾಲವನ್ನು ನೆಚ್ಚಿಕೊಂಡು, ಸರಕಾರದ ಸಾಲಮನ್ನಾದ ಆಶೆಯ ಸಂಕೀರ್ಣ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕು ರೈತ ಒದ್ದಾಡುತ್ತಿದ್ದಾನೆ. ಸರಕಾರವನ್ನು ನಚ್ಚಿಕೊಳ್ಳದೆ ರೈತ ಸಹಜ ಸುಸ್ಥಿರ ಕೃಷಿಗೆ ಮರಳದ ಹೊರತು, ಕೃಷಿ ತನ್ನ ಬದುಕು, ಅದು ರಾಶಿರಾಶಿ ಹಣ ತರುವ ಉದ್ದಿಮೆ ಅಲ್ಲ, ಎಂದು ಗ್ರಹಿಸಿ ಮುನ್ನಡೆಯದ ಹೊರತು ಸರಣಿ ಸಾವುಗಳು ತಪ್ಪಿದ್ದಲ್ಲ. 'ಕ್ಷಮಿಸಿ ಮತ್ತು ಜೋಡಿಸಬಹುದೇ...' ಲೇಖನಗಳು ಬಹಳ ಆಪ್ತವಾಗಿವೆ. ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮ ಕುರಿತು ತಮ್ಮ ಕಳಕಳಿ, ಈ ಕುರಿತು ಸರಕಾರ ಮತ್ತು ಕನ್ನಡಪರ ಸಂಘಸಂಸ್ಥೆಗಳ ಗೋಸುಂಬೆತನದ ವರದಿಗಳ ಬಗ್ಗೆ ವರ್ಷದ ಹಿನ್ನೋಟದಲ್ಲಿ ಬರಬೇಕಿತ್ತು. ಈಗ ಕನ್ನಡದ ಅವಸಾನವನ್ನು ನಾವು ನೋಡುತ್ತ ಕೂಡ್ರಬೇಕಾಗಿದೆ....ಬರುವ ವರ್ಷ ಪತ್ರಿಕೆ ಇನ್ನೂ ಸಮೃದ್ಧವಾಗಿ ಬರಲಿ.

**–ವೆಂಕಟೇಶ ಮಾಚಕನೂರ,** ಧಾರವಾಡ

ನಾನು ಹೊಸ ಮನುಷ್ಯದ ೨೦೧೫ರ ವಿಶೇಷಾಂಕದಿಂದ ಪ್ರಾರಂಭಿಸಿದ ಹೊಸ ಓದುಗ. ಈ ಪತ್ರಿಕೆ ತನ್ನ ಗಂಭೀರ ಲೇಖನಗಳಿಂದ ನನ್ನನ್ನು ಎಷ್ಟು ಆಕರ್ಷಿಸಿತೆಂದರೆ, ಕೂಡಲೇ ನಾನು ಹತ್ತು ಚಂದಾದಾರರನ್ನು ಮಾಡಿಸಿಕೊಟ್ಟೆ. 'ನಮ್ಮ ಸಮಾಜವಾದಿಗಳು'ಪುಸ್ತಕ ತರಿಸಿಕೊಳ್ಳಲು ನಿರ್ಧರಿಸಿದೆ.

ಪ್ರಸ್ತುತ ಸಮಕಾಲೀನ ಸವಾಲುಗಳ ಮಂಥನದಲ್ಲಿ ರೈತರ ಆತ್ಮಹತ್ಯೆ ಸರಣಿ ಬಗ್ಗೆ ಸಮಗ್ರಚಿತ್ರಣದ ಲೇಖನ ರೈತರನ್ನು ತಮ್ಮ ಬಾಳ ತಾವು ಸರಿ ಪಡಿಸಿಕೊಳ್ಳುವಲ್ಲಿ ಪ್ರೇರೇಪಿಸುವಂತಿದೆ. ಇನ್ನು ಡಿ.ಎಸ್.ಎನ್.ರ ಲೋಹಿಯಾ ಮತ್ತು ಅಂಬೇಡ್ಕರ್ ಒಂದು ತುಲನಾತ್ಮಕ ನೋಟ ನನಗೆ ಬೇಕಾದ ಮಾರ್ಗದರ್ಶಿ ಚಿಂತನೆಗಳನ್ನು ಪರಿಚಯಿಸಿದ್ದಲ್ಲದೆ ಸದ್ಯದ ಪ್ರಚಲಿತ ಸವಾಲುಗಳಿಗೆ ಸಮರ್ಪಕ ಚಿಕಿತ್ಸಾದೃಷ್ಟಿಯನ್ನೂ ನೀಡಿತು. ಪಂಕಜ ಮಿಶ್ರಾರ ಸಂದರ್ಶನ ವ್ಯವಧಾನದ ಓದನ್ನು ಅಪೇಕ್ಷಿಸುವಂತಿದ್ದು, ಹೊಸ ಸತ್ಯಗಳನ್ನು ಹೇಳುವಂತಿದೆ. ಪಂಕಜ ಮಿಶ್ರರೊಡನೆಯ ಸಂದರ್ಶನದ ಅನುವಾದ ಮಹತ್ವದ್ದಾಗಿದ್ದು ಅನೇಕ ಹೊಸ ಸತ್ಯಗಳನ್ನು ಹೇಳುತ್ತದೆ. ಎಸ್.ಮುಂಜುನಾಥ್‌ರ 'ಜೋಡಿಸಬಹುದೇ ಹರಿದ ಎಳೆಯನ್ನ' ಎನ್ನುವ ಲೇಖನ ಅದರಲ್ಲಿ ಕಬೀರನ ಒಂದು ವಚನದೊಂದಿಗೆ ಎಷ್ಟು ಪರಿಣಾಮಕಾರಿಯೋ ಅಷ್ಟೇ ಎಂ.ಬಿ.ನಟರಾಜ್‌ನ 'ದಯವಿಟ್ಟು ಕ್ಷಮಿಸಿ' ಲಘು ಲೇಖನ ಅಷ್ಟೇ ಮನೋರಂಜಕವಾಗಿತ್ತು.

**–ಜಿ.ಸಿ. ಬಸವಲಿಂಗಪ್ಪ,** ದಾವಣಗೆರೆ

ವಿಶೇಷಾಂಕ ತುಂಬ ಚೆನ್ನಾಗಿ ಹೊರಬಂದಿದೆ. ಸಂಚಿಕೆಯಲ್ಲಿ ಸಾಹಿತ್ಯ ಮತ್ತು ಸಮಾಜ ಕುರಿತ ನಿಮ್ಮ ಆಳದ ಕಾಳಜಿಗಳನ್ನು ಯಾರಾದರೂ ಗಮನಿಸಬಹುದು.

**–ಮಲ್ಲಿಕಾರ್ಜುನ ಹಿರೇಮಠ,** ಧಾರವಾಡ

ಹೊಸ ಮನುಷ್ಯದ ವಾರ್ಷಿಕ ವಿಶೇಷ ಸಂಚಿಕೆ ಅಂಚೆಯಲ್ಲಿ ಬಂದ ತಕ್ಷಣ ಬಿಡಿಸಿ ನೋಡುತ್ತಿದ್ದಂತೆ ಅದರ ತಾಜಾತನ ಮತ್ತು ವಿಷಯ ವೈವಿಧ್ಯ ಅವ್ಯಕ್ತ ಖುಷಿ ತರಿಸಿತು. ಅಪರೂಪಕ್ಕೆ ಗೆಳೆಯನೊಬ್ಬನೋ, ನೆಂಟರೊಬ್ಬರೋ ಬಂದಾಗ ಆಗುವಾಗಿನ ಖುಷಿ. ವಿರಾಮವಾದಾಗಲೆಲ್ಲಾ ಓದುತ್ತಿದ್ದೇನೆ.

ನಿಮ್ಮಲ್ಲಿನ ನನಗೆ ಹಿಡಿಸದ ಒಂದು ಗುಣ ಎಂದರೆ, ನೀವು ಪ್ರತಿಪಾದಿಸುವ ವಿಚಾದ ಬಗ್ಗೆ ಭಿನ್ನ ನಿಲುವು ವ್ಯಕ್ತವಾದಾಗ ನೀವು ನಿಮ್ಮ ವಿಚಾರದ ಸಮರ್ಥನೆಗೆ ತೊಡಗುವುದು. ಆಗ ನಿಮ್ಮ ಬಗ್ಗೆಯೇ ಅನುಮಾನ ಶುರುವಾಗುವಂತಾಗುತ್ತದೆ. ಅಂತಿಮ ತೀರ್ಮಾನವನ್ನು ಓದುಗರಿಗೇ ಬಿಡುವುದು ಒಳಿತಲ್ಲವೇ? ಉದಾಹರಣೆಗೆ ಈ ವಿಶೇಷಾಂಕದಲ್ಲಿ ಇಂದಿರಾ ಕೃಷ್ಣಪ್ಪನವರು ನಿಮ್ಮ ಮದುವೆಯ ಬಗ್ಗೆ ಬರೆದ ಕೆಲವು ಸಂಗತಿಗಳ ಬಗ್ಗೆ ಇದೇ ಸಂಚಿಕೆಯಲ್ಲಿ ನೀವು ಮೂಗು ತೂರಿಸಿದ್ದು ನನಗೆ ಸರಿಬರಲಿಲ್ಲ. ಲೇಖನ ಮಾಲೆ ಮುಗಿದ ನಂತರ ನಿಮ್ಮ ಅಭಿಪ್ರಾಯಗಳನ್ನು ದಾಖಲಿಸಬಹುದಿತ್ತು.

**–ಸರ್ಜಾಶಂಕರ ಹರಳೀಮಠ,** ಶಿವಮೊಗ್ಗ

ವಿಶೇಷ ಸಂಚಿಕೆಯಲ್ಲಿ ರೈತರ ಆತ್ಮಹತ್ಯೆಯ ಕುರಿತ ನಿಮ್ಮ ಖಚಿತ ಅಭಿಪ್ರಾಯಗಳು ಹಾಗು ಕಡಿದಾಳ ಶಾಮಣ್ಣನವರ ಸತ್ಯನಿಷ್ಠ ಉತ್ತರಗಳು, ಪ್ರತ್ಯೇಕ ರಾಜ್ಯದ ಕೂಗಿನ ಬಗೆಗೆ ವಿವಿಧ ಗಣ್ಯರು ಮಂಡಿಸಿದ ವಿಚಾರಗಳು, ಸಮಕಾಲೀನ ಕನ್ನಡ ಸಾಹಿತ್ಯದ ಬಗೆಗೆ ಐವರು ಸಾಹಿತಿ–ಚಿಂತಕರ ಸ್ಪಷ್ಟ ನೋಟಗಳು, ಗಾಂಧಿ,ಲೋಹಿಯಾ ಮತ್ತು ಅಂಬೇಡ್ಕರ ಅವರ ಚಿಂತನೆಗಳ ತೌಲನಿಕ ವಿವೇಚನೆ, ಹೊಸ ಬಗೆಯ ಕವನಗಳು ಹಾಗು ಇನ್ನೂ ಅನೇಕ ವೈಚಾರಿಕ ಬರಹಗಳು–ಎಲ್ಲ ಮೌಲಿಕವಾಗಿವೆ.ನಿಮ್ಮ ಸಂಪಾದಕೀಯ ವಿಶೇಷ ಉಲ್ಲೇಖಕ್ಕೆ ಅರ್ಹವಾಗಿದ್ದು, ಅದರ ಬಗ್ಗೆ ವಿವರವಾಗಿ ಮತ್ತೆ ಬರೆಯುವೆ.

**–ಡಾ. ಬಸವರಾಜ ಸಾದರ,** ಬೆಂಗಳೂರು

ಪತ್ರಿಕೆ ನಾಲ್ಕು ವರ್ಷ ದಾಟಿರುವುದು ಸಂತೋಷ. ಆದರೆ ಸಂಪಾದಕರಾಗಿ ನೀವು ಹೆಚ್ಚು 'ಡೆಮೊಕ್ರಾಟ್' ಆಗಬೇಕು ಮತ್ತು ಸಮಾಜವಾದ ನಿಮಗೆ ಒಂದು 'ಡಾಗ್ಮಾ' ಆಗಬಾರದು. ಇನ್ನು, ಹಾಡುವ ಧಾಟಿಯ ನನ್ನ ಪದ್ಯವನ್ನು ನಿಮ್ಮ ಪುಟಕ್ಕೆ ಹೊಂದಿಸಲು ಹೋಗಿ ಅದಕ್ಕೆ ಅನ್ಯಾಯ ಮಾಡಿದ್ದೀರಿ.

**–ಸತ್ಯನಾರಾಯಣರಾವ್ ಅಣತಿ,** ಶಿವಮೊಗ್ಗ

ದಾರಿ ತಪ್ಪಿರುವ ವಿಜ್ಞಾನ-ತಂತ್ರಜ್ಞಾನ

# ಭಾರತದ ರೈತರನ್ನು ಕೊಲ್ಲುತ್ತಿರುವ ಜಿ.ಎಮ್. ಹತ್ತಿ

-ಅಮಿತ್ ದವೆ



ಹತ್ತಿ ಭಾರತದ ಒಂದು ಪ್ರಮುಖ ವಾಣಿಜ್ಯ ಬೆಳೆ. ಮಹಾರಾಷ್ಟ್ರ, ಗುಜರಾತ್, ಆಂಧ್ರ ಪ್ರದೇಶ್ ಹಾಗೂ ಕರ್ನಾಟಕದಲ್ಲಿ ಈ ಬೆಳೆಯನ್ನು ವ್ಯಾಪಕವಾಗಿ ಬೆಳೆಯಲಾಗುತ್ತದೆ. ಚೀನಾದ ನಂತರ ಅತಿ ಹೆಚ್ಚು ಹತ್ತಿ ಬೆಳೆಯುವ ರಾಷ್ಟ್ರವೆಂದರೆ ಭಾರತ. ೨೦೦೮–೯ರ ವರ್ಷದಲ್ಲಿ ಪ್ರಪಂಚದ ಒಟ್ಟು ಹತ್ತಿ ಉತ್ಪಾದನೆಯ ಶೇಕಡಾ ೨೧ರಷ್ಟು ಹತ್ತಿ, ಭಾರತದಲ್ಲಿ ಉತ್ಪನ್ನವಾಯಿತು. ಇಲ್ಲಿ ಸುಮಾರು ೧.೨ ಕೋಟಿ ಹೆಕ್ಟೇರ್ (ಅಂದರೆ, ಪ್ರಪಂಚದಲ್ಲಿ ಕೃಷಿಗಾಗಿ ಬಳಸಲ್ಪಡುತ್ತಿರುವ ಒಟ್ಟು ಭೂಮಿಯ ಕಾಲು ಭಾಗದಷ್ಟು) ಜಮೀನಿನಲ್ಲಿ ಹತ್ತಿ ಬೆಳೆಯಲಾಗುತ್ತಿದೆ. ಸುಮಾರು ಹತ್ತು ವರ್ಷಗಳ ಮುಂಚೆ ಇಲ್ಲಿ ಬೆಳೆಯುತ್ತಿದ್ದುದು ಹೈಬ್ರಿಡ್ ತಳಿಯ ಹತ್ತಿ. ೨೦೦೨ರಲ್ಲಿ ಜಿ.ಎಮ್.(Genetically modified-ಜೈವಿಕವಾಗಿ ಮಾರ್ಪಡಿಸಲ್ಪಟ್ಟ) ಹತ್ತಿ ಎಂಬ ಹೊಸ ತಳಿಯನ್ನು 'ಮೊನ್ಸಾನ್ಟೋ' ಎಂಬ ಬಹು ರಾಷ್ಟ್ರೀಯ ಕಂಪನಿ ಭಾರತಕ್ಕೆ ಪರಿಚಯಿಸಿತು. ಈಗ ದೇಶದಲ್ಲಿ ಹತ್ತಿ ಬೆಳೆಯುವ ಜಮೀನಿನ ಶೇಕಡಾ ೯೦ ರಷ್ಟು ಜಮೀನಿನಲ್ಲಿ ಜಿ.ಎಮ್. ಹತ್ತಿ ಬೆಳೆಯಲಾಗುತ್ತಿದೆ.

**ಜಿ.ಎಮ್. ಹತ್ತಿ ಏನಿದು?**

ಹತ್ತಿ ಬೆಳೆಯನ್ನು ಬಾಧಿಸುವ ಹಲವಾರು ಕ್ರಿಮಿಗಳಲ್ಲಿ ಪ್ರಮುಖವಾದುದು *ಬೋಲ್ವರ್ಮ್* ಕೀಟ. ಇದರ ನಾಶಕ್ಕಾಗಿ ರೈತರು ಮಾಡುತ್ತಿದ್ದ ವಿಪರೀತ ಖರ್ಚನ್ನು ನಿವಾರಿಸಲು ಹೊಸ ಹತ್ತಿ ತಳಿಯನ್ನು *ಮೊನ್ಸಾನ್ಟೋ* ಕಂಪನಿ ಅಭಿವೃದ್ಧಿ ಪಡಿಸಿತು. ವಿಶೇಷವೆಂದರೆ, ಹತ್ತಿ ತಳಿಯ ಮೂಲಗುಣವನ್ನು ಹೊತ್ತಿರುವ ಅದರ ವಂಶವಾಹಿನಿಯನ್ನೇ ಬದಲಾಯಿಸಿ ತಯಾರಾದ ಈ ಹೊಸ ತಳಿ ಹೆಚ್ಚಿನ ಇಳುವರಿ ನೀಡಬಲ್ಲುದೆಂದೂ ಹೇಳಲಾಯಿತು. ಈ ತಳಿಯ ಭಾರಿ ಮಟ್ಟದ ಕ್ಷೇತ್ರಪ್ರಯೋಗ ನಡೆಯುವುದು *ಮೊನ್ಸಾನ್ಟೋ* ಕಂಪನಿಗೆ ಬೇಕಿತ್ತು. ಈ ತಂತ್ರಜ್ಞಾನ ಇಡೀ ಜೀವಸಂಕುಲದ ಮೇಲೆ ಮಾಡಬಹುದಾದ ಪರಿಣಾಮಗಳ ಬಗ್ಗೆ ಹಲವು ವಿಜ್ಞಾನಿಗಳು ಆತಂಕ ವ್ಯಕ್ತ ಪಡಿಸಿದ್ದರಿಂದ ಹಲವಾರು ದೇಶಗಳು ಈ ಪ್ರಯೋಗವನ್ನು ತಂತಮ್ಮ ದೇಶದಲ್ಲಿ ನಡೆಸಲು ಬಿಡಲಿಲ್ಲ. ಭಾರತದಂತಹ ತೃತೀಯ ವಿಶ್ವದ ದೇಶದ ಮೇಲೆ ಮೊನ್ಸಾನ್ಟೋ ಕಂಪನಿ ಭಾರಿ ಒತ್ತಡ ತಂದಿತು. ಈ ಪ್ರಯೋಗದಿಂದ ರೈತರ ಬಾಳು ಹಸನಾಗುವುದರ ಜೊತೆಗೆ, ಹೊಸ ತಂತ್ರಜ್ಞಾನದ ಬೆಳವಣಿಗೆಗೆ ದೇಶ ತನ್ನ ಕೊಡುಗೆ ಸಲ್ಲಿಸದಂತಾಗುತ್ತದೆಂದೂ ಬಿಂಬಿಸಲಾಯಿತು. ತತ್ಪರಿಣಾಮವಾಗಿ ನಮ್ಮ ದೇಶದಲ್ಲಿ ಮೊನ್ಸಾನ್ಟೋ ಕಂಪನಿಗೆ ಪರವಾನಗಿ ಸಿಕ್ಕಿತು. ಈ ಕಂಪನಿ ಭಾರತದ್ದೇ ಆದ *ಮೆಹೈಕೊ* ಎಂಬ ಕಂಪನಿಯ ಜೊತೆ ಸೇರಿ 'ಬೋಲ್ಗಾರ್ಡ್' ಎಂಬ ಹೆಸರಿನ ಈ ಹೊಸ ತಳಿಯ ಬಗ್ಗೆ 'ಉಗ್ರ ಪ್ರಚಾರ' ನಡೆಸಿದ ಫಲವಾಗಿ ಕಳೆದೊಂದು ದಶಕದಿಂದ ಈ ತಳಿ ಭಾರತದ ಶೇಕಡಾ ೯೦ ರಷ್ಟು ಹತ್ತಿ ಜಮೀನನ್ನು ಆಕ್ರಮಿಸಿದೆ.

ಆದರೆ ವರುಷಗಳು ಕಳೆದಂತೆ ನಿರೀಕ್ಷೆಗಳು ಹುಸಿಯಾಗತೊಡಗಿದವು. ರೈತರ ಲಾಭ ಹೆಚ್ಚುವ ಬದಲು ನಷ್ಟ ಏರತೊಡಗಿತು.

**ಮತ್ತೆ ಹೆಚ್ಚಿದ ಕೀಟಬಾಧೆ**

*ಬೋಲ್ವರ್ಮ್* ಕೀಟಬಾಧೆ ಕಡಿಮೆಯಾಯಿತಾದರೂ ಇತರ ಕೀಟಗಳ ಬಾಧೆ ಹೆಚ್ಚಿ ಮತ್ತೆ ಹೆಚ್ಚು ಹೆಚ್ಚು ಕ್ರಿಮಿನಾಶಕ ಸಿಂಪಡಣೆಗೇ ರೈತ ಮೊರೆ ಹೋಗ ಬೇಕಾಯಿತು. ಕಳೆದ ಹತ್ತು ವರ್ಷಗಳಲ್ಲಿ ಹತ್ತಿ ಬೆಳೆಯುವ ಜಮೀನಿನಲ್ಲಿ ಕೀಟನಾಶಕ ಬಳಕೆ ಹೆಚ್ಚಿದೆ ಎಂದು ಸರ್ಕಾರದ ಮಾಹಿತಿ ತಿಳಿಸುತ್ತವೆ. ಜೊತೆಗೆ ಬೋಲ್ವರ್ಮ್ ಕೀಟವೂ ದಿನ ಕಳೆದಂತೆ ಜಿ.ಎಮ್. ಹತ್ತಿ ತಳಿಗೆ ನಿರೋಧಕ ಶಕ್ತಿ ಬೆಳೆಸಿಕೊಂಡು ಬಿಟ್ಟಿತು. ಇದರಿಂದಾಗಿ ಕೀಟನಾಶಕದ ಬಳಕೆ ಮತ್ತೆ ಏರತೊಡಗಿತು. ೨೦೧೦ರಲ್ಲಿ *ಮೆಹೈಕೋ* ಕಂಪನಿ ಬಿಡುಗಡೆ ಮಾಡಿದ ಸುಧಾರಿತ ತಳಿ ಕೂಡ ಇದಕ್ಕೆ ಹೊರತಾಗಲಿಲ್ಲ. ಮಹಾರಾಷ್ಟ್ರ ಒಂದರಲ್ಲೇ ೨೦೦೬ರಲ್ಲಿ ೩೧೦೦ ಮೆಟ್ರಿಕ್‌ಟನ್‌ನಷ್ಟಿದ್ದ ಕೀಟನಾಶಕ ಬಳಕೆ ೨೦೧೦ ರ ವೇಳೆಗೆ ೪೬೦೦ ಮೆಟ್ರಿಕ್ ಟನ್‌ಗೆ ಏರಿತು.

**ಹೆಚ್ಚಿದ ಗೊಬ್ಬರ ಹಾಗೂ ಇತರ ವಸ್ತುಗಳ ಖರ್ಚು**

ಜಿ.ಎಮ್. ತಳಿಗೆ ಗೊಬ್ಬರ ಹೆಚ್ಚು ಬೇಕಾಗುತ್ತದೆ ಎಂಬುದು ರೈತರಿಗೆ ಕಾಲ ಕ್ರಮೇಣ ತಿಳಿದು ಬಂತು. ಇಳುವರಿ ಹೆಚ್ಚಿಸಲು, ಹೆಚ್ಚಿನ ಗೊಬ್ಬರಕ್ಕೆ ಮೊರೆ ಹೋಗದೇ ವಿಧಿ ಇಲ್ಲ ಎಂಬಂತಾಯಿತು. ಜೊತೆಗೆ ಹೆಚ್ಚಿನ ನೀರು ಮತ್ತು ಕಳೆ ತೆಗೆಯುವ ಕೂಲಿಯಿಂದಾಗಿ ಬೆಳೆಗೆ ತಗುಲುವ ವೆಚ್ಚ ಏರಿತು. ಮೊದಮೊದಲು, ಮೇಲೇರಿದ ಇಳುವರಿ ಹಾಗೂ ತತ್ಫಲವಾದ ಲಾಭ, ಬರುಬರುತ್ತಾ, ಹೆಚ್ಚಿನ ಗೊಬ್ಬರ ಖರ್ಚಿನಿಂದಾಗಿ, ಇಳಿಮುಖ ಕಂಡಿತು.

**ಹೆಚ್ಚಿದ ಬೀಜದ ಬೆಲೆ**

ಈ ತಳಿಯ ಇನ್ನೊಂದು ವಿಶೇಷವೆಂದರೆ ಇದರ ಬೀಜ ತಯಾರಿಕೆ ಒಂದು ಸಂಕೀರ್ಣ ಕಾರ್ಯಕ್ರಮವಾದ್ದರಿಂದ ಅದಕ್ಕೆ ತಗುಲುವ ವೆಚ್ಚ ಹೆಚ್ಚು; ಜೊತೆಗೆ, ಬೀಜ ತಯಾರಿಕಾ ಕ್ರಮ ಕಂಪನಿಯ ಸ್ವಾಮ್ಯಕ್ಕೆ ಸೇರಿರುವುದರಿಂದ, ಬೀಜಗಳನ್ನು ಕಂಪನಿ ನಿಗದಿ ಪಡಿಸಿದ ದರದಲ್ಲೇ, ಅವರಿಂದಲೇ ಕೊಳ್ಳಬೇಕಾದ್ದು ಅನಿವಾರ್ಯ. ಸಾಮಾನ್ಯ ಹೈಬ್ರಿಡ್ ತಳಿಗೆ ಹೋಲಿಸಿದಲ್ಲಿ ಈ ಬೀಜಗಳ ಬೆಲೆ ೩ರಿಂದ ೮ಪಟ್ಟು ಹೆಚ್ಚು. ಕೆಲವೊಮ್ಮೆ ಕೃತಕ ಅಭಾವ ಸೃಷ್ಟಿಸಿ ಬೆಲೆ ಹೆಚ್ಚಿಸಿದ ಆರೋಪವೂ ಬೀಜದ ಕಂಪನಿಯ ಮೇಲಿದೆ. ಈ ಮಾರಾಟದಿಂದಾಗಿ, ಕಳೆದ ಹತ್ತು ವರ್ಷಗಳಲ್ಲಿ ಮೊನ್ಸಾನ್ಟೋ ಕಂಪನಿಗೆ 'ರಾಯಲ್ಟಿ' ರೂಪದಲ್ಲಿ ಹೋಗಿರುವ ಹಣ, ಸುಮಾರು ೧೬೦೦ ಕೋಟಿ ರೂಪಾಯಿಗಳು ಎಂದು ಅಂದಾಜು ಮಾಡಲಾಗಿದೆ. ಕಡೆಗೆ ಈ ಬೆಲೆ ಹೆಚ್ಚಳ ಎಷ್ಟಾಯಿತೆಂದರೆ ಸರ್ಕಾರ ಈ ಬೀಜಗಳನ್ನು ಗುತ್ತೇದಾರಿ ನಿಯಂತ್ರಣ ಕಾಯ್ದೆ ಹಾಗೂ ಅತ್ಯಗತ್ಯ ವಸ್ತುಗಳ ಕಾಯ್ದೆಯಡಿ ತಂದು ಬೆಲೆ ನಿಯಂತ್ರಿಸಬೇಕಾಯಿತು.

ಈ ಎಲ್ಲ ಹೆಚ್ಚಿದ ಖರ್ಚು ಹಾಗೂ ಕಡಿಮೆಯಾದ ಇಳುವರಿಯಿಂದಾಗಿ ಭಾರತದ ರೈತರು ಪಡಬಾರದ ಪಾಡು ಪಡಬೇಕಾಗಿ ಬಂದಿದೆ. ಹೆಚ್ಚಿದ ಖರ್ಚಿಗೆ ಸಾಲದ ಮೊರೆ ಹೋದ ರೈತರು, ತಗ್ಗಿದ ಇಳುವರಿಯಿಂದಾಗಿ ಸಾಲದ ಶೂಲದಲ್ಲಿ ಸಿಕ್ಕಿ ಆತ್ಮಹತ್ಯೆಯ ಮೊರೆ ಹೋಗುತ್ತಿದ್ದಾರೆ. ೨೦೦೮ರಲ್ಲಿ ೧೬,೧೯೬ ಜನ ಹತ್ತಿಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡಿದ್ದುಂಟು. ಈ ಸಂಖ್ಯೆ ೨೦೦೯ ರಲ್ಲಿ ೧೭,೩೬೮ ಕ್ಕೆ ಏರಿತು. ಕಳೆದ ಹದಿನೈದು ವರ್ಷಗಳಲ್ಲಿ ಆತ್ಮಹತ್ಯೆಯಿಂದ ಸತ್ತ ರೈತರ ಸಂಖ್ಯೆ ಎರಡೂವರೆ ಲಕ್ಷಕ್ಕೇರಿದೆ.

ಆಗಸ್ಟ್ ೨೦೧೨ರಲ್ಲಿ ಬಂದ ನಮ್ಮ ಸಂಸತ್ತಿನ ಕೃಷಿ ಸಂಸದೀಯ ಸಮಿತಿಯ ವರದಿಯ ತೀರ್ಮಾನವೆಂದರೆ :

'ಮೊದಲ ಕೆಲ ವರ್ಷಗಳ ಬೆಳೆ ವೃದ್ಧಿಯನ್ನು ಬಿಟ್ಟರೆ, ಜಿ.ಎಮ್. ಹತ್ತಿಯಿಂದ ಭಾರತದ ಮಧ್ಯಮ ಹಾಗೂ ಸಣ್ಣ ಪ್ರಮಾಣದ ರೈತರಿಗೆ ಆದ ಉಪಯೋಗಕ್ಕಿಂತ ಹಾನಿಯೇ ಹೆಚ್ಚು. ಈ ಪ್ರಯೋಗವನ್ನು ಸರಿಯಾದ ರೀತಿಯಲ್ಲಿ ಉಸ್ತುವಾರಿ ಮಾಡುವ ಸರ್ಕಾರಿ ಸಂಸ್ಥೆಗಳು ಹಾಗೂ ಕಾಯ್ದೆಗಳನ್ನು ಜಾರಿಗೊಳಿಸದೇ ಗತ್ಯಂತರವಿಲ್ಲ.'

ಜಿ.ಎಮ್. ಬೆಳೆಗಳ ಸಂಪೂರ್ಣ ನಿಷೇಧಕ್ಕೆ ಈ ಸಮಿತಿ ಕರೆ ನೀಡಿದೆ. ಇತ್ತೀಚೆಗೆ ಕರ್ನಾಟಕ ಸರ್ಕಾರವೂ ಈ ಜಿ.ಎಮ್. ತಳಿಯನ್ನು ನಿಷೇಧಿಸಿದೆ. ಅಕ್ರಮ ದಾಸ್ತಾನಿನ ಮೂಲಕ ಕೃತಕವಾಗಿ ಬೀಜಗಳ ಬೆಲೆ ಏರಿಸಿತೆಂದು ಆರೋಪಿಸಿ *ಮೆಹೈಕೋ* ಕಂಪನಿಯ ವಿರುದ್ಧ ೨೦೧೨ರಲ್ಲಿ ಮಹಾರಾಷ್ಟ್ರ ಸರ್ಕಾರ ಕಾನೂನು ಕ್ರಮ ಜರುಗಿಸುತ್ತಿದೆ. ಇಷ್ಟೆಲ್ಲಾ ಆದರೂ ನಮ್ಮ ಪತ್ರಿಕೆಗಳು ರೈತರ ಆತ್ಮಹತ್ಯೆಗೂ ಜಿ.ಎಮ್. ಹತ್ತಿ ಬೇಸಾಯಕ್ಕೂ ಇರುವ ಸಂಬಂಧದ ಬಗ್ಗೆ ಮಾತನಾಡದೇ ಇರುವುದು ಒಂದು ದೊಡ್ಡ ವಿಪರ್ಯಾಸ..

(ಕನ್ನಡಕ್ಕೆ: ಎಂ.ಆರ್. ರಾಮಶೇಷ
ಕೃಪೆ: ***ರಷ್ಯಾ ಟುಡೇ ಜಾಲತಾಣ***)

# ತಳಮಟ್ಟದ ಜನರ ಆಂದೋಲನಗಳು ಅಣುವಿದ್ಯುಚ್ಛಕ್ತಿಯನ್ನೇಕೆ ವಿರೋಧಿಸುತ್ತವೆ?

–ಪ್ರಫುಲ್ ಬಿದ್ವಾಯಿ

(ಕನ್ನಡಕ್ಕೆ: ಟಿ.ಎಲ್. ರೇಖಾಂಬ)



**ಇತ್ತೀಚೆಗೆ ನಮ್ಮನ್ನಗಲಿದ ಖ್ಯಾತ ಎಡಪಂಥೀಯ ಅಂಕಣಕಾರ ಪ್ರಫುಲ್ ಬಿದ್ವಾಯಿ(1949–2015) ಅವರಿಗೆ ಶ್ರದ್ಧಾಂಜಲಿಯಾಗಿ ನಮ್ಮ ವಿಶೇಷಾಂಕಕ್ಕಾಗಿ ಅನುವಾದಿಸಿದ್ದ ಈ ಲೇಖನವನ್ನು ಸ್ಥಳಾಭಾವದ ಕಾರಣ ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.**

**ಹಲವು ರಾಷ್ಟ್ರೀಯ ಆರ್ಥಿಕ ಪತ್ರಿಕೆಗಳಲ್ಲಿ ಕೆಲಸ ಮಾಡಿ ನುರಿತ ಪತ್ರಕರ್ತರೂ ಆಗಿದ್ದ ಬಿದ್ವಾಯಿಯವರು ಜನಪರಹೋರಾಟಗಳಲ್ಲಿ ಭಾಗವಹಿಸಿದವರು ಕೂಡ. ಅಂತಾರಾಷ್ಟ್ರೀಯ ಸಂಬಂಧಗಳು, ನಿಶ್ಶಸ್ತ್ರೀಕರಣ, ಜಾಗತಿಕ ಶಾಂತಿ, ಅಣುಶಕ್ತಿ ವಿರೋಧಿ ಹೋರಾಟ, ಸುಸ್ಥಿರ ಅಭಿವೃದ್ಧಿ ಇತ್ಯಾದಿ ವಿಷಯಗಳ ಬಗ್ಗೆ ವಿಶೇಷ ಆಸಕ್ತಿ ಇದ್ದ ಅವರು ಇಲ್ಲಿನ ಈ ಲೇಖನದಲ್ಲಿ ಭಾರತ ಅಭಿವೃದ್ಧಿಯ ಹೆಸರಿನಲ್ಲಿ ಹಲವು ದೇಶಗಳೊಡನೆಯ ಒಪ್ಪಂದಗಳೊಂದಿಗೆ ಅಣುಶಕ್ತಿ ಉತ್ಪಾದನೆಗೆ ಭಾರೀ ಪ್ರಮಾಣದಲ್ಲಿ ಸಜ್ಜಾಗುತ್ತಿರುವ ಸಂದರ್ಭದಲ್ಲಿ ಬರೆದಿರುವ ತಮ್ಮ ಈ ಲೇಖನದಲ್ಲಿ ಅಣುಶಕ್ತಿ ಉತ್ಪಾದನೆಯ ಆರ್ಥಿಕತೆ ಮತ್ತು ಅಪಾಯಗಳೆರಡನ್ನೂ ವಿವರವಾಗಿ ಚರ್ಚಿಸಿದ್ದಾರೆ.–ಸಂ.**

–

**ಜ**ಗತ್ತಿನ ಇತಿಹಾಸದಲ್ಲೇ ಅತ್ಯಂತ ಘೋರ ಪರಮಾಣು ರಿಯಾಕ್ಟರ್ ದುರಂತ ಸಂಭವಿಸಿದ್ದು ಮಾರ್ಚ್ ೧೧, ೨೦೧೧ ರಂದು ಜಪಾನಿನ ಫುಕುಶಿಮಾದಲ್ಲಿ, ಅದಕ್ಕೂ ಮೊದಲೇ ಅಣು ವಿದ್ಯುತ್ ಉತ್ಪಾದನೆಯನ್ನು ವಿರೋಧಿಸುವ ಬಹಳಷ್ಟು ಪ್ರತಿಭಟನಾತ್ಮಕ ಆಂದೋಲಗಳನ್ನು ಈ ಜಗತ್ತು ಕಂಡಿದೆ. ಅವುಗಳಲ್ಲನೇಕವು 'ನಮ್ಮ ಹಿತ್ತಿಲಲ್ಲಿ ಬೇಡ' ಎಂಬ ಘೋಷಣೆಯೊಂದಿಗೆ ಆರಂಭಗೊಂಡಂತಹವು. ತಮ್ಮ ಸುತ್ತಮುತ್ತಲ ಪ್ರದೇಶದಲ್ಲಿ ಪರಮಾಣು ರಿಯಾಕ್ಟರ್‌ಗಳು ಇರುವುದು ಒಳ್ಳೆಯದೂ ಅಲ್ಲ, ಸುರಕ್ಷಿತವೂ ಅಲ್ಲ ಎಂಬ ಜನಸಾಮಾನ್ಯರ ಮತ್ತು ಸಮುದಾಯಗಳ ಗ್ರಹಿಕೆಯನ್ನು ಅಂತಹ ಚಳುವಳಿಗಳು ಎತ್ತಿಹಿಡಿದವು. ಈ ರೀತಿಯ ಚಳುವಳಿಗಳಿಗೆ ಭಾರತವೇನೂ ಹೊರತಲ್ಲ. ಗುಜರಾತ್‌ನ ಕಾಕ್ರಾಪಾರ್ ಮತ್ತು ಉತ್ತರಪ್ರದೇಶದ ನರೋರಾಗಳಲ್ಲಿನ ಉದ್ದೇಶಿತ ಅಣುಸ್ಥಾವರಗಳಿಂದ ಮೊದಲ್ಗೊಂಡು ೧೯೭೦ರ ದಶಕದಿಂದೀಚೆಗೆ ಅನೇಕ ಅಣುವಿರೋಧಿ ಹೋರಾಟಗಳು ಭಾರತದಲ್ಲಿ ನಡೆಯುತ್ತಲೇ ಬಂದಿವೆ.

ಫುಕುಶಿಮಾದಲ್ಲಿ, ಮೂರು ರಿಯಾಕ್ಟರ್‌ಗಳ ಒಡಲಲ್ಲಿ ಇಂಧನ ಕರಗುವಿಕೆಯಿಂದ ಘಟಕಗಳು ಸ್ಫೋಟವಾಗಿ ಈ ಹೊತ್ತಿಗೆ ನಾಲ್ಕು ವರ್ಷಗಳು ಸಂದಿದ್ದರೂ ಇನ್ನೂ ಬಿಡುಗಡೆಯಾಗುತ್ತಿರುವ ಅಪಾರ ಪ್ರಮಾಣದ ವಿಕಿರಣಗಳಿಂದಾಗಿ ಅದೇ ವಿಷಮಸ್ಥಿತಿ ಮುಂದುವರಿದಿದೆ. ಕೇವಲ ಆ ಪ್ರದೇಶವನ್ನು ಸ್ವಚ್ಛಗೊಳಿಸಲು(ವಿಕಿರಣ ಮುಕ್ತಗೊಳಿಸಲು) ನಾಲ್ಕು ದಶಕಗಳು ಬೇಕಾಗುತ್ತವೆ ಮತ್ತು ಕನಿಷ್ಠ ೨೦೦ ಬಿಲಿಯನ್ ಡಾಲರ್ ಖರ್ಚು ಮಾಡಬೇಕಾಗುತ್ತದೆ. ಈ ಫುಕುಶಿಮಾ ದುರಂತದ ನಂತರದಲ್ಲಿ ಅಣುವಿರೋಧಿ ಆಂದೋಲನವು ಹೆಚ್ಚಿನ ಜಾಗತಿಕ, ಸಾರ್ವತ್ರಿಕ ಮಹತ್ವವನ್ನು ಪಡೆದಿದೆ.

ತಾಂತ್ರಿಕವಾಗಿ ಬಹಳ ಮುಂದುವರಿದ, ಹೆಚ್ಚಾಗಿ ಕೈಗಾರಿಕೀಕರಣಗೊಂಡ ಜಪಾನಿನಂತಹ ದೇಶದಲ್ಲೇ ಘೋರ ದುರಂತವೊಂದು ಸಂಭವಿಸುವುದಾದರೆ, ಇಂಥಾ ಅವಘಡಗಳು ಇನ್ನೆಲ್ಲಿ ಬೇಕಾದರೂ ಆಗಬಹುದು ಎಂಬುದು ಎಲ್ಲರಿಗೂ ಗೊತ್ತು. ಅದರಲ್ಲೂ ತಾಂತ್ರಿಕವಾಗಿ ಹಿಂದುಳಿದ, ಸುರಕ್ಷತೆಯ ನೆಚ್ಚಿಗೆಯಿಲ್ಲದ ಮತ್ತು ಗಂಭೀರವಾದ ಅಣು ದುರಂತಗಳ ಹಿನ್ನೆಲೆಯಿರುವ ಭಾರತದಂತಹ ದೇಶದಲ್ಲಿ ಅದರ ಸಂಭವನೀಯತೆ ಹೆಚ್ಚು.

## ಅಣುಶಕ್ತಿವಿರೋಧೀ ವಾದಗಳು

ಆದ್ದರಿಂದಲೇ ತಮಿಳುನಾಡಿನ ಕೂಡಂಕುಳಂನಲ್ಲಿ, ಮಹಾರಾಷ್ಟ್ರದ ಜೈತಾಪುರ್‌ನಲ್ಲಿ, ಗುಜರಾತ್‌ನ ಮೀಠೀವಿರ್ಧಿಯಲ್ಲಿ, ಆಂಧ್ರಪ್ರದೇಶದ ಕೊವ್ವಾಡಾದಲ್ಲಿ, ಹರಿಯಾಣದ ಗೋರಖ್‌ಪುರ್‌ನಲ್ಲಿ ಮತ್ತು ಮಧ್ಯಪ್ರದೇಶದ ಚುಟ್ಕಿಯಲ್ಲಿ ಉದ್ದೇಶಿತ ಅಣುಸ್ಥಾವರಗಳ ವಿರುದ್ಧ, ರಾಜ್ಯಾಡಳಿತದ ಕ್ರೂರ ದಮನಕ್ಕೆ ಸವಾಲೊಡ್ಡುವಂಥಾ ದೊಡ್ಡ ದೊಡ್ಡ ಪ್ರತಿಭಟನೆಗಳು ನಡೆದವು. ಕೂಡಂಕುಳಂನಲ್ಲಿ ಪೋಲೀಸರು ೫೫,೦೦೦ಕ್ಕೂ ಹೆಚ್ಚು ಜನರ ಮೇಲೆ 'ದೇಶದ್ರೋಹ'ದ ಮತ್ತು ಸುಮಾರು ೬೮೦೦ ಜನರ ಮೇಲೆ 'ಪ್ರಭುತ್ವದ ವಿರುದ್ಧ ಸಮರ' ಸಾರಿದ ಆರೋಪ ಹೊರಿಸಿ ಪ್ರಥಮ ಮಾಹಿತಿ ವರದಿಯನ್ನು (FIR) ದಾಖಲಿಸಿದರೂ ಚಳುವಳಿಗಳ ಕಾವು ಆರಲಿಲ್ಲ. ಇತರ ಕಡೆಗಳಲ್ಲಿಯೂ ಈ



**ಕೂಡಂಕುಳಂ ಅಣು ವಿದ್ಯುತ್ ಸ್ಥಾವರದ ವಿರುದ್ಧ ಸ್ಥಳೀಯರ ಪ್ರತಿಭಟನೆ**

ಆಂದೋಲನವು ಭಾರೀ ಆವೇಗವನ್ನು ಪಡೆಯುತ್ತಿದೆ.( ಹೆಚ್ಚಿನ ಮಾಹಿತಿಗಾಗಿ www.cndpindia.org ಮತ್ತು www.dianuke.org ನೋಡಿ)

ಈ ಅಣುವಿದ್ಯುಚ್ಛಕ್ತಿವಿರೋಧಿ ಆಂದೋಲನವನ್ನು ಪ್ರೇರೇಪಿಸುವ ಅಂಶಗಳಾದರೂ ಯಾವುವು? ಸರಳವಾಗಿ ಹೇಳುವುದಾದರೆ ಈ ಆಂದೋಲನವು ಆರು ಮುಖ್ಯ ವಾದಗಳನ್ನು ಮುಂದಿಡುತ್ತದೆ: ಅತಿ ಕಡಿಮೆ, ಅತಿ ನಿಧಾನ, ಅತಿ ಕೇಂದ್ರೀಕೃತ, ಅತಿ ರಹಸ್ಯಮಯ, ಅತಿ ದುಬಾರಿ, ಅತಿ ಅಪಾಯಕಾರಿ. ಇವೆಲ್ಲವೂ ಒಟ್ಟು ಸೇರಿ ಅಣುಶಕ್ತಿ ವಿರುದ್ಧದ ವಾದವನ್ನು ಬಲಪಡಿಸಿವೆ. ಇವುಗಳನ್ನು ಒಂದೊಂದಾಗಿ ಪರಿಶೀಲಿಸೋಣ.

**ಅತಿ ಕಡಿಮೆ:** ಪುನರ್ನವೀಕರಿಸಬಹುದಾದ ಸಂಪನ್ಮೂಲಗಳಿಂದ (ಪವನ ಶಕ್ತಿ, ಸೌರ ಶಕ್ತಿ, ಸೌರ ದ್ಯುತಿವಿದ್ಯುಜ್ಜನಕ, ಜೈವಿಕ ದ್ರವ್ಯ, ಜಲವಿದ್ಯುತ್ ಇತ್ಯಾದಿ ಎಲ್ಲ ಶಕ್ತಿಮೂಲಗಳನ್ನೊಳಗೊಂಡು) ಉತ್ಪತ್ತಿಯಾಗುವ ಶಕ್ತಿಯ ಪಾಲು ಶೇಕಡಾ ೧೮ ಕ್ಕೆ ಹೋಲಿಸಿದರೆ ಅಣುವಿದ್ಯುಚ್ಛಕ್ತಿಯ ಪಾಲು, ಪ್ರಚಾರಕ್ಕೆ ವ್ಯತಿರಿಕ್ತವಾಗಿ, ಜಗತ್ತಿನ ಪ್ರಾಥಮಿಕ ಶಕ್ತಿ ಬಳಕೆಯ ಕೇವಲ ಶೇಕಡಾ ೨ ರಷ್ಟು ಮಾತ್ರ. ಯುರೇನಿಯಂ ನಿಕ್ಷೇಪಗಳು ಕಡಿಮೆ ಇರುವುದರಿಂದ ದೀರ್ಘಾವಧಿಯ ಅಣುಶಕ್ತಿಯ ಉತ್ಪಾದನೆ ತುಂಬಾ ಮಿತಿಯುಳ್ಳದ್ದು. ಇದಕ್ಕೆ ಹೋಲಿಸಿದರೆ ಮಿತಿಗಳೇ ಇಲ್ಲದ ಪುನರ್ನವೀಕರಿಸಬಹುದಾದ ಸಂಪನ್ಮೂಲಗಳ ತೂಕವೇ ಹೆಚ್ಚು. ಈಗ ಇರುವ ೨,೪೦,೦೦೦ ಮೆ.ವ್ಯಾ. ಶಕ್ತಿ ಸಾಮರ್ಥ್ಯವಿರುವ ಒಟ್ಟು ಸ್ಥಾವರಗಳಲ್ಲಿ, ಭಾರತದಲ್ಲಿರುವ ಯುರೇನಿಯಂ ನಿಕ್ಷೇಪಗಳಿಂದ ಸ್ಥಳೀಯವಾಗಿ ಹೆಚ್ಚೆಂದರೆ ೧೦,೦೦೦ ಮೆ.ವ್ಯಾ ರಷ್ಟು ಅಣುವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದಷ್ಟೆ!

ಪ್ರಸ್ತುತ ಭಾರತದಲ್ಲಿ ಪವನಶಕ್ತಿಯಿಂದ ೧೫,೦೦೦ ಮೆ.ವ್ಯಾ. ಮತ್ತು ಸೌರಶಕ್ತಿಯಿಂದ ೨,೦೦೦ ಮೆ.ವ್ಯಾ ವಿದ್ಯುಚ್ಛಕ್ತಿ ಉತ್ಪಾದನೆಗೆ ಹೋಲಿಸಿದರೆ ಅಣುವಿದ್ಯುಚ್ಛಕ್ತಿಯ ಉತ್ಪಾದನಾ ಸಾಮರ್ಥ್ಯ ೪,೮೦೦ ಮೆ.ವ್ಯಾ. ಗಿಂತ ಕಡಿಮೆ

ಇದೆ. ಭಾರತದ ಒಟ್ಟು ವಿದ್ಯುಚ್ಛಕ್ತಿ ಉತ್ಪಾದನೆಗೆ ಅಣುವಿದ್ಯುಚ್ಛಕ್ತಿಯ ಕೊಡುಗೆ ಶೇಕಡಾ ೩ ಕ್ಕಿಂತ ಕಡಿಮೆ ಮತ್ತು ಜಾಗತಿಕ ಶಕ್ತಿ ಬಳಕೆಯ ಶೇಕಡಾ ೧ ಕ್ಕಿಂತ ಕಡಿಮೆ. ಎಂಟು ವರ್ಷಗಳಲ್ಲಿ ಅಣುಶಕ್ತಿ ಉತ್ಪಾದನೆಯನ್ನು ಮೂರು ಪಟ್ಟು ಹೆಚ್ಚಿಸುವ ಬೃಹತ್ ಪರಮಾಣು ವಿಸ್ತರಣಾ ಯೋಜನೆಗಳನ್ನು ಸರ್ಕಾರ ಮೂರ್ತರೂಪಕ್ಕೆ ತಂದರೂ ಕೂಡ ಅದು ಒಟ್ಟು ವಿದ್ಯುಚ್ಛಕ್ತಿ ಉತ್ಪಾದನೆಯ ಶೇಕಡಾ ೫ ನ್ನು ಮೀರುವುದಿಲ್ಲ.

ಜಗತ್ತಿನಾದ್ಯಂತ ಅಣುವಿದ್ಯುಚ್ಛಕ್ತಿಯ ಉತ್ಪಾದನೆ ವೇಗವಾಗಿ ಕುಸಿಯುತ್ತಿದೆ. ೧೯೯೬ರಲ್ಲಿ ಅಣುವಿದ್ಯುಚ್ಛಕ್ತಿಯ ಪಾಲು ಜಾಗತಿಕ ಶಕ್ತಿ ಉತ್ಪಾದನೆಯ ಶೇಕಡಾ ೧೭.೬ ರ ಗರಿಷ್ಠ ಮಟ್ಟ ಮುಟ್ಟಿದ್ದು ಈಗ ಶೇಕಡಾ ೧೦.೮ ಕ್ಕೆ ಇಳಿದಿದೆ. ವಿಶ್ವ ವಾಣಿಜ್ಯ ಪ್ರಾಥಮಿಕ ಶಕ್ತಿ ಉತ್ಪಾದನೆಯಲ್ಲಿ ಅಣುಶಕ್ತಿಯ ಪಾಲು ಈವರೆಗಿನ ಕನಿಷ್ಠಕ್ಕೆ(೪.೪%) ಕುಸಿದಿದೆ.

ವಿಶ್ವದಾದ್ಯಂತ ಕಾರ್ಯನಿರ್ವಹಿಸುತ್ತಿದ್ದ ಪರಮಾಣು ರಿಯಾಕ್ಟರ್‌ಗಳ ಸಂಖ್ಯೆ, ೨೦೦೨ರಲ್ಲಿ ಗರಿಷ್ಠ ೪೩೮ ಮುಟ್ಟಿತ್ತು. ಈಗ ಆ ಸಂಖ್ಯೆ ೩೯೦ ಕ್ಕೆ ಇಳಿದಿದೆ. ಜೊತೆಗೆ ಅಣುಶಕ್ತಿ ಉತ್ಪಾದನಾ ತಂತ್ರಜ್ಞಾನವು ದಶಕಗಳಿಂದ ಯಾವುದೇ ನಾವೀನ್ಯತೆಯನ್ನು ಕಂಡಿಲ್ಲ. ಅವುಗಳಲ್ಲಿ ೧೭೦ ರಿಯಾಕ್ಟರ್‌ಗಳು ಸುಮಾರು ೩೦ ವರ್ಷ ಹಳೆಯವು. ೬೫ ಹೊಸ ರಿಯಾಕ್ಟರ್‌ಗಳು ನಿರ್ಮಾಣ ಹಂತಗಳಲ್ಲಿವೆ. ಅವುಗಳಲ್ಲಿ ನಾಲ್ಕು ರಿಯಾಕ್ಟರ್‌ಗಳು ಕಳೆದ ವರ್ಷದಿಂದೀಚೆಗೆ ನಿರ್ಮಾಣ ಆರಂಭಿಸಿವೆ.

**ಅತಿ ನಿಧಾನ:** ಹವಾಮಾನ ವೈಪರೀತ್ಯದ ಕಟು ವಾಸ್ತವದ ಹಿನ್ನೆಲೆಯಲ್ಲಿ ಎಲ್ಲ ರೀತಿಯ ಶಕ್ತಿ ಉತ್ಪಾದನೆಗಳನ್ನು, ಅವುಗಳು ಎಷ್ಟು ತುರ್ತಾಗಿ ಗರಿಷ್ಠ ಮಟ್ಟವನ್ನು ತಲುಪುತ್ತವೆ ಮತ್ತು ಎಷ್ಟರ ಮಟ್ಟಿಗೆ ಹಸಿರು ಮನೆ ಅನಿಲಗಳ ಹೊರಸೂಸುವಿಕೆಯನ್ನು ಕಡಿಮೆ ಮಾಡುತ್ತವೆ ಎನ್ನುವ ಮಾನದಂಡಗಳ ಮೇಲೆ ಅಳೆಯಲಾಗುತ್ತದೆ. ಜಾಗತಿಕ ತಾಪಮಾನವು ಹೆಚ್ಚಾಗುವುದರಿಂದ ಹವಾಮಾನದಲ್ಲಿ ವಿಪರೀತದ ಬದಲಾವಣೆಗಳಾಗಿ ಹಿಮನದಿಗಳು ಮತ್ತು ಹಿಮಟೊಪ್ಪಿಗೆಗಳು ಕ್ಷಿಪ್ರವಾಗಿ ಕರಗುವುದು, ಸಮುದ್ರ ಮಟ್ಟ ಏರುವುದು, ಭೀಕರವಾದ ಚಂಡಮಾರುತಗಳು ಮತ್ತು ಬಿರುಗಾಳಿಗಳು ಬೀಸುವುದು, ಒಂದಾದಮೇಲೊಂದರಂತೆ ಪ್ರವಾಹ ಮತ್ತು ಬರ ಪರಿಸ್ಥಿತಿ ಬರುವುದು ಇತ್ಯಾದಿ ಸಂಭವಿಸುತ್ತವೆ. ಅಂತಹ ಅನಾಹುತಕಾರಿಯಾದ ಜಾಗತಿಕ ತಾಪಮಾನವನ್ನು ತಡೆಗಟ್ಟಲು, ವಿಶ್ವವು GHG(Green House Gases) ಹೊರಸೂಸುವಿಕೆಯನ್ನು ೨೦೨೦ರ ವೇಳೆಗೆ ಕನಿಷ್ಠ ಮಟ್ಟಕ್ಕೆ ಇಳಿಸಲೇಬೇಕಾಗುತ್ತದೆ.

ಈ ದೃಷ್ಟಿಯಲ್ಲಿ ಅಣುವಿದ್ಯುತ್‌ನ ಸಾಧನೆ ಕಳಪೆಯೇ. ಪರಮಾಣು ರಿಯಾಕ್ಟರ್‌ಗಳು ನೇರವಾಗಿ ಇಂಗಾಲದ ಡೈ ಆಕ್ಸೈಡ್‌ನಂತಹ ಹಸಿರುಮನೆ ಅನಿಲಗಳನ್ನು ಬಿಡುಗಡೆ ಮಾಡದಿದ್ದರೂ, ಯುರೇನಿಯಂ ಗಣಿಗಾರಿಕೆಯಿಂದ ಹಿಡಿದು ಅದಿರು ಸಂಸ್ಕರಣೆ, ಇಂಧನ ತಯಾರಿಕೆ, ಉಕ್ಕು ಮತ್ತು ಸಿಮೆಂಟ್‌ಯುಕ್ತ ರಿಯಾಕ್ಟರ್‌ಗಳ ನಿರ್ಮಾಣ, ಕಚ್ಚಾವಸ್ತುಗಳ ಸಾಗಾಣಿಕೆ, ಸಂಗ್ರಹಣೆ ಮತ್ತು ಅಣುತ್ಯಾಜ್ಯಗಳ ಮರುಸಂಸ್ಕರಣೆಯವರೆಗೆ ಅಣು ಇಂಧನ ಚಕ್ರದ ಎಲ್ಲ ಪ್ರಕ್ರಿಯೆಗಳೂ ಹಸಿರು ಮನೆ ಅನಿಲಗಳನ್ನು ಹೊರಹೊಮ್ಮಿಸುತ್ತವೆ. ಪ್ರತಿ ಒಂದು ಮಿಲಿಯನ್ ಯುನಿಟ್ ಅಣುವಿದ್ಯುಚ್ಛಕ್ತಿ ಉತ್ಪಾದನೆಯ ಜೈವಿಕ ಚಕ್ರದಲ್ಲಿ ಬಿಡುಗಡೆಯಾಗುವ ಒಟ್ಟು GHG ಹೊರಸೂಸುವಿಕೆಯ ಪ್ರಮಾಣವು ಪುನರ್ನವೀಕರಿಸಬಹುದಾದ ಶಕ್ತಿಮೂಲಗಳಿಗೆ ಹೋಲಿಸಿದರೆ ಅತೀ ಹೆಚ್ಚು.

ಅಲ್ಲದೇ, ಪರಮಾಣು ರಿಯಾಕ್ಟರ್‌ಗಳ ನಿರ್ಮಾಣ ಕಾರ್ಯಕ್ಕೆ ಕನಿಷ್ಠ ಹತ್ತು ವರ್ಷ ಸಮಯ ಹಿಡಿಯುತ್ತದೆ. ಫುಕುಶಿಮಾ ದುರಂತದ ಹಿನ್ನೆಲೆಯಲ್ಲಿ ಸುರಕ್ಷತೆಯ ಮಾನದಂಡಗಳನ್ನು ಹೆಚ್ಚಿಸಿರುವುದರಿಂದ ಮತ್ತು ಜಗತ್ತಿನಾದ್ಯಂತ ಇರುವ ಪರಮಾಣು ಸಂಸ್ಥೆಗಳ ತೀವ್ರವಾದ ಹಣಕಾಸಿನ ಸಮಸ್ಯೆಗಳಿಂದಾಗಿ ನಿರ್ಮಾಣ ಕಾರ್ಯವು ಇನ್ನೂ ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ. ಆದರೆ ಅದಕ್ಕೆ ತದ್ವಿರುದ್ಧವಾಗಿ ಅನಿಲ ಆಧಾರಿತ ವಿದ್ಯುತ್ ಸ್ಥಾವರಗಳನ್ನು ಮೂರು ಅಥವಾ ನಾಲ್ಕು ವರ್ಷಗಳಲ್ಲಿ ನಿರ್ಮಿಸಬಹುದಾಗಿದೆ. ಈಗೀಗ ಸೌರ ಅಥವಾ ಗಾಳಿ ಯಂತ್ರಗಳ ಸಾಲುಗಳನ್ನು ಕೆಲವೇ ತಿಂಗಳುಗಳ ಅವಧಿಯಲ್ಲಿ ನಿರ್ಮಿಸುವುದು ವಾಡಿಕೆಯಾಗಿದೆ. ಹವಾಮಾನ ಬದಲಾವಣೆಯನ್ನು ಎದುರಿಸಬೇಕಾಗಿರುವ ಈ ತುರ್ತು ಸಂದರ್ಭದಲ್ಲಿ ಇಂತಹ ಪರ್ಯಾಯಗಳು ಬಹು ದೊಡ್ಡ ವ್ಯತ್ಯಾಸವನ್ನು ಮಾಡುತ್ತವೆ.

**ಅತಿ ಕೇಂದ್ರೀಕೃತ:** ಈ ಅಣುಶಕ್ತಿ ಉತ್ಪಾದನೆಯ ಪ್ರಕ್ರಿಯೆಯು ಎರಡು ರೀತಿಯಲ್ಲಿ ಅತಿಯಾಗಿ ಕೇಂದ್ರೀಕೃತವಾಗಿದೆ. ಮೊದಲನೆಯದಾಗಿ, ಅಣುಶಕ್ತಿಯ ಯೋಜನೆಗಳನ್ನು ಸಿದ್ಧಪಡಿಸುವುದು, ಬಂಡವಾಳ ಹೂಡುವುದು, ಜಾರಿಗೆ ತರುವುದು ಇತ್ಯಾದಿಗಳ ಬಗ್ಗೆ ನಿರ್ಧಾರಗಳನ್ನು, ಸರ್ಕಾರದ ಉನ್ನತ ಮಟ್ಟದ ಸಮಿತಿಗಳು ಮತ್ತು ದೈತ್ಯ ಕಾರ್ಪೋರೇಷನ್‌ಗಳಂತಹ ಹೆಚ್ಚು ಕೇಂದ್ರೀಕೃತ ವ್ಯವಸ್ಥೆಗಳೊಳಗೆ ತೆಗೆದುಕೊಳ್ಳಲಾಗುತ್ತದೆ. ಅವುಗಳು ಸಾರ್ವಜನಿಕ ಹಿತಾಸಕ್ತಿಯ ತರ್ಕಬದ್ಧ ನಿಯಂತ್ರಣ ಅಥವಾ ಪ್ರಜಾಸತ್ತೆಯ ನಿಯಂತ್ರಣಕ್ಕೊಳಪಡುವುದಿಲ್ಲ.

ಇದು ತುಂಬಾ ಗಂಭೀರವಾದ ವಿಷಯ. ಅಣುಶಕ್ತಿಯ ವಿಷಯದಲ್ಲಿ ಸಂಬಂಧಪಟ್ಟ ಸಾರ್ವಜನಿಕ ಇಲಾಖೆಗಳಿಗೆ ಮತ್ತು ಕೇಂದ್ರೀಕೃತ ಯಾಂತ್ರಿಕ ವ್ಯವಸ್ಥೆಗೆ ಜನರು ಅನಿವಾರ್ಯವಾಗಿ ತಲೆಬಾಗುವಂತೆ ಮಾಡಲಾಗಿದೆ. ಅವುಗಳು ಸಂಸತ್ತಿಗಾಗಲೀ, ಪ್ರಜಾಸತ್ತಾತ್ಮಕ ಸಂಸ್ಥೆಗಳಿಗಾಗಲೀ ವಿವರಣೆ ಕೊಡಬೇಕಾದ ಅವಶ್ಯಕತೆ ಇಲ್ಲ. ಅಣುಶಕ್ತಿ ಯೋಜನೆಗಳಿಂದಾಗಿ ಜನಸಮುದಾಯಗಳು ತೆರಬೇಕಾಗುವ ಪಾರಿಸರಿಕ ಮತ್ತು ಸಾಮಾಜಿಕ ಬೆಲೆಗಳ ಬಗೆಗೆ ಸೂಕ್ಷ್ಮ ಸಂವೇದನೆ ಅವುಗಳಿಗಿರುವುದಿಲ್ಲ. ಈ ಸ್ಥಳೀಯ ಸಮುದಾಯಗಳು ಚದುರಿದಂತಿರುವುದರಿಂದ ಅವರ ಧ್ವನಿಯು ಉನ್ನತ ಮಟ್ಟದ ಅಧಿಕಾರ ವ್ಯವಸ್ಥೆಗೆ ತಕ್ಕಮಟ್ಟಿಗಾದರೂ ಕೇಳುವಷ್ಟು ತೀಕ್ಷ್ಣವಾಗಿರುವುದಿಲ್ಲ.

ಜಗತ್ತು, ಸ್ಥಳೀಯ ಜಾಲ, 'ಸ್ಮಾರ್ಟ್ ಜಾಲ'(ಒಂದು ವಿದ್ಯುತ್ ಮೂಲದಿಂದ ಮತ್ತೊಂದಕ್ಕೆ, ವಿವಿಧ ಗ್ರಾಹಕ ಗುಂಪುಗಳ ನಡುವೆ ಸಮನ್ವಯ ಸಾಧಿಸುವ) ಇತ್ಯಾದಿ ವಿಕೇಂದ್ರೀಕೃತ ಶಕ್ತಿ ಉತ್ಪಾದನೆ ಮತ್ತು ಬಳಕೆಯ ಕಡೆಗೆ ಚಲಿಸುತ್ತಿರುವಾಗ ಹಲವು ಮಿತಿಗಳುಳ್ಳ ಪರಮಾಣು ರಿಯಾಕ್ಟರ್‌ಗಳು ಈಗಾಗಲೇ ಒಂದು ದೊಡ್ಡ ತೊಡಕೆನಿಸುತ್ತಿವೆ. ೪೦% ಜನತೆಗೆ ವಿದ್ಯುಚ್ಛಕ್ತಿಯಿಲ್ಲದ, ೬ ಲಕ್ಷ ಹಳ್ಳಿಗಳಿರುವ ನಮ್ಮ ದೇಶದಲ್ಲಿ, ವಿಕೇಂದ್ರೀಕೃತ ಶಕ್ತಿ ಮೂಲಗಳು ಮತ್ತು ಹಂಚಿಕೆಯ ಬಳಕೆ ಬಹುಮುಖ್ಯ ಪಾತ್ರವನ್ನು ವಹಿಸಬೇಕಿದೆ. ಅಣುಶಕ್ತಿಗೆ ಇಲ್ಲಿ ಜಾಗವಿಲ್ಲ.

**ಅತಿ ರಹಸ್ಯಮಯ**: ಅಣುವಿದ್ಯುಚ್ಛಕ್ತಿಯು ತುಂಬಾ ಗೌಪ್ಯವಾಗಿ, ಅಪಾರದರ್ಶಕವಾಗಿ ಮತ್ತು ಸಾಮಾನ್ಯವಾಗಿ ಮುಖ ಮರೆಮಾಚಿಕೊಂಡೇ ನಮ್ಮಲ್ಲಿಗೆ ಬರುತ್ತದೆ. ಇದು ಅಣ್ವಸ್ತ್ರ ಕಾರ್ಯಕ್ರಮಗಳ ಜೊತೆಗೆ ಜನ್ಮಪಡೆಯುವುದರಿಂದ ಹಾಗಿರಬಹುದು. ಈ ಎರಡೂ ಕಾರ್ಯಕ್ರಮಗಳೂ ಸಮಾನವಾದ ಮೂಲಸೌಕರ್ಯ, ಸಿಬ್ಬಂದಿ, ತರಬೇತಿ, ಬಂಡವಾಳ ಮತ್ತು ಮೇಲಧಿಕಾರ ವ್ಯವಸ್ಥೆಯನ್ನು ಹಂಚಿಕೊಂಡಿವೆ. ಭಾರತದ ಅಣುವಿದ್ಯುಚ್ಛಕ್ತಿ ನಿಗಮದ (Nuclear Power Corporation of India Ltd) ಅಧ್ಯಕ್ಷರು ಅಣುಶಕ್ತಿ ಆಯೋಗದ(Atomic Energy Commission) ಅಧ್ಯಕ್ಷರಿಗೆ ಅಧೀನರಾಗಿರುತ್ತಾರೆ. ಅಣುಶಕ್ತಿ ಆಯೋಗದ ಅಧ್ಯಕ್ಷರು, DAE (Department of Atomic Energy) ಯ ಕಾರ್ಯದರ್ಶಿಗಳೂ ಆಗಿರುವುದರಿಂದ ಅಣ್ವಸ್ತ್ರ ಮತ್ತು ಅಣುಶಕ್ತಿ ಕಾರ್ಯಕ್ರಮಗಳೆರಡರ ಉಸ್ತುವಾರಿಯನ್ನೂ ವಹಿಸಿಕೊಂಡಿರುತ್ತಾರೆ.

ಶಾಂತಿಯುತ ನಾಗರಿಕ ಕಾರ್ಯಕ್ರಮಗಳೆಂದು ಕರೆಯಲ್ಪಡುವ ಅಣುವಿದ್ಯುಚ್ಛಕ್ತಿ ಕಾರ್ಯಕ್ರಮದಲ್ಲಿಯ ಉಪಉತ್ಪನ್ನಗಳು ಅಥವಾ ಸಂಸ್ಕರಿಸಿದ ಸಾಮಗ್ರಿಗಳು, ಉಭಯ ಬಳಕೆಯ ಪ್ಲುಟೋನಿಯಂನ್ನೂ ಸೇರಿ, ಅಣ್ವಸ್ತ್ರ ಕಾರ್ಯಕ್ರಮಗಳಲ್ಲಿ ಉಪಯೋಗಿಸಲ್ಪಡುತ್ತವೆ. ಫ್ರಾನ್ಸ್, ಅಮೆರಿಕಾ, ರಷ್ಯಾ, ಭಾರತ ಮತ್ತು ಇರಾನ್‌ನಂತಹ ಬಹಳಷ್ಟು ದೇಶಗಳು ನಾಗರಿಕ ಕಾರ್ಯಕ್ರಮಗಳಿಂದ ಮಿಲಿಟರಿ ಕಾರ್ಯಕ್ರಮಗಳಿಗೆ ಸಾಮಗ್ರಿಗಳನ್ನೂ ಸಿಬ್ಬಂದಿಯನ್ನೂ ವರ್ಗಾವಣೆ ಮಾಡಿವೆ. ಉದಾಹರಣೆಗೆ, ೧೯೭೪ರ ಪೋಖ್ರಾನ್ ಸ್ಫೋಟದಲ್ಲಿ ಉಪಯೋಗಿಸಲ್ಪಟ್ಟ ಪ್ಲುಟೋನಿಯಂನ್ನು CIRCUS (Canada-India Research Reactor-US) ನಲ್ಲಿ ಬಳಸಿದ ಇಂಧನಗಳಿಂದ ಪಡೆಯಲಾಗಿತ್ತು. ಕೆನಡಿಯನ್ನರು ವಿನ್ಯಾಸ ಮಾಡಿ ನಿರ್ಮಿಸಿದ್ದ CIRCUS ಗೆ ಅಮೆರಿಕಾವು ಭಾರಜಲವನ್ನು(heavy water) ಸರಬರಾಜು ಮಾಡಿತ್ತು. ಭಾರತವು ಅದರ ಉತ್ಪನ್ನಗಳನ್ನು 'ಶಾಂತಿಯುತ' ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳುವುದೆಂದು ಭರವಸೆ ಕೊಟ್ಟಿತ್ತು. ಆದರೆ ಕಣ್ಣಿಗೆ ರಾಚುವಂತೆ ಅದು ತನ್ನ ಕಾನೂನಾತ್ಮಕ ಹೊಣೆಗಾರಿಕೆಯನ್ನು ಉಲ್ಲಂಘಿಸಿತು. ಅದೇ ಕಾರಣದಿಂದಲೇ ೧೯೭೪ರ ಪೋಖ್ರಾನ್ ಅಣು ಪರೀಕ್ಷೆಯನ್ನು 'ಶಾಂತಿಯುತ ಅಣುಸ್ಫೋಟ' ಎಂದು ಕರೆಯಿತು. ಎಂಥಾ ಅಪ್ಪಟ ಸುಳ್ಳು!

ಅಣುವಿದ್ಯುಚ್ಛಕ್ತಿ ನಿರ್ವಹಣೆ ಮಾಡುವವರು ಮತ್ತೊಂದು ಕಾರಣಕ್ಕೆ ತುಂಬಾ ರಹಸ್ಯವಾಗಿ ಕಾರ್ಯನಿರ್ವಹಿಸುತ್ತಾರೆ. ಬಹಳಷ್ಟನ್ನು ಮುಚ್ಚುಮರೆ ಮಾಡುವುದಿದೆ ಅವರಿಗೆ. ಅವುಗಳೆಂದರೆ, ಆಂತರಿಕ ನಿಯಮಗಳ ಉಲ್ಲಂಘನೆಗಳು, ದುರ್ಘಟನೆಗಳು, ಅವಘಡಗಳು, ಸ್ಥಾವರದ ಕಾರ್ಮಿಕರು

ವಿಪರೀತ ವಿಷಕಾರಿ ಅಂಶಗಳಿಗೆ ತೆರೆದುಕೊಳ್ಳುವುದು ಮತ್ತು ಸಾರ್ವಜನಿಕರ ಮೇಲೆ ಪರಿಣಾಮ ಬೀರುವಂಥ ವಿಷಯುಕ್ತ ಪದಾರ್ಥಗಳು ಹಾಗೂ ವಿಕಿರಣ ಸೋರಿಕೆಯಾಗುವುದು ಇತ್ಯಾದಿ. ಅಧಿಕಾರಿಗಳು ದುರ್ಘಟನೆಗಳನ್ನು ಬಹಿರಂಗಪಡಿಸುವುದು ಬಹಳ ಅಪರೂಪ. ಸಾಮಾನ್ಯವಾಗಿ ಅಂಥಾ ಘಟನೆಗಳನ್ನು ಬಹಿರಂಗಪಡಿಸುವುದು ಮಾಧ್ಯಮಗಳು ಅಥವಾ ಸಂತ್ರಸ್ತ ಜನರು.

**ಅತಿ ದುಬಾರಿ:** ಅಣು ಉದ್ಯಮವು ಯಾವಾಗಲೂ ಸಾರ್ವಜನಿಕ ಸಬ್ಸಿಡಿಗಳಿಂದಲೇ ಉತ್ತೇಜನವನ್ನು ಪಡೆಯುತ್ತಾ ಬಂದಿದೆ. ಸುಮಾರು ೧ ಟ್ರಿಲಿಯನ್ ಡಾಲರ್‌ಗಳನ್ನು ಸಬ್ಸಿಡಿಗಳಲ್ಲೇ ಕಳೆದುಕೊಂಡಿರುವ, ನಷ್ಟಗಳನ್ನು ಅನುಭವಿಸಿರುವ, ಅರ್ಧಕ್ಕೇ ಬಿಟ್ಟ ಯೋಜನೆಗಳಿಂದ ಮತ್ತು ಸಾರ್ವಜನಿಕರಿಗೆ ಹಾನಿಯುಂಟುಮಾಡಿರುವ ಇದನ್ನು 'ವಿಶ್ವ ಕೈಗಾರಿಕೋದ್ಯಮ ಇತಿಹಾಸದಲ್ಲೇ ಅತಿ ದೊಡ್ಡ ವೈಫಲ್ಯ' ಎಂದು ಕರೆಯಲಾಗುತ್ತದೆ.

ಬೇರೆ ಯಾವುದೇ ಶಕ್ತಿಮೂಲಗಳಿಗಿಂತ ಹೆಚ್ಚು ದುಬಾರಿಯಾಗಿರುವುದರಿಂದ ಬಹಳ ಹಿಂದೆಯೇ ಅಣುಶಕ್ತಿಯು ಮಾರುಕಟ್ಟೆಯ ಪರೀಕ್ಷೆಯಲ್ಲಿ ಸೋತಿದೆ. ಅನೇಕ ಶಕ್ತಿ–ಸಂಬಂಧಿತ ತಂತ್ರಜ್ಞಾನ ವಲಯಗಳಲ್ಲಿ, ಉತ್ಪಾದನಾ ಸಾಮರ್ಥ್ಯ ದುಪ್ಪಟ್ಟಾಗುತ್ತಿದ್ದ ಹಾಗೇ ಪ್ರತಿ ಯುನಿಟ್ ವಿದ್ಯುತ್‌ನ ಬೆಲೆ ಕಡಿಮೆಯಾಗುತ್ತಾ ಬರುತ್ತದೆ. 'ಮಾಡ್ತಾ ಮಾಡ್ತಾ ಕಲಿಯುವುದ'ರ ಲಾಭವಿದು. ಆದರೆ 'ಪ್ರಬುದ್ಧ' ತಂತ್ರಜ್ಞಾನವಾಗಿರುವ ಅಣುಶಕ್ತಿಯ ವಿಷಯದಲ್ಲಿ ಇದು ತದ್ವಿರುದ್ಧವಾಗಿರುವುದು ನಿಜ. ಏಕೆಂದರೆ ಅಣುತಂತ್ರಜ್ಞಾನದಲ್ಲಿ ಇತ್ತೀಚೆಗೆ ಸಾಮರ್ಥ್ಯ ವೃದ್ಧಿಯಾಗುವಂತಹ, ವೆಚ್ಚ ಕಡಿಮೆ ಮಾಡುವಂತಹ ಯಾವ ಪ್ರಮುಖ ಬೆಳವಣಿಗೆಯೂ ಆಗಿಲ್ಲ.

ಅಣುಶಕ್ತಿಯ ಗುಪ್ತವಾದ ಅಥವಾ ಭವಿಷ್ಯದ ಎಷ್ಟೋ ಖರ್ಚು ವೆಚ್ಚಗಳನ್ನು ಸಮಾಜದ ತಲೆಯ ಮೇಲೆ ಹೊರಿಸಲಾಗುತ್ತದೆ. ಅಂದರೆ, ಹಳೆಯ ರಿಯಾಕ್ಟರ್‌ಗಳನ್ನು ಅನಿಯುಕ್ತಗೊಳಿಸುವ(ವಿಸರ್ಜಿಸುವ), ಉನ್ನತ ಮಟ್ಟದ ಪರಮಾಣು–ಕಸವನ್ನು ಸಂಗ್ರಹಿಸುವ ಮತ್ತು ನಿರ್ವಹಿಸುವ ಇತ್ಯಾದಿ ಎಲ್ಲಾ ವೆಚ್ಚಗಳೂ ಅದರ ಪ್ರತಿ ಯುನಿಟ್‌ನ ಬೆಲೆಯಲ್ಲಿ ಅಡಗಿರುತ್ತವೆ. ಒಂದು ರಿಯಾಕ್ಟರ್ ತನ್ನ ೩೦–೪೦ ವರ್ಷಗಳ ಆರ್ಥಿಕ ಜೀವಿತಾವಧಿಯ ನಂತರವೂ ವಿಕಿರಣಶೀಲತೆಯಿಂದ ಪ್ರಕ್ಷುಬ್ಧವಾಗಿರುತ್ತದಾದ್ದರಿಂದ ಅದನ್ನು ಗಟ್ಟಿಯಾದ ಕಾಂಕ್ರೀಟ್‌ನಿಂದ 'ಸಮಾಧಿ' ಮಾಡಬೇಕಾಗುತ್ತದೆ. ಅದಕ್ಕೆ ಅದರ ನಿರ್ಮಾಣ ವೆಚ್ಚದ ಸುಮಾರು ಮೂರನೇ ಒಂದು ಭಾಗದಷ್ಟು ಅಥವಾ ಅರ್ಧದಷ್ಟು ಖರ್ಚು ಬರುತ್ತದೆ. ಅಣುತ್ಯಾಜ್ಯವನ್ನು ತಟಸ್ಥಗೊಳಿಸುವುದಿರಲಿ ಅವುಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿಡುವ ಯಾವ ಮಾರ್ಗವನ್ನೂ ವಿಜ್ಞಾನವು ಇನ್ನೂ ಕಂಡುಹಿಡಿದಿಲ್ಲ.

ಇಷ್ಟೆಲ್ಲ ವೆಚ್ಚಗಳನ್ನು ಹೊರತುಪಡಿಸಿದರೂ ಅಣುವಿದ್ಯುಚ್ಛಕ್ತಿಯು, ಕಲ್ಲಿದ್ದಲು, ಅನಿಲ ಮತ್ತು ಪುನರ್ನವೀಕರಣ ಸಾಧ್ಯವಿರುವ ಎಲ್ಲ ಮೂಲಗಳಿಂದ ಉತ್ಪತ್ತಿಯಾದ ವಿದ್ಯುಚ್ಛಕ್ತಿಗಿಂತಲೂ ಬಲು ದುಬಾರಿ. ಪರಮಾಣು ರಿಯಾಕ್ಟರ್‌ಗಳ ಪ್ರತಿ ಕಿಲೋವ್ಯಾಟ್‌ನ ಬಂಡವಾಳ ವೆಚ್ಚವು ಅಂತಾರಾಷ್ಟ್ರೀಯವಾಗಿ ೧೦೦೦ ಡಾಲರ್‌ಗಳಿಂದ ೬೦೦೦–೯೦೦೦ ಡಾಲರ್‌ಗಳವರೆಗೂ ಹೆಚ್ಚಾಗಿದೆ. (ಜೈತಾಪುರ್ ಪರಮಾಣು ರಿಯಾಕ್ಟರ್‌ಗೆ ಫ್ರೆಂಚ್ ಕಂಪೆನಿಯೊಂದು ಉಲ್ಲೇಖಿಸಿರುವ ಅಂಕಿ–ಅಂಶಗಳ ಪ್ರಕಾರ). ನಿರ್ವಹಣಾ ವೆಚ್ಚವೂ ಕೂಡ, ಹಲವಾರು ದೇಶಗಳಲ್ಲಿ, ಮೂರು ತಿಂಗಳಲ್ಲಿ ೧೬% ಏರಿಕೆಯಾಗಿದೆ. ಆದರೆ ನವೀಕರಿಸಬಹುದಾದ ಪವನವಿದ್ಯುತ್(wind power) ಮತ್ತು ಸೌರ ದ್ಯುತಿವಿದ್ಯುಜ್ಜನಕಗಳು( solar photovoltaics) ಪ್ರತಿ ತಿಂಗಳೂ ಅಗ್ಗವಾಗುತ್ತಾ ಬರುತ್ತಿವೆ.

ಇದೇ ರೀತಿ ಮುಂದುವರಿದರೆ, ಆಮದಾದ ಈ ರಿಯಾಕ್ಟರ್‌ಗಳಿಂದ ಉತ್ಪತ್ತಿಯಾಗುವ ಅಣುವಿದ್ಯುತ್‌ನ ಬೆಲೆ ಪ್ರತಿ ಯುನಿಟ್‌ಗೆ ರೂ.೧೫ ಕ್ಕಿಂತ ಹೆಚ್ಚಾಗಲಿದೆ. ಇದರಿಂದ ಕೈಗಾರಿಕೋದ್ಯಮದಿಂದ ಹಿಡಿದು ಕೃಷಿ ಮತ್ತು ಗೃಹ ಬಳಕೆದಾರರವರೆಗೆ ಎಲ್ಲ ಗ್ರಾಹಕರೂ ದಿವಾಳಿಯಾಗುತ್ತಾರೆ.

**ಅತಿ ಅಪಾಯಕಾರಿ:** ಅಣುವಿದ್ಯುಚ್ಛಕ್ತಿ ತಂತ್ರಜ್ಞಾನದಲ್ಲಿ ಅಪಾಯವು ಅಂತರ್ಗತವಾಗಿಯೇ ಇದೆ. ಏಕೆಂದರೆ ಅದು ಅಪಾರ ಶಕ್ತಿಯನ್ನು ಅತಿ ಸಣ್ಣ ಸ್ಥಳದಲ್ಲಿ ಕೇಂದ್ರೀಕರಿಸುತ್ತದೆ. ಚರ್ನೋಬಿಲ್ ಮತ್ತು ಫುಕುಶಿಮಾಗಳಲ್ಲಿ ಆದಂತೆ, ಭಾರೀ ಪ್ರಮಾಣದ ವಿಷಕಾರೀ ವಿಕಿರಣಗಳು ಬಿಡುಗಡೆಯಾಗಿ ಜನತೆಗೆ ಮತ್ತು ಸುತ್ತಲಿನ ಭೂ ಪ್ರದೇಶಗಳಿಗೆ ವ್ಯಾಪಕವಾಗಿ ವಿಷವುಣಿಸುವಂಥ ಘೋರ ದುರಂತಗಳಿಗೆ ಅಣುಶಕ್ತಿ ಉತ್ಪಾದನಾ ತಂತ್ರಜ್ಞಾನವು ಕಾರಣವಾಗಬಲ್ಲುದು.

ಫುಕುಶಿಮಾ ದುರಂತವು ಸಂಭವಿಸಿದ್ದು ಭೂಕಂಪ ಅಥವಾ ಸುನಾಮಿಗಳಿಂದಲ್ಲ. ಮೊದಲೇ ಪರಮಾಣು ರಿಯಾಕ್ಟರ್‌ಗಳು ಅಪಘಾತ ಸೂಕ್ಷ್ಮವಾಗಿರುತ್ತದೆ. ಹಾಗಾಗಿ ಅದು ಸಂಭವಿಸಿದ್ದು ಸುನಾಮಿಯಿಂದ ಪ್ರಚೋದಿತವಾದ ಅಂತಃಸ್ಫೋಟಗಳಿಂದಾಗಿ. ಅಣು ದುರಂತಗಳು ಸಂಭವಿಸುವುದು ಅಣು ತಂತ್ರಜ್ಞಾನದ ಮೂಲ ಗುಣದಿಂದಲೇ. ಪ್ರಾಕೃತಿಕ ವಿಕೋಪಗಳಿಂದ ಹಾಗಾಗುವ ಸಾಧ್ಯತೆಗಳು ಹೆಚ್ಚು ಅಷ್ಟೆ. ಎಲ್ಲ ಮಾದರಿಯ ರಿಯಾಕ್ಟರ್‌ಗಳ ವಿನ್ಯಾಸಗಳೂ ಅಂತರ್ಯದಲ್ಲಿ ಇಂಧನ ಕರಗುವಿಕೆಗೆ ಸುಲಭವಾಗಿ ತುತ್ತಾಗುವಂತಿರುತ್ತವೆ.

ಅಣುಶಕ್ತಿ ಕೇಂದ್ರಗಳಲ್ಲಿ ಇಂಥಾ ಪ್ರಮಾದಗಳಾಗುವುದು ಸಾಮಾನ್ಯ ಮತ್ತು ಅವುಗಳನ್ನು ತಡೆಯಲಾಗುವುದಿಲ್ಲ ಎಂದು ಅಂತಾರಾಷ್ಟ್ರೀಯ ಅಣು ತಂತ್ರಜ್ಞಾನ ತಜ್ಞರು ಹೇಳುತ್ತಾರೆ. ಎಡ್ವರ್ಡ್ ಟೆಲ್ಲರ್ ಎಂಬ ಅಣುಭೌತವಿಜ್ಞಾನಿಯು " ಸಂಪೂರ್ಣ ದೋಷರಹಿತವಾದ ಏನನ್ನಾದರೂ ನಿರ್ಮಿಸುವ ಮಾತುಗಳನ್ನಾಡುವವರು ಸಂಪೂರ್ಣ ಮೂರ್ಖರಾಗಿರುತ್ತಾರಷ್ಟೆ!" ಎಂದು ಹೇಳಿದ್ದಾರೆ.

ಅಣು ಅಪಾಯಗಳಲ್ಲಿ ಯುರೇನಿಯಂ ಗಣಿಗಾರಿಕೆಯಿಂದ ಹಿಡಿದು ಇಂಧನ ತಯಾರಿಕೆ, ರಿಯಾಕ್ಟರ್‌ಗಳ ಕಾರ್ಯಾಚರಣೆ ಮತ್ತು ನಿರ್ವಹಣೆ, ರಿಯಾಕ್ಟರ್‌ಗಳ ಅನಿಯುಕ್ತಿಗೊಳಿಸುವಿಕೆ, ತ್ಯಾಜ್ಯ ನಿರ್ವಹಣೆ ಮತ್ತು ಸಂಗ್ರಹಣೆಯವರೆಗೆ ಅಣು ಇಂಧನ ಚಕ್ರದ ಪ್ರತಿ ಹೆಜ್ಜೆಯಲ್ಲೂ ವಿಕಿರಣಗಳಿಗೆ ಒಡ್ಡಿಕೊಳ್ಳುವುದೂ ಕೂಡ ಸೇರಿರುತ್ತದೆ. ಈ ಮಟ್ಟಕ್ಕಿಂತ ಕಡಿಮೆ ವಿಕಿರಣಗಳಿಗೊಡ್ಡಿಕೊಂಡರೆ ಅಪಾಯವಿಲ್ಲ ಎಂದುಕೊಳ್ಳುವಂತಹ ಯಾವ ಮಿತಿಯೂ ಇಲ್ಲ. ಆದರೂ ಸಂಪೂರ್ಣ ತನ್ನ ಕಾರ್ಯಸಾಧಕ ಕಾರಣಗಳಿಗಾಗಿ ಅಣು ಉದ್ಯಮವು ಅಪಾಯರಹಿತ ಗರಿಷ್ಠ ಮಿತಿಯೊಂದನ್ನು ಸೂಚಿಸುತ್ತದೆ. ಅಣುಸಂಬಂಧಿ ಚಟುವಟಿಕೆಗಳು ನಡೆಯಬೇಕೆಂದರೆ ಸ್ವಲ್ಪ ಮಟ್ಟಿಗೆ ವಿಕಿರಣಗಳಿಗೊಡ್ಡಿಕೊಳ್ಳುವುದು ಅನಿವಾರ್ಯವಾಗಿರುವುದರಿಂದಲೇ ಇಂತಹ ಮಿತಿಯೊಂದನ್ನು ಗೊತ್ತುಮಾಡುತ್ತದೆ. ಇಷ್ಟಾಗಿಯೂ ತನ್ನ ಮಿತಿಯನ್ನು ಸಾಮಾನ್ಯವಾಗಿ ಮೀರುತ್ತಿರುತ್ತದೆ.

ಅಯಾನೀಕರಿಸಬಲ್ಲ ವಿಕಿರಣಗಳು ದೇಹದಲ್ಲಿರುವ ಜೀವಕೋಶಗಳ ಬೆಳವಣಿಗೆಯನ್ನು ನಿಯಂತ್ರಿಸುವ ವರ್ಣತಂತು(chromosomes)ಗಳಿಗೆ ಮತ್ತು ಮುಂದುವರಿದು ವಂಶವಾಹಿ ಸಂಕೇತಗಳಿಗೆ ಹಾನಿಯುಂಟುಮಾಡುತ್ತವೆ. ತತ್ಪರಿಣಾಮವಾಗಿ ಕ್ಯಾನ್ಸರ್ ಮತ್ತು ಲ್ಯುಕೇಮಿಯಾಗಳ ಬೆಳವಣಿಗೆಯಾಗುತ್ತದೆ. ವಿಕಿರಣಗಳು ಕ್ರಮೇಣ ಸತ್ವವನ್ನು ಕುಂದಿಸುವಂತಹ ರೋಗಗಳನ್ನು ಹೆಚ್ಚಿಸುತ್ತದೆ ಮತ್ತು ಜೀವಕೋಶಗಳು ನಶಿಸುವಂತೆ ಮಾಡುತ್ತವೆ. DNA ಮತ್ತು RNA ಗಳನ್ನೂ ಕೆಲಸಮಾಡದಂತೆ ಹಾಳುಗೆಡಿಸುತ್ತವೆ. ಹಾಗಾದಾಗ ಹವಾಮಾನ ಬದಲಾವಣೆಯನ್ನು ಸಹಿಸುವ, ರೋಗಗಳಿಂದ ಚೇತರಿಸಿಕೊಳ್ಳುವ ಶಕ್ತಿಯು ಕಡಿಮೆಯಾಗುತ್ತದೆ. ವಿಕಿರಣಗಳನ್ನು ತಟಸ್ಥಗೊಳಿಸಲು ಅಥವಾ ನಿಯಂತ್ರಿಸಲು ಸಾಧ್ಯವಿಲ್ಲ.

**ಸಮೂಹನಾಶಕ ಶಸ್ತ್ರಾಸ್ತ್ರಗಳು**:

ಅಣುಶಕ್ತಿ ಕಾರ್ಯಕ್ರಮಗಳು ಇನ್ನೂ ಹೆಚ್ಚು ಅಪಾಯಗಳನ್ನು ಮುಂದಿರಿಸುತ್ತದೆ: ವಿವೇಚನಾರಹಿತವಾಗಿ, ಸಾಮೂಹಿಕವಾಗಿ ಮತ್ತು ಕ್ರೂರವಾಗಿ ಕೊಲ್ಲುವ ಸಮೂಹನಾಶಕ ಶಸ್ತ್ರಾಸ್ತ್ರಗಳು ಹರಡುವ ಸಾಧ್ಯತೆಯಿದೆ. ಅವುಗಳ ವಿರುದ್ಧ ಯಾವ ಮಿಲಿಟರಿಯೂ, ವೈದ್ಯಕೀಯವೂ, ನಾಗರೀಕ ರಕ್ಷಣಾ ವ್ಯವಸ್ಥೆಯೂ ಸೆಣಸಲಾಗದು. ಫ್ರಾನ್ಸ್, ಉತ್ತರ ಕೊರಿಯಾ, ಭಾರತ ಮತ್ತು ಪಾಕಿಸ್ತಾನ ಮುಂತಾದ ದೇಶಗಳು ನಾಗರಿಕ ಅಣು ಕಾರ್ಯಕ್ರಮಗಳ ಮೂಲಕ ಯಶಸ್ವಿಯಾಗಿ ಅಣ್ವಸ್ತ್ರ ಸಾಮರ್ಥ್ಯವನ್ನು ಪಡೆದಿವೆ. ನಾಗರಿಕ ಮತ್ತು ಮಿಲಿಟರಿ ಕಾರ್ಯಗಳ ನಡುವಿನ ಎಳೆಯು ಸೂಕ್ಷ್ಮವಾಗಿರುತ್ತದೆ. ಅಣ್ವಸ್ತ್ರ ನೆಲೆಗಳು, ಶಸ್ತ್ರಾಸ್ತ್ರ ದಾಳಿಗಳಿಗೆ ಮತ್ತು ದುಷ್ಕರ್ಮಿಗಳ ಗುಪ್ತ ಕಾರ್ಯಾಚರಣೆಗಳಿಗೆ ಗುರಿಯಾಗುವ ಸಾಧ್ಯತೆಗಳು ಹೆಚ್ಚು.

ಇಷ್ಟೆಲ್ಲಾ ಸಮಸ್ಯೆಗಳು ಅಣುವಿದ್ಯುಚ್ಛಕ್ತಿ ಉತ್ಪಾದನೆಯನ್ನು ಅಪಾಯಕಾರಿಯೆಂದು ತೋರಿಸುತ್ತವೆ. ಅಣುಶಕ್ತಿ ವಿರೋಧಿ ಆಂದೋಲನಕ್ಕೆ ಈ ಎಲ್ಲ ಅಂಶಗಳನ್ನು ಸಮರ್ಥಿಸುವ, ಘನವಾದ, ತರ್ಕಬದ್ಧವಾದ ಅಭಿಪ್ರಾಯಗಳಿವೆ. ತಳಮಟ್ಟದ ಜನರ ಬೆಂಬಲವೂ ಹೆಚ್ಚುತ್ತಲಿದೆ. ಅಣುವಿದ್ಯುತ್ ಉತ್ಪಾದನೆಯು ಯಾವುದೇ ಸಾರ್ವಜನಿಕ ಉದ್ದೇಶಗಳಿಲ್ಲದ ಬಂಡವಾಳಿಗರ ಸ್ವಹಿತಾಸಕ್ತಿಯ ಕಾರ್ಯಸೂಚಿ ಎಂದು ತೋರಿಸುವಲ್ಲಿ ಈ ಆಂದೋಲನವು ಯಶಸ್ವಿಯಾಗಿದೆ.

(ಕೃಪೆ: ***ಜನತಾ,*** ಏಪ್ರಿಲ್, ೨೦೧೫)

ಯುವ ಸಮಾಜವಾದಿ ಚಿಂತನ ವೇದಿಕೆ

# ನಮ್ಮೂರ ಸ್ವರ್ಗದಲ್ಲಿ ಈಗ ಕಾಣುವ ಸಮಸ್ಯೆಗಳು

–ಕೃತಿ ಆರ್

ಇತ್ತೀಚೆಗೆ ನನ್ನ ಹೈಸ್ಕೂಲು ಫ್ರೆಂಡ್ ಹೊರದೇಶದಲ್ಲಿದ್ದವಳು ಇಲ್ಲಿ ಮನೆ ಕಟ್ಟಿ ನನ್ನನ್ನು ಅಹ್ವಾನಿಸಿದ್ದಳು. ನಾವು ಹುಟ್ಟಿ ಬೆಳೆದ ಊರಿಗೆ ವಾಪಸು ಬಂದು ಸೆಟ್ಲ್ ಆದರೆ ನಮ್ಮೂರಿನ ಸಮಸ್ಯೆಗಳು ಈಗ ಹೇಗೆ ಕಾಣಿಸುತ್ತವೆ ಎನ್ನುವುದು ನಾವು ಲಹರಿಯಲ್ಲಿ ಮಾತನಾಡಿಕೊಂಡೆವು. ಸಾರಂಶ ಇಲ್ಲಿದೆ.

ಈಗ ನನಗೆ ಢಾಳಾಗಿ ಕಾಣಿಸಿದ್ದು ಲಿಂಗ ಬೇಧ ಮತ್ತು ಕೋಮುವಾದ. ಚಿಕ್ಕವರಿದ್ದಾಗಲೇ ಜಾತಿಯ ಮೇಲಿನ ಚರ್ಚೆಗಳು, ಬ್ರಾಹ್ಮಣ ಶೂದ್ರ, ವಾದ ವಿವಾದಗಳ ವಾತವಾರಣದಲ್ಲೇ ನಾವು ಬೆಳೆದಿದ್ದೆವು. ಆದರೆ ಆಗ ನನ್ನೂರಿನ ಯಾವ ಪ್ರಗತಿಪರ ಗುಂಪುಗಳೂ ಲಿಂಗ ಅಸಮಾನತೆಯನ್ನು ಗುರುತಿಸುವ ಸಂವೇದನೆಯನ್ನು ಪಡೆದುಕೊಂಡಿರಲಿಲ್ಲ. ಬಾಬ್ರಿ ಮಸೀದಿಗೆ ಮುಂಚೆ ಕೋಮು ಸಾಮರಸ್ಯ ಕೂಡ ಅವುಗಳಿಗೆ ಮುಖ್ಯವಾದ ವಿಷಯವಾಗಿರಲಿಲ್ಲ. ಹಾಗಾಗಿ ಲಿಂಗ ಬೇಧದ ಬಗ್ಗೆ ಮಾತಾಡುವ ಫೆಮಿನಿಸ್ಟ್ ಅಂದರೆ ಸಿಟಿಯಲ್ಲಿ ಬೆಳೆದ ಸ್ಲೀವ್‌ಲೆಸ್ ಬ್ಲೌಸ್ ಹಾಕಿಕೊಂಡು ಸಿಗರೇಟು ಸೇದುವವರ ವಾದ ಎಂದು ತಿಳಿದುಕೊಳ್ಳುವಂತಹ ವಾತಾವರಣ ಇಲ್ಲಿತ್ತು. ನಮ್ಮ ಉದಾರವಾದಿ ನಿಲುವಿನ ಮನೆಯಿಂದಾಗಿ ಪ್ರಶ್ನೆ ಮಾಡುವ, ಜಗಳ ಮಾಡಿಕೊಂಡು ಬೇಕಾದಂತೆ ಇರುವ ಹಕ್ಕನ್ನು ನಾವು ಪಡೆದುಕೊಂಡಿದ್ದರೂ ಆ ಅಸಮಾನತೆ ಲಿಂಗ ಬೇಧದಿಂದ ಬಂದಿದ್ದು ಎನ್ನುವ ಅಂದಾಜು ನಮಗಿರಲಿಲ್ಲ.. ಅಲ್ಲದೇ ಫೆಮಿನಸ್ಟ್ ಅಂದರೆ ಸಮಾನತೆ ಬೇಕೆಂದು ಘೋಷಣೆ ಕೂಗುವವರು; ಅವರಿಗೆ ಸೂಕ್ಷ್ಮತೆ ಇಲ್ಲ, ನಮ್ಮ ದೇಶದಲ್ಲಿ ಹೆಂಗಸೆಂದರೆ ದೇವತೆ, ಗಂಡಸರಿಗಿಂತ ಮೇಲೆ ಎಂಬ ಹಳಸಲು ವಾದಗಳನ್ನೆಲ್ಲ ನಮ್ಮ ಮೇಲೆ ಪ್ರಯೋಗಿಸಲಾಗಿತ್ತು. ಆಗಲೂ ನಾವು 'ಆಧುನಿಕ'ವಾಗಿಯೇ ಇದ್ದರೂ ಫೆಮಿನಿಸ್ಟ ಅಲ್ಲ ಅಂತ ಹೆಮ್ಮೆಯ ದಾಟಿಯಲ್ಲಿ ಹೇಳಿಕೊಳ್ಳುತ್ತಿದ್ದೆವು. ನಮ್ಮ ಈ ರೀತಿಯ ಬಾಲ್ಯದಿಂದಾಗಿಯೇ ಫೆಮಿನಿಸಮ್ ಯಾವತ್ತೂ ಅಕಾಡೆಮಿಕ್ ವಿಷಯವಾಗಿ ನಮ್ಮನ್ನು ಸೆಳೆಯಲಿಲ್ಲ.

ಆದರೆ ನಾವು ಓದುವುದಕ್ಕೆ, ಆಮೇಲೆ ಕೆಲಸಕ್ಕೆಂದು ನಮ್ಮ ಊರನ್ನು ಬಿಟ್ಟೆವೋ ಅಲ್ಲಿಂದ ನಮ್ಮ ಓದಿನ ಹರವು, ಅನುಭವ ಹೆಚ್ಚಾದಂತೆ ಒಂದು ಕಡೆ ಘೋಷಣೆಗಳಿಗಿರುವ ಶಕ್ತಿ ಮತ್ತೊಂದು ಕಡೆ ಸೂಕ್ಷ್ಮವಾದ ಫೆಮಿನಿಸಮ್ ನಮ್ಮನ್ನು ಸೆಳೆಯಿತು. ನಾವು ಜಾತಿಯ ಕಟ್ಟು ಪಾಡುಗಳನ್ನು ಕಿತ್ತೊಗೆದು ಅದರ ಆಚರಣೆಗಳಲ್ಲಿ ಪಾಲ್ಗೊಳ್ಳದೆ ಇದ್ದರೂ ಅವು ಹೇಗೆ ನಮಗೇ ತಿಳಿಯದಂತೆ ನಮ್ಮ ನಡೆನುಡಿಗಳಲ್ಲಿರುವುದನ್ನು ಗುರುತಿಸಿಕೊಳ್ಳುವುದಕ್ಕೆ ನಮಗೆ ಹೆಚ್ಚಿನ ಅಧ್ಯಯನ, ವಿವೇಚನೆ, ಅವಲೋಕನ, ವಿಮಾರ್ಶತ್ಮಕ ದೃಷ್ಟಿಕೋನ ಬೇಕಾಗುತ್ತದೆಯೋ ಹಾಗೆಯೆ ನಮ್ಮ ಸಮಾಜದಲ್ಲಿ, ಕುಟುಂಬದಲ್ಲಿರುವ ಲಿಂಗಬೇಧವನ್ನು ಅರಿಯಲು ಅಕಾಡೆಮಿಕ್ ಟ್ರೈನಿಂಗ್ ಬೇಕಾಗುತ್ತದೆ ಎಂದು ಗೊತ್ತಾಯಿತು. ಆದರೆ ಇಷ್ಟೆಲ್ಲಾ ಗೊತ್ತಾಗುವಾಗ ನಾವು ಊರು ಬಿಟ್ಟಾಗಿತ್ತು. ನಮ್ಮ ಸ್ವಭಾವ, ನಿಲುವುಗಳಿಗೆ ಹೊಂದಿಕೊಳ್ಳುವಂತ ನಮ್ಮದೇ ಗೆಳತಿ, ಗೆಳೆಯರ ಸಮುದಾಯವನ್ನು ಕಟ್ಟಿಕೊಳ್ಳುವುದಕ್ಕೆ ನಗರಗಳಲ್ಲಿ ಅವಕಾಶವು ಇತ್ತು. ಅಲ್ಲಿ ಸುಲಭವಾಗುವ ಅನಾಮಿಕತೆ ಮತ್ತು ನಮ್ಮದೇ ಪ್ರಪಂಚವನ್ನು ಕಟ್ಟಿಕೊಂಡು ಬದುಕುವುದು ಹಳ್ಳಿಯ ವಾತಾವರಣದಲ್ಲಿ ಸಾಧ್ಯವಿಲ್ಲ. ಇದು ಹಳ್ಳಿಯ ಬದುಕಿನ ಮಿತಿ ಹಾಗೂ ಶಕ್ತಿ.

ಇಲ್ಲಿ ನಮ್ಮ ಸಂಬಂಧಿಕರು, ಹಳೆಯ ಸ್ನೇಹಿತರು ಒಡನಾಡಿದ ಸಂಘ ಸಂಸ್ಥೆಗಳೊಂದಿಗೆ ಅನಿವಾರ್ಯವಾಗಿ ತೊಡಗಿಸಿಕೊಳ್ಳುವಾಗ ಲಿಂಗಬೇಧ, ಕೋಮುವಾದ ಎಲ್ಲೆಲ್ಲೂ ಕಾಣುತ್ತಿದೆ. ನಮ್ಮ ತಲೆಮಾರಿನವರು ವಯಸ್ಕರಾಗುತಿದ್ದಂತೆ ಬಾಬ್ರಿ ಮಸೀದಿಯಿಂದ ಗೋದ್ರಾ ತನಕದ ವಿದ್ಯಮಾನಗಳಲ್ಲಿ ಕೋಮುವಾದವು ಬೆಳೆದಿದೆ. ಈಗ ಒಂದು ಹುಡುಗಿಯ ಅಸಹಜ ಸಾವಾಗಲಿ, ಗೋ ಸಾಗಣಿಕೆಯಾಗಲಿ, ಅದರಲ್ಲಿ ಬೇರೆ ಕೋಮಿನ ತಪ್ಪುಗಳೇ ಕಾಣುವುದು ನಮ್ಮ ಲೋಕಗ್ರಹಿಕೆಯ ಭಾಗವಾಗಿಬಿಟ್ಟಿದೆ. ನಾವು ಚಿಕ್ಕವರಿದ್ದಾಗ ಅದು ನಮಗೆ ತಿಳಿಯಲಿಲ್ಲವೋ ಅಥವಾ ಅಂತಹ ಪೂರ್ವಗ್ರಹಗಳು ಈ ಮಟ್ಟದಲ್ಲಿ ಇರಲಿಲ್ಲವೋ ಗೊತ್ತಿಲ್ಲ.

ನಮ್ಮೂರಿನ ನಿತ್ಯ ಜೀವನದಲ್ಲಿ ಈಗ ಮೇಲ್ಜಾತಿ ಮತ್ತು ಕೆಳಜಾತಿಯ ಮಧ್ಯೆ ಸಣ್ಣ ವಿಷಯಕ್ಕೆ ಹೊಡೆದಾಟವಾದರೂ, ಅದರ ಸುದ್ದಿಯಾದರೂ ಬಹು ಬೇಗ ಚರ್ಚೆಗೆ ಬರುತ್ತದೆ. ಅದರ ಪರಿಣಾಮ ಏನೇ ಇರಲಿ, ಅದನ್ನು ವೈಯಕ್ತಿಕ ಮಟ್ಟದಿಂದ ಒಟ್ಟೂ ಸಮಾಜದ ನಡೆನುಡಿಯ ಪರಿಪ್ರೇಕ್ಷ್ಯದಲ್ಲಿ ನೋಡಿ ಅದನ್ನು ಗುರುತಿಸಬಲ್ಲರು. ಆದರೆ ನಮ್ಮಲ್ಲಿ ಗಂಡು ಹೆಣ್ಣಿಗೆ ಹೊಡೆದರೆ ಅದು ದೊಡ್ಡ ವಿಷಯವೇ ಅಲ್ಲ. ಪಕ್ಕದ ಮನೆಯವರು ಹೋಗಿ ಸಂತ್ರಸ್ತ ಹೆಣ್ಣಿಗೆ ಸಹಾಯ ಮಾಡುವುದು, ಗಾಯ ಆಗಿದ್ರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಇದೆಲ್ಲವನ್ನು ಮಾಡುತ್ತಾರೆ. ಆದರೆ ಇದು ತಪ್ಪು, ಅನ್ಯಾಯ ಎನ್ನುವ ಬಾವನೆಯಾಗಲಿ,



ನಾವು ಧ್ವನಿ ಎತ್ತುವ ಸಾಧ್ಯತೆ ಇಲ್ಲವಲ್ಲ ಎನ್ನುವ ಹತಾಷೆಯಾಗಲಿ ಅವರಲ್ಲಿಲ್ಲ. ಅವರು ಮಾಡುವ ಸಹಾಯ ಭೂಕಂಪದಲ್ಲಿ ಗಾಯಗೊಂಡವರಿಗೆ ಮಾಡುವ ಉಪಚಾರದಂತಿರುತ್ತದೆ. ನಮ್ಮ ನ್ಯಾಯ ಅನ್ಯಾಯದ ಕಲ್ಪನೆಯೊಳಗೆ ಈ ವಿಷಯವೇ ಬಂದಿಲ್ಲವೇನು ಅನ್ನಿಸುತ್ತದೆ. ಇದಕ್ಕೆ ಐತಿಹಾಸಿಕ, ಸಾಮಾಜಿಕ ಕಾರಣಗಳಿರಬಹುದು. ತಕ್ಷಣಕ್ಕೆ ಕಾಣುವುದು ದಲಿತ ಚಳುವಳಿಯಂತೆ ಫೆಮಿನಿಸಮ್‌ಗೆ ಸಾರ್ವಜನಿಕ ಅರಿವನ್ನು ಹೆಚ್ಚಿಸುವ ಒಂದು ಜನಪ್ರಿಯ ಚಳುವಳಿ ಆಗದಿರುವುದು ಮತ್ತು ನಮ್ಮ ಕುಟುಂಬದ ರಚನೆ. ಇದನ್ನ ವಿಷ್ಲೇಶಿಸುವುದು ಈ ಪುಟ್ಟ ಬರಹದ ಮಿತಿಯಲ್ಲಿ ಸಾಧ್ಯವಿಲ್ಲ.

ಜಾತಿ ತಾರತಮ್ಯವು ಇನ್ನೂ ರಂಗೋಲಿ ಕೆಳಗೆ ನುಸುಳುವ ಕೆಲಸ ಮಾಡುತಿದ್ದರೂ, ನಮ್ಮೂರಿನ ಬೌದ್ಧಿಕ ವಲಯದಲ್ಲಾದರೂ ಈ ತಾರತಮ್ಯದ ಪ್ರಭಾವಗಳನ್ನು ಗುರುತಿಸಲಾಗುತ್ತಿದೆ ಅಥವಾ ಜಾತಿ ತಾರತಮ್ಯ ಮಾಡುವವರೂ ಸಾರ್ವಜನಿಕವಾಗಿ ಅದನ್ನು ಒಪ್ಪಿಕೊಳ್ಳಬಾರದೆನ್ನುವಷ್ಟರ ಮಟ್ಟಿಗಾದರೂ ಅದು ನಮ್ಮ ಬೌದ್ಧಿಕ ವರ್ಗದ ಸಾಮಾನ್ಯಜ್ಞಾನದ ಭಾಗವಾಗಿದೆ. ಆದರೆ ಲಿಂಗ ತಾರತಮ್ಯದ ಬಗ್ಗೆ ಇನ್ನೂ ಆ ಮಟ್ಟದ ಅರಿವು ಇಲ್ಲ. ಜಾತಿಯ ಬಗ್ಗೆ ಆಳವಾಗಿ ಆಲೋಚನೆ ಮಾಡೋರು, ಬರೆಯೋರು ಕೂಡ ಹೆಂಗಸರು ಮಾತಾಡಿದ್ದನ್ನು ವಿಮರ್ಶೆ ಮಾಡುವಾಗ ತುಂಬಾ ಸುಲಭವಾಗಿ ಮಹಿಳಾಮಣಿಗಳು ಅಂತ ಬರಿತಾರೆ, ಅಷ್ಟೇ ಸುಲಭವಾಗಿ ಪುರಷರನ್ನು ವ್ಯಂಗದಲ್ಲಿ ಪುರುಷ ಪುಂಗವ ಅಂತಲೋ ಪುರುಷ ಸಿಂಹ ಅಂತನೋ ಬರೆಯಲ್ಲ.

ಸುಶಿಕ್ಷಿತ ಮಧ್ಯಮ ವರ್ಗದಿಂದ ಬಂದ ನನ್ನಂತವಳಿಗೂ ಚಿಕ್ಕದರಲ್ಲಿ ಓದೋಕೆ ಸಿಕ್ಕ ಸಾಹಿತ್ಯ ಅಂದರೆ, ಹೆಂಗಸು ತನ್ನದೇ ವಿಶಿಷ್ಟ ವ್ಯಕ್ತಿತ್ವದಿಂದಲೋ, ಅಥವಾ ಅದೃಷ್ಟದಿಂದಲೋ ಮೇಲೆ ಬಂದ ಕತೆಗಳು. ಸಂಪ್ರದಾಯದ ಒಳಗೇ ತಮ್ಮ ಪ್ರತಿರೋಧದ ದಾರಿಯನ್ನು ಹುಡುಕಿಕೊಂಡವರು. ಅದು ಎಲ್ಲರಿಗೂ ಇಷ್ಟವಾಗುವಂತದ್ದೇ, ಯಥಾಸ್ಥಿತಿಯನ್ನು ಬದಲು ಮಾಡದೇ ಹೆಣ್ಣಿನ ಶಕ್ತಿಯನ್ನು ಕೊಂಡಾಡಬಹುದಲ್ಲ! ಆದರೆ ಅತ್ಯಂತ ನತದೃಷ್ಟ ಹೆಣ್ಣಿಗೂ ಸಿಗುವ ಸಮಾನ ಅವಕಾಶದ ಧಾಟಿಯ ಕತೆಗಳು ಸಿಕ್ಕಿದ್ದು ನನಗೆ ಬೆರಳೆಣಿಕೆಯಷ್ಟು. ಈಗ ನಮ್ಮೂರಿನ ಪುಟ್ಟ ಪಂಚಾಯ್ತಿಯ ಲೈಬ್ರರಿಯಲ್ಲಿ ಇರುವ ಪುಸ್ತಕಗಳು ಅವೇ, ಹಳಸಲು.. ಅದಕ್ಕೆ ಹೊಸ ಸೇರಿಕೆಯೆಂದರೆ ಈಗಿನ ಜನಪ್ರಿಯ ವಾರ, ಮಾಸ ಪತ್ರಿಕೆಗಳಲ್ಲಿ ಬರುವ ಜಾಗತಿಕರಣದಿಂದ ಹೆಂಗಸರು, ಕುಟುಂಬ ಕೆಟ್ಟಿತು, ಅನ್ನೋ ದಾಟಿಯ ಲೇಖನಗಳು ಅಷ್ಟೇ.

ಆದರೆ ಪೂರ್ತಿ ನಿರಾಶಾವಾದವೇನಿಲ್ಲ. ಕೆಲವರು ತಮ್ಮ ದಿನ ನಿತ್ಯದ ಅನುಭವದ ಪಾಠದಿಂದಲೇ ಹಳ್ಳಿಲೇ ಕೂತ್ರು ಕಾಸ್ಮೋಪಾಲಿಟನ್ ಆಗಿ ಯೋಚಿಸೋರು ಅಲ್ಲೊಬ್ರು ಇಲ್ಲೊಬ್ರು ಸಿಕ್ತಾರೆ. ಜೊತೆಗೆ ಆಶಾದೇವಿ, ಅನುಪಮಾ ತರದವರು ಜನಪ್ರಿಯ ಪತ್ರಿಕೆಗಳಲ್ಲೂ ಬರಿಯೋಕೆ ಶುರುಮಾಡಿದ್ರೆ, ನಮ್ಮೂರಲ್ಲಿ ಏನಾದ್ರು ಢಾಳಾದ ಸೆಕ್ಸಿಸಮ್ ಕಂಡ್ರೆ ಅದರಿಂದ ಆದ ಶಾಕ್‌ನ ಅರಾಮಾಗಿ ಹಂಚ್ಕೊಳ್ಳೋಕೆ ಗೆಳೆಯ ಗೆಳತಿಯರು ಶೀಘ್ರದಲ್ಲಿ ಇಲ್ಲೇ ಸಿಗಬಹುದು.

**(ಕೃತಿ ಹುಟ್ಟಿದ್ದು ಬೆಳೆದಿದ್ದು ಸಾಗರ ತಾಲ್ಲೂಕಿನ ಹಳ್ಳಿಯಲ್ಲಿ. ಓದಿದ್ದು ಸಮಾಜಶಾಸ್ತ್ರದಲ್ಲಿ ಎಂ.ಫಿಲ್, ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್. ಈಗ ಕಳೆದ ಎಂಟು ವರ್ಷಗಳಿಂದ ಹೊಸನಗರ ತಾಲ್ಲೂಕಿನ ಹಳ್ಳಿಯಲ್ಲಿ ಕೃಷಿಯೊಂದಿಗೆ ಬದುಕು ಮತ್ತು ಹೆಗ್ಗೋಡಿನ 'ಚರಕ'ದ ಚಟುವಟಿಕೆಗಳಲ್ಲೂ ಭಾಗಿ..)**

## ಸಮಕಾಲೀನ

# ಕವಲು ದಾರಿಯಲ್ಲಿ ಕಾಲೇಜು ಶಿಕ್ಷಣ



ನಮ್ಮ ಕಾಲೇಜು ಶಿಕ್ಷಣವನ್ನು ಉತ್ತಮಪಡಿಸಲು ಮಾಡಲಾಗುತ್ತಿರುವ ಪ್ರಯತ್ನಗಳೆಲ್ಲವೂ ಅದನ್ನು ಮತ್ತಷ್ಟು ಹದಗೆಡಿಸುತ್ತಿದೆಯೆಂಬುದು ಈ ಕ್ಷೇತ್ರದಲ್ಲಿ ಗಂಭೀರವಾಗಿ ತೊಡಗಿಕೊಂಡಿರುವವರಿಂದ ಆಗಾಗ್ಗೆ ಕೇಳಿಬರುತ್ತಿರುವ ಮಾತು. ೧೯೮೬ರಲ್ಲಿ ಪ್ರಕಟಗೊಂಡ ಶಿಕ್ಷಣ ನೀತಿಯೇ ನಮ್ಮ ಸರ್ಕಾರದ ಕೊನೆಯ ಶಿಕ್ಷಣ ನೀತಿಯಾಗಿದ್ದು, ೧೯೯೨ರಲ್ಲಿ ಪ್ರಕಟಿಸಿದ ಉನ್ನತ ಶಿಕ್ಷಣ ಕುರಿತ ನೀತಿಯೇ ಅದರ ಕೊನೆಯ ನೀತಿ ನಿರೂಪಣೆಯಾಗಿದೆ ಎಂಬುದೇ ಶಿಕ್ಷಣವನ್ನು ಕುರಿತ ನಮ್ಮ ಸರ್ಕಾರ ತಳೆದಿರುವ ನಿಲುವಿನ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ೧೧ನೇ ಪಂಚವಾರ್ಷಿಕ ಯೋಜನೆಯಲ್ಲಿ(೨೦೦೭-೧೧) ಜಾಗತೀಕರಣದ ಪ್ರಭಾವದಲ್ಲಿ ಖಾಸಗಿ ಕಂಪನಿಗಳ ಒತ್ತಡಕ್ಕೆ ಸಿಕ್ಕಿದ ಸರ್ಕಾರ ಅಂದಿನ 'ಆರ್ಥಿಕ ಸುಧಾರಣೆ'ಗಳಿಗೆ ಪೂರಕವಾದ 'ಶೈಕ್ಷಣಿಕ ಸುಧಾರಣೆ'ಗಳಿಗೆ ಕೈಹಾಕಿತಾದರೂ, ಅದರಲ್ಲಿ ನೀತಿಯ ಪ್ರಶ್ನೆಯೇ ಇಲ್ಲದೆ ಎಲ್ಲವೂ ವ್ಯಾವಹಾರಿಕತೆಯ ಪ್ರಶ್ನೆಯೇ ಆಗಿದ್ದುದರಿಂದ ಅದು ಶಿಕಣವನ್ನು ಈಗ ಅಧಿಕೃತವಾಗಿಯೇ ಸಂಪೂರ್ಣವಾಗಿ ವ್ಯಾಪಾರೀಕರಿಸಿತೆಂದೇ ಹೇಳಬೇಕು. ಸರ್ಕಾರ ನೇರವಾಗಿಯೇ ಶಿಕ್ಷಣ ಕುರಿತ ಚರ್ಚೆಯನ್ನು ಬೌದ್ಧಿಕ ನೆಲೆಯಿಂದ ವ್ಯಾವಹಾರಿಕ ನೆಲೆಗೆ ಇಳಿಸಿ, ಹೊಸ ಆರ್ಥಿಕ ಸುಧಾರಣೆಗಳು ಸೃಷ್ಟಿಸುತ್ತಿರುವ ವೃತ್ತಿ ಮಾರುಕಟ್ಟೆಗೆ ತಕ್ಕ ಉತ್ಪನ್ನಗಳನ್ನು ಉತ್ಪಾದಿಸಿಕೊಡುವುದೇ ಕಾಲೇಜು ಶಿಕ್ಷಣದ ಉದ್ದೇಶವಾಗಿರಬೇಕೆಂದು ಸಾರಿತು. ಅಲ್ಲಿಗೆ ಅಧಿಕೃತ ನೆಲೆಯಲ್ಲಿ ಶಿಕ್ಷಣ ಎನ್ನುವುದು ತನ್ನ ಸ್ವಾಯತ್ತತೆಯನ್ನೇ ಕಳೆದುಕೊಂಡಿತು. ನಿಜವಾದ ದುರಂತವೆಂದರೆ ಇದನ್ನು ಸಂಘಟಿತವಾಗಿ ಪ್ರತಿಭಟಿಸಬೇಕಿದ್ದ ವಿಶ್ವವಿದ್ಯಾಲಯಗಳ ಅಧ್ಯಾಪಕರು, ವಿದ್ವಾಂಸರು, ತಮ್ಮ ಸಂಬಳ-ಭತ್ಯೆ-ಸೌಲಭ್ಯಗಳ ಹೆಚ್ಚಳದ ಆಕರ್ಷಣೆಗೆ ಸಿಕ್ಕಿ ನಿಷ್ಕ್ರಿಯರಾದರು.

ಅದೇನೇ ಇರಲಿ, ಈ ಸುಧಾರಣೆಗಳ ಭಾಗವಾಗಿ ಜಾರಿಗೆ ಬಂದ ಸೆಮಿಸ್ಟರ್ ಪದ್ಧತಿ, ಬದಲಾದ ಪಠ್ಯಕ್ರಮದ ಸ್ವರೂಪ, ಕಾಲೇಜುಗಳ ಮೌಲ್ಯಮಾಪನ ಪದ್ಧತಿ, ಅಧ್ಯಾಪಕರುಗಳ ವಿಪರೀತ ವೇತನ ಏರಿಕೆ ಇವೆಲ್ಲವೂ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿವೆ ಎಂದೇ ಹೇಳಬೇಕು. ಏಕೆಂದರೆ ಇವೆಲ್ಲವೂ ನಮ್ಮ ಶಿಕ್ಷಣ ಕ್ಷೇತ್ರದ ಒಡಲಲ್ಲಿ ಮಂಥನವಾಗಿ ಮೂಡಿದ ಕ್ರಮಗಳಾಗಿರದೆ, ಹೊರಗಿಂದ, ಮೇಲಿಂದ, ದೂರದಿಂದ ಜಾರಿಗೆ ತಂದ ಕ್ರಮಗಳಾಗಿವೆ. ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳು ಕೆಲವೆಡೆ ಸುಧಾರಿಸಿರಬಹುದು; ಹೊಸ ವ್ಯಾಸಂಗ ಕ್ರಮಗಳು ಆರಂಭವಾಗಿರಬಹುದು. ಕಾಲೇಜುಗಳ ಸಂಖ್ಯೆ ಜಾಸ್ತಿಯಾಗಿರಬಹುದು. ಸ್ವಾಯತ್ತ, ಸ್ವಯಂ ಹಣಕಾಸಿನ, ಖಾಸಗಿ ವಿಶ್ವವಿದ್ಯಾಲಯಗಳು ತಲೆ ಎತ್ತಿರಬಹುದು. ಇವೆಲ್ಲವನ್ನು ಕಾಲೇಜು ಶಿಕ್ಷಣದ ಉನ್ನತೀಕರಣ ಲಕ್ಷಣಗಳಾಗಿರದೆ ಅವನತಿಯ ಲಕ್ಷಣಗಳಾಗಿವೆ ಎಂದು ಇದರೊಳಗಿನ ಧ್ವನಿಗಳೇ ಹೇಳುತ್ತಿವೆ. ಸಾಮಾಜಿಕ ಸಮಾನತೆಯನ್ನು ಸಾಧಿಸಬೇಕಾದ ಶಿಕ್ಷಣ ಈ ಮೇಲಿನ ಸುಧಾರಣೆಗಳಿಂದಾಗಿ ತಾನೇ ಅಸಮಾನತೆಯ ಪ್ರತೀಕವಾಗುತ್ತಿದ್ದು, ಸಮಾಜದ ಕೆಳವರ್ಗಗಳನ್ನು ದೂರವಿಡಲಾರಂಭಿಸಿದೆ ಎಂಬುದು ಒಂದು ಸಂಗತಿಯಾದರೆ, ಕಾಲೇಜು ಶಿಕ್ಷಣವನ್ನು ನಿಯಂತ್ರಿಸುವ ವಿಶ್ವವಿದ್ಯಾಲಯ ಧನ ಸಹಾಯ ಆಯೋಗಕ್ಕೂ, ಬಹಳಷ್ಟು ವಿಶ್ವವಿದ್ಯಾಲಯಗಳನ್ನು ನಿಯಂತ್ರಿಸುವ ರಾಜ್ಯ ಸರ್ಕಾರಗಳಿಗೂ ನೀತಿ ನಿರೂಪಣೆ-ಆಡಳಿತಗಳ ವಿಷಯದಲ್ಲಿ ಯಾವುದೇ ಸಮನ್ವಯ ಇಲ್ಲದೆ ಪರಸ್ಪರ ಮಾರಕವೆನಿಸುವ ಕೆಲಸಗಳನ್ನು ಮಾಡುತ್ತಿರುವುದು ಇನ್ನೊಂದು ಮುಖ್ಯ ಸಂಗತಿಯಾಗಿದೆ. ರಾಜ್ಯ ಸರ್ಕಾರ ಹೊಸ ಹೊಸ ವಿಶ್ವವಿದ್ಯಾಲಯಗಳನ್ನು ತೆರೆಯುತ್ತಿರುವ ರೀತಿ, ಅವುಗಳಿಗೆ ಕೋಟಾ ಪದ್ಧತಿಯಲ್ಲಿ ಕುಲಪತಿಗಳನ್ನು, ರಿಜಿಸ್ಟ್ರಾರುಗಳನ್ನು, ಸಿಂಡಿಕೇಟ್ ಸದಸ್ಯರುಗಳನ್ನು ನೇಮಕ ಮಾಡುತ್ತಿರುವ ರೀತಿ ಹಾಗೂ ಅಧ್ಯಾಪಕರ ನೇಮಕಾತಿಗಳಲ್ಲಿ ನಡೆಯುವ ಭ್ರಷ್ಟಾಚಾರ ಇನ್ನೊಂದು ಇಂತಹ ಸಂಗತಿಯಾಗಿದೆ. ಇಂದು ನಮ್ಮ ಬಹಳಷ್ಟು ವಿಶ್ವವಿದ್ಯಾಲಯಗಳು ಪರಮ ಭ್ರಷ್ಟಾಚಾರದ, ಜಾತೀಯತೆಯ, ಸಾಂಸ್ಕೃತಿಕ ಪುಢಾರಿಗಿರಿಯ, ನಿರ್ಲಜ್ಜ ವಿದ್ವತ್ ಚೌರ್ಯಗಳ ಗೂಡುಗಳಾಗಿವೆ ಎಂಬುದು ಎದ್ದು ಕಾಣುತ್ತಿರುವ ಸತ್ಯವಾಗಿದೆ. ಅಲ್ಲಿ ಅಧ್ಯಯನಶೀಲತೆ, ಸಂಶೋಧನೆ, ವಿದ್ವತ್ತು, ಮುಕ್ತ ಚಿಂತನೆ, ಅನ್ಯಾಯಗಳ ವಿರುದ್ಧ ಪ್ರತಿಭಟನೆ ಬತ್ತಿ ಹೋಗಿದೆ. ಅಧ್ಯಾಪಕ ಸಂಘಗಳು ಕಾರ್ಮಿಕ ಸಂಘಗಳಂತಾಗಿದ್ದು, ಶೈಕ್ಷಣಿಕ ಸಮಸ್ಯೆಗಳ ಗೊಡವೆ ಯಾರಿಗೂ ಬೇಡವಾಗಿದೆ.

ಪದವಿಪೂರ್ವ, ಪದವಿ ಮತ್ತು ಸ್ನಾತಕೋತ್ತರ ಹಂತದ ಶಿಕ್ಷಣ ಈ ಮೂರು ಹಂತಗಳಲ್ಲಿನ ಈ ಅವನತಿಯ ಮತ್ತು ಅದರ ಹಿಂದಿನ ಕಾರಣಗಳ ಚಿತ್ರವೊಂದನ್ನು ಈ ಕ್ಷೇತ್ರಗಳಲ್ಲಿ ಕ್ರಿಯಾಶೀಲರಾಗಿರುವವರ ಮೂಲಕವೇ ಈ ಪುಟಗಳಲ್ಲಿ ಓದುಗರ ಚಿಂತನೆಗಾಗಿ ನೀಡಲಾಗಿದೆ-ಸಂ.

# ಹದಿಹರೆಯವನ್ನು ಹದಗೆಡಿಸುತ್ತಿರುವ ಪದವಿಪೂರ್ವ ಶಿಕ್ಷಣ



ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 'ಪದವಿ ಪೂರ್ವ ಶಿಕ್ಷಣ'ವು ವಿದ್ಯಾರ್ಥಿಯ ಶೈಕ್ಷಣಿಕ ಬದುಕಿನ ಅತೀ ಮಹತ್ವದ ಹಂತವಾಗಿದೆ. ರಾಜ್ಯದಲ್ಲಿ ಸುಮಾರು ೧೨೦೨ ಸರ್ಕಾರಿ ಪದವಿ ಕಾಲೇಜುಗಳು, ೬೩೭ ಅನುದಾನಿತ ಹಾಗೂ ೧೯೩೬ಕ್ಕೂ ಹೆಚ್ಚು ಅನುದಾನರಹಿತ ಮತ್ತು ೧೬೫ ವಿಲೀನಗೊಂಡ(ಪದವಿ), ೧೩ ಮಹಾನಗರಪಾಲಿಕೆ ನಡೆಸುವ ಕಾಲೇಜುಗಳಿವೆ. ಹತ್ತನೆಯ ತರಗತಿಯ ನಂತರ ಪ್ರತಿವರ್ಷ ೧೦ ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಎರಡು ವರ್ಷದ ವ್ಯಾಸಂಗಕ್ಕಾಗಿ ಈ ಕಾಲೇಜುಗಳಿಗೆ ಸೇರ್ಪಡೆಯಾಗುತ್ತಾರೆ. ಎಲ್ಲ ಶಿಸ್ತುಗಳ ಉನ್ನತ ವ್ಯಾಸಂಗಗಳಿಗೂ ಪಿ.ಯು.ಸಿ ದಾಟಲೇಬೇಕಾದ ಹೊಸ್ತಿಲಿದ್ದಂತೆ. ಮಾನವಿಕ, ವಾಣಿಜ್ಯ, ವಿಜ್ಞಾನದಂತಹ ೨೩ ವಿಷಯಗಳಲ್ಲಿ ೧೧ ಭಾಷೆಗಳೂ ೫೦ ಸಂಯೋಜನೆಗಳೂ ಇರುವ ಪದವಿಪೂರ್ವ ಶಿಕ್ಷಣವು ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಬೇಕಾದ ಪೂರ್ವತಯಾರಿಯ ಹಂತವೆಂದೇ ಹೇಳಬಹುದು.

ಕ್ರಿಯಾಶೀಲ ನಿರ್ದೇಶಕರಲ್ಲಿ ಒಬ್ಬರಾಗಿದ್ದ ಹರೀಶ್‌ಗೌಡರ ಕಾಲದಲ್ಲಿ ಆರಂಭವಾಗಿ ಈಗಲೂ ಮುಂದುವರೆದಿರುವ ವೃತ್ತಿಪರ ಕೋರ್ಸುಗಳಿಗಾಗಿ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ ಇಡೀ ದೇಶದಲ್ಲೇ ಮಾದರಿಯಾಗಿ ಇಂದಿಗೂ ಯಶಸ್ವಿಯಾಗಿದೆ. ಇಷ್ಟಾದರೂ, ಇಡೀ ಸಮಾಜ, ಮಾಧ್ಯಮಗಳು, ಪೋಷಕರು, ಶಿಕ್ಷಣವೇತ್ತರು ಪಿ.ಯು. ಶಿಕ್ಷಣದತ್ತ ಗಮನ ಹರಿಸುವುದು ಪರೀಕ್ಷೆಯಲ್ಲಿ/ಫಲಿತಾಂಶಗಳಲ್ಲಿ ಗೊಂದಲಗಳಾದಾಗ ಮಾತ್ರ. ಇದು ವಿಪರ್ಯಾಸ.

ಹಿಂದೆಲ್ಲಾ ಇರುತ್ತಿದ್ದುದೇ ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳು. ಖಾಸಗೀ ಸಂಸ್ಥೆಗಳಿದ್ದರೂ ಆಗ ಶಿಕ್ಷಣ ಕ್ಷೇತ್ರ ಅಷ್ಟಾಗಿ ವ್ಯಾಪಾರೀಕರಣಗೊಂಡಿರಲಿಲ್ಲ. ನುರಿತ ಉಪನ್ಯಾಸಕರು ವಿವಿಧ ವಿಷಯಗಳನ್ನು ಬೋಧಿಸುತ್ತಾ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಅವರ ಆಸಕ್ತಿಯ ವಿಷಯವನ್ನು ಗುರುತಿಸಿಕೊಳ್ಳುವಲ್ಲಿ ಸಹಾಯಕರಾಗುತ್ತಿದ್ದರು. ಆ ಹಂತದಲ್ಲಿ ಇತಿಹಾಸ, ಸಾಹಿತ್ಯ, ಸಮಾಜಶಾಸ್ತ್ರ, ಲಲಿತಕಲೆ, ಮಾನವಿಕ ವಿಷಯಗಳಿಗೆ

ಮತ್ತು ವಿಜ್ಞಾನದ ವಿಷಯಗಳಲ್ಲಿ ಆಸಕ್ತಿ ಕೆರಳಿಸುವಂತಹಾ ಬೋಧನೆ ಇರುತ್ತಿದ್ದು ಆ ಆಸಕ್ತಿಯನ್ನು ಉಳಿಸಿಕೊಂಡು ಕುತೂಹಲಭರಿತರಾಗಿ ಮುಂದಿನ ಪದವಿ ಶಿಕ್ಷಣವನ್ನು ಪಡೆಯಲು, ಅವರ ಆಸಕ್ತಿಯ ವಿಷಯವನ್ನು ಆಯ್ಕೆ ಮಾಡಿಕೊಂಡು ಅಧ್ಯಯನಶೀಲರಾಗುತ್ತಿದ್ದರು. ಇದರಿಂದಾಗಿ, ಉತ್ತಮ ಶಿಕ್ಷಕರು, ಸಂಶೋಧಕರು, ವೈದ್ಯರು, ದಕ್ಷ ಆಡಳಿತಗಾರರು, ಉತ್ತಮ ನಾಯಕತ್ವ ಗುಣಗಳುಳ್ಳ ರಾಜಕಾರಣಿಗಳನ್ನೊಳಗೊಂಡ, ಸಮಾಜ ಕಟ್ಟಬಲ್ಲ ದೊಡ್ಡ ಪ್ರತಿಭಾವಂತ ಸಮೂಹವೇ ಮುಂದೆ ಬರುತ್ತಿತ್ತು.

ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಜಾಗತೀಕರಣದ ಕಬಂಧ ಬಾಹುಗಳು ಎಲ್ಲ ಕಡೆಯೂ ಚಾಚಿದಂತೆ ಶಿಕ್ಷಣ ಕ್ಷೇತ್ರಕ್ಕೂ ಚಾಚಿದೆ. ವಿದ್ಯೆ, ಅತಿ ಹೆಚ್ಚು ಲಾಭ ಹಾಗೂ ಹಣ ತರುವ ಸಾಧನವಾಗಿ ರೂಪುಗೊಂಡಿದೆ. ಸಾಫ್ಟ್‌ವೇರ್ ಇಂಜಿನಿಯರ್‌ಗಳ ಕೈತುಂಬಿ ಚೆಲ್ಲುವ ಸಂಬಳ ಇಡೀ ಸಮಾಜವನ್ನು ಆಕರ್ಷಿಸುತ್ತಿದೆ. ಇಂದು ಮಗುವನ್ನು ನರ್ಸರಿಗೆ ಸೇರಿಸುವಾಗಲೇ ಮುಂದೆ ಅದು ಸಿಇಟಿ ಪರೀಕ್ಷೆಯಲ್ಲಿ ಅತಿ ಹೆಚ್ಚು ರ್‍ಯಾಂಕ್ ಗಳಿಸುವಂತೆ ಮಾಡುವ ದೂರಾಲೋಚನೆ ತಂದೆ, ತಾಯಿ, ಪೋಷಕವರ್ಗಕ್ಕೆ ಇರುತ್ತದೆ. ಅದಕ್ಕೆ ತಕ್ಕಂತೆ ವಿಜ್ಞಾನವನ್ನು ಬೋಧಿಸುವ ಕಾಲೇಜುಗಳು ಅಣಬೆಗಳಂತೆ ಎಲ್ಲೆಲ್ಲೂ ತಲೆಯೆತ್ತಿವೆ. ಕೆಲವೊಂದು ಕಾಲೇಜುಗಳು ಸಣ್ಣ ಎರಡು ಕೋಣೆಗಳ ಮನೆಯಲ್ಲಿ ನಡೆಯುತ್ತವೆ. ಆಟದ ಮೈದಾನ, ಗ್ರಂಥಾಲಯ, ಪ್ರಯೋಗಶಾಲೆ, ಶೌಚಾಲಯ, ಕುಡಿಯುವ ನೀರು ದೊರಕುವುದು ಕಷ್ಟ. ಅಸಮರ್ಥ ಶಿಕ್ಷಕರನ್ನು ಹೊಂದಿರುವ, ಇರುವ ಶಿಕ್ಷಕರ ಮೇಲೆ ಫಲಿತಾಂಶದ ಒತ್ತಡ ಹೇರುವ, ಇಲಾಖೆ ನಿಗದಿಪಡಿಸಿದ ಅವಧಿಗಿಂತ ಹೆಚ್ಚು ಕೆಲಸವನ್ನು ನಿರೀಕ್ಷಿಸುವ ಖಾಸಗೀ ಕಾಲೇಜುಗಳಲ್ಲಿ ಶಿಕ್ಷಕರಿಂದ ವಿದ್ಯಾರ್ಥಿಗಳಿಗೆ ಕೇವಲ ತರಗತಿ ಮತ್ತು ಪಠ್ಯಕ್ಕೆ ಸೀಮಿತವಾದ ಬೋಧನೆ ಮಾತ್ರ ದೊರಕುತ್ತದೆ. ಈ ಉಪನ್ಯಾಸಕರುಗಳು ತಮ್ಮ ಅಗತ್ಯ/ಅನುಕೂಲಗಳಿಗೆ ತಕ್ಕಂತೆ ಕೆಲವೊಮ್ಮೆ ಬೇರೆ ಬೇರೆ ಕಾಲೇಜುಗಳಿಗೆ ಹೋಗುವ ತರಾತುರಿಯಲ್ಲಿ ಇರುತ್ತಾರೆ. ವಿದ್ಯಾರ್ಥಿ–ಶಿಕ್ಷಕನ ಮುಖಾಮುಖಿ ಪರಿಚಯವಾಗಲೀ ಆತ್ಮೀಯತೆಗಾಗಲೀ ಅವಕಾಶವೇ ಇರುವುದಿಲ್ಲ. ಇಂತಹಾ ಶಿಕ್ಷಣ ಸಂಸ್ಥೆಗಳು ಬೆಳಗಿನ ೭:೩೦ ರಿಂದಲೇ ಪ್ರಾರಂಭಗೊಂಡು ರಾತ್ರಿ ೮:೩೦ರವರೆಗೆ ನಡೆಯುತ್ತವೆ. ಇಲ್ಲಿ ಇಲಾಖೆ ಹೊರಡಿಸುವ ಯಾವುದೇ ಮಾರ್ಗಸೂಚಿ ಅಂದರೆ ಪಠ್ಯಬೋಧನೆಗಾಗಿ ನಿಗದಿಯಾಗಿರುವ ಸಮಯ, ಕ್ರಮ ಯಾವುದೂ ಅನ್ವಯವಾಗದೇ ತಮ್ಮದೇ ರೀತಿಯನ್ನು ಅನುಸರಿಸುತ್ತವೆ ಮತ್ತು ಭಾಷಾ ಬೋಧನೆ, ಸಾಂಸ್ಕೃತಿಕ, ಕ್ರೀಡೆ, ಎನ್.ಎಸ್.ಎಸ್., ಗ್ರಂಥಾಲಯ ಮುಂತಾದ ಚಟುವಟಿಕೆಗಳು ಕೇವಲ ಔಪಚಾರಿಕವಾಗಿಬಿಟ್ಟಿವೆ.

ಹದಿ ಹರೆಯದ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ದೊರೆಯದೆ ಅವರು, ಕೇವಲ ಅಂಕ ಗಳಿಸುವ ಯಂತ್ರಗಳಂತೆ, ಪೋಷಕರ, ಶಿಕ್ಷಕರ ಒತ್ತಡಕ್ಕೆ ಸಿಕ್ಕಿಬಿದ್ದಿದ್ದಾರೆ. ಕೆಲವೊಂದು ಕಾಲೇಜುಗಳ ಬೆಂಚು, ಗೋಡೆಗಳ ಮೇಲಿನ ಬರಹವನ್ನು ಗಮನಿಸಬೇಕು–'ಇದೊಂದು ಜೈಲು' ಎಂದೂ, ಪ್ರಾಚಾರ್ಯರನ್ನು ಜೈಲರ್ ಎಂದೂ, ಇನ್ನೂ ವಿಕೃತವಾಗಿ ಚಿತ್ರಿಸಿರುವ ಚಿತ್ರಗಳು ಕಾಣಬರುತ್ತವೆ. ಮತ್ತು ಈ ಹಂತದ ವಿದ್ಯಾರ್ಥಿಗಳನ್ನು ಮಾತನಾಡಿಸಿದಾಗ ಅನೇಕರು ಪೋಷಕರ ಒತ್ತಡದಿಂದ ವಿಜ್ಞಾನವನ್ನು ಓದುತ್ತಿರುವುದಾಗಿಯೂ ಅನೇಕ ಸಂಗತಿಗಳು ಏನೇನೂ ಅರ್ಥವಾಗುತ್ತಿಲ್ಲವೆಂತಲೂ ಗಣಿತವನ್ನೂ ಒಳಗೊಂಡಂತೆ ಕಂಠಪಾಠ ಮಾಡಿ ಒಪ್ಪಿಸುವುದಾಗಿ ಹೇಳುತ್ತಾರೆ. ಈಗಾಗಲೇ ಪಿ.ಯು ಹಂತ ಮುಗಿಸಿದ ವಿದ್ಯಾರ್ಥಿಗಳನ್ನು ಕೇಳಿದಾಗಲೂ ವಿದ್ಯಾರ್ಥಿ ಜೀವನದಲ್ಲೇ ಅತ್ಯಂತ ಕಷ್ಟದ, ಸಂಕಟದ ದಿನಗಳೆಂದರೆ ಪದವಿಪೂರ್ವ ಹಂತ ಎಂದು ಹೇಳುತ್ತಾರೆ. ಈ ವಯಸ್ಸಿನಲ್ಲಿ ಸಮಾಜದ ಅನೇಕ ಸಂಗತಿಗಳಿಗೆ ತೆರೆದುಕೊಳ್ಳಬೇಕಾದ, ಸ್ಪಂದಿಸಬೇಕಾದ ಯುವ ಮನಸ್ಸುಗಳು, ಅತೀ ಒತ್ತಡ, ಹಿಂಸೆ, ಅವಮಾನಗಳಿಂದ ವಕ್ರಗೊಂಡಿರುವುದನ್ನೂ ಗಮನಿಸಬಹುದು. ಇದರ ಪರಿಣಾಮಗಳನ್ನು ಊಹಿಸುವುದು ಕಷ್ಟ. ಆದರೆ ನಾವೀಗಾಗಲೇ ತಿರುಗಿ ಬಾರದ ಸ್ಥಿತಿ ತಲುಪಿದ್ದೇವೆ. ಜೀವನವೆಂದರೆ ಹಣ ಗಳಿಸುವುದು; ಹಣ ಗಳಿಸುವ ಮಾರ್ಗವೆಂದರೆ ಇಂಜಿನಿಯರ್, ಡಾಕ್ಟರ್‌ಗಳಾಗುವುದು; ಹಾಗಾಗಲು ವಿಜ್ಞಾನವನ್ನೇ ಓದಬೇಕು; ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗಬೇಕು ಎಂದು ಪೋಷಕರು ತಮ್ಮ ಮಗುವಿನ ತಲೆಯಲ್ಲಿ ಪದವಿ ಪೂರ್ವ ಹಂತದ ಚಿಂತೆ ತುಂಬಿರುತ್ತಾರೆ. ಕಣ್ಣಿಗೆ ಪಟ್ಟಿಕಟ್ಟಿದ ಕುದುರೆಯಂತೆ ಸಮಾಜ–ಪೋಷಕರು–ವಿದ್ಯಾರ್ಥಿಗಳು ಓಡುತ್ತಿದ್ದಾರೆ. ಈ ಎಲ್ಲದರ ಲಾಭ ಪಡೆಯಲು, ಹಣ ದೋಚಲು ಕಾಯುತ್ತಿವೆ ವಿದ್ಯೆಯನ್ನು ಮಾರುವ ಕೇಂದ್ರಗಳು.

ವಿಜ್ಞಾನಕ್ಷೇತ್ರದ ವಿಪರೀತ ಆಕರ್ಷಣೆಯಿಂದಾಗಿ ಮೊದಲೇ ಕಡೆಗಣಿಸಲ್ಪಟ್ಟಿರುವ ಕಲಾ ವಿಭಾಗ, ಬದಲಾದ ಕಾಲಕ್ಕೆ ತಕ್ಕ ಪಠ್ಯಸಂಯೋಜನೆಗಳಿಲ್ಲದೆ ಇನ್ನೂ ಸೊರಗುತ್ತಿದೆ. ಅದೇ ಹಳೆಯ ಪಠ್ಯಕ್ರಮ, ಅದಕ್ಕೆ ತಕ್ಕ ನೀರಸವಾದ ಬೋಧನೆ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿಲ್ಲ. ವೃತ್ತಿಪರ ಕೋರ್ಸುಗಳಾದ ಕಂಪ್ಯೂಟರ್ ಶಿಕ್ಷಣ, ಕೃಷಿ ವಿಜ್ಞಾನ, ಮಣ್ಣು ವಿಜ್ಞಾನ, ಮೀನುಗಾರಿಕೆ ಮುಂತಾದ ಅನೇಕ ವಿಷಯಗಳ ಅಳವಡಿಕೆ ಇಂದಿನ ಅಗತ್ಯವಾಗಿದೆ.

ಈ ಎಲ್ಲಾ ಕಾರಣದಿಂದ ಒಂದು ವಿಶಿಷ್ಟ ವರ್ಗವೇ ಸೃಷ್ಟಿಯಾಗಿದೆ. ಸರ್ಕಾರಿ ಕಾಲೇಜು/ಆಸ್ಪತ್ರೆಗಳೆಂದರೆ ದಿಕ್ಕು ದಿವಾಳಿಗಳು ಹೋಗುವ ಜಾಗವೆಂಬ ಭಾವನೆ ಉಂಟಾಗಿದೆ. ಬಡ ವಿದ್ಯಾರ್ಥಿಗಳು ಅನಗತ್ಯ ಕೀಳರಿಮೆ ಅನುಭವಿಸುತ್ತಾರೆ. ಅತೀ ಕಡಿಮೆ ಸಂಖ್ಯೆಯ ಕಾಲೇಜುಗಳನ್ನು ಹೊರತು ಪಡಿಸಿದರೆ ಸರ್ಕಾರೀ ಕಾಲೇಜಿಗೆ ಬರುವ ವಿದ್ಯಾರ್ಥಿಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮಟ್ಟ ಗಣನೀಯವಾಗಿ ಕಡಿಮೆ. ಬಡತನದ ರೇಖೆಗಿಂತಾ ಕೆಳಗಿನ, ಪರಿಶಿಷ್ಟ ವರ್ಗ/ಜಾತಿ ಬುಡಕಟ್ಟು ಸಮೂಹದಿಂದ, ಗ್ರಾಮೀಣ ರೈತ, ಕೂಲಿಕಾರ್ಮಿಕ ಮನೆಗಳಿಂದ ಬರುವವರೇ ಬಹುಪಾಲು. ಇವರನ್ನು ನಗರದ ವಿದ್ಯಾರ್ಥಿಗಳಿಗೆ ಹೋಲಿಸಲು ಸಾಧ್ಯವಾಗದು. ಆದರೂ ಇಲ್ಲಿ ಅಪ್ಪಟ ಗ್ರಾಮೀಣ ಪ್ರತಿಭೆಗಳು, ಸ್ವತಂತ್ರವಾಗಿ ಯೋಚಿಸುವ, ಇರುವ ಅವಕಾಶದಲ್ಲೇ ಉತ್ತಮ ಸಾಧನೆಯನ್ನು ಫಲಿತಾಂಶದಲ್ಲಿ ತೋರುವ ಉದಾಹರಣೆಗಳೂ ಇವೆ.

ಇನ್ನು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಎದುರಿಸುವ ಸಮಸ್ಯೆಗಳು ಹತ್ತು ಹಲವು. ಕಾಲೇಜಿಗೆ ದಿನನಿತ್ಯ ಓಡಾಡಲು ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲದಿರುವುದು, ಅನೇಕ ಕಾಲೇಜುಗಳಿಗೆ ಸ್ವತಂತ್ರ ಕಟ್ಟಡಗಳಿಲ್ಲದೆ ಶಿಫ್ಟ್ ಪದ್ಧತಿ ಅಂದರೆ ಬೆಳಗಿನ ೭:೩೦ ರಿಂದ ೧೧:೩೦ ರವರೆಗೆ ಕಾಲೇಜು, ನಂತರ ಹೈಸ್ಕೂಲ್ ಶಾಲೆಗಳು ಅದೇ ಕಟ್ಟಡದಲ್ಲಿ ನಡೆಯುವ ಅನಿವಾರ್ಯತೆ ಇರುವುದರಿಂದ ಅಷ್ಟು ಬೇಗ ಬಸ್ ಸೌಕರ್ಯ ಎಷ್ಟೋ ಹಳ್ಳಿಗಳಿಂದ ಇಲ್ಲದಿರುವುದು, ತುಂಬಿ ತುಳುಕುವ ವಸತಿನಿಲಯಗಳು, ಅನೇಕ ವಿದ್ಯಾರ್ಥಿಗಳು ತಮ್ಮ ದುಡಿಮೆಯಿಂದ ಮನೆ ವ್ಯವಹಾರಗಳನ್ನು ಸರಿದೂಗಿಸಬೇಕಾದ ಅನಿವಾರ್ಯತೆ, ಎಷ್ಟೋ ವಿದ್ಯಾರ್ಥಿಗಳು ಗದ್ದೆ, ಹೊಲ, ತೋಟಗಳಲ್ಲಿ ಕೂಲಿ ಕೆಲಸ ಮಾಡುವಂತಹವರೂ ಇರುತ್ತಾರೆ. ಇನ್ನು ಹೆಣ್ಣು ಮಕ್ಕಳಿಗೆ ಈ ಎಲ್ಲಾ ಸಮಸ್ಯೆಗಳ ಜೊತೆಗೆ ಕಾಲೇಜು ಕಟ್ಟಡಗಳಲ್ಲಿ ಶೌಚಾಲಯವಿಲ್ಲದಿರುವುದು, ಇದ್ದರೂ ಸುವ್ಯವಸ್ಥಿತವಾಗಿಲ್ಲದಿರುವುದು ಮುಂತಾದುವು ಸೇರಿಕೊಳ್ಳುತ್ತವೆ. ಗ್ರಾಮೀಣ ಭಾಗದಲ್ಲಿ ಉಪನ್ಯಾಸಕರುಗಳ ಕೊರತೆ, ಅವರನ್ನು ಬೇರೆ ಬೇರೆ ಕಾರ್ಯಗಳಿಗೆ ತಿಂಗಳುಗಟ್ಟಲೆ ನಿಯೋಜಿಸುವುದು, ವರ್ಗಾವಣೆಯಿಂದ ಖಾಲಿಯಾದ ಜಾಗಕ್ಕೆ ನೇಮಕ ಮಾಡದಿರುವುದು, ಅನೇಕ ಕಾಲೇಜುಗಳಲ್ಲಿ ಬೋಧನಾ ಅವಧಿಯ ಕೊರತೆ ಕಂಡುಬಂದರೆ, ನಗರ ಭಾಗದಲ್ಲಿ ಹೆಚ್ಚುವರಿ ಉಪನ್ಯಾಸಕರು ಇರುವುದು ಇತ್ಯಾದಿ ಆಡಳಿತಾತ್ಮಕವಾಗಿ ಪರಿಹರಿಸಬೇಕಾದ ಸಂಗತಿಗಳು ಎದುರಿಗಿವೆ. ಒಟ್ಟಿನಲ್ಲಿ ಶಿಕ್ಷಕ–ವಿದ್ಯಾರ್ಥಿ ಅನುಪಾತ ಸರಿಪಡಿಸುವ ತುರ್ತು ಅಗತ್ಯವಿದೆ.

ಪದವಿಪೂರ್ವ ಹಂತದ ಹದಿಹರೆಯದ ಮಕ್ಕಳ ಮನಃಸ್ಥಿತಿ ತುಂಬಾ ಸೂಕ್ಷ್ಮವಾಗಿದ್ದು ಅನೇಕ ರೀತಿಯ ಗೊಂದಲಗಳಿಂದ ಕೂಡಿರುತ್ತದೆ. ಈ ಮಕ್ಕಳ ಬೇಕುಬೇಡಗಳನ್ನಾಗಲೀ ಅವರ ಮನೋಸ್ಥೈರ್ಯವನ್ನು ಹೆಚ್ಚಿಸುವ ಶೈಕ್ಷಣಿಕ ವ್ಯವಸ್ಥೆಯಾಗಲೀ ಇಲ್ಲದಂತಹ ಪರಿಸ್ಥಿತಿಯನ್ನು ಸರ್ಕಾರ, ಪೋಷಕರು, ಶಿಕ್ಷಣ ಸಂಸ್ಥೆಗಳು ಒಟ್ಟಾರೆ ಸಮಾಜ ನಿರ್ಮಿಸಿವೆ. ಈ ಎಲ್ಲ ಮಕ್ಕಳ ಕೈಗೂ ಮೊಬೈಲುಗಳು ಬಂದು ಮೊಬೈಲಿನಲ್ಲಿಯೇ ಜಗತ್ತಿನ ಸರ್ವ ದುಷ್ಟಶಕ್ತಿಗಳನ್ನು ತುಂಬಬಲ್ಲಂತಾಗಿರುವಾಗ ಇವರು ಮುಂದೆ ಕಟ್ಟುವ ಸಮಾಜದ ಭವಿಷ್ಯವನ್ನು ಏನೆಂದು ತಾನೇ ಊಹಿಸಬಹುದಾಗಿದೆ? ಪಿ.ಯು. ಇಲಾಖೆಯ 'ವೆಬ್‌ಸೈಟ್' ತೆಗೆದರೆ ಡಾ.ರಾಧಾಕೃಷ್ಣನ್‌ರವರ ಈ ಮಾತನ್ನು ಕಾಣಿಸಲಾಗಿದೆ. "ಮಾಹಿತಿಯನ್ನು ಸಂಗ್ರಹಿಸುವುದು ಅಥವಾ ತಾಂತ್ರಿಕ ಕೌಶಲ್ಯವನ್ನು ಹೊಂದುವುದೇ ಶಿಕ್ಷಣದ ಗುರಿಯಲ್ಲ; ಅದು ಎಷ್ಟೇ ಮುಖ್ಯವಾದರೂ ಮತ್ತು ಆಧುನಿಕ ಸಮಾಜದ ಅಗತ್ಯವಾದರೂ ಕೂಡ. ಬದಲಿಗೆ ನಮ್ಮನ್ನು ಜವಾಬ್ದಾರಿಯುತ ಪ್ರಜೆಗಳನ್ನಾಗಿಸುವ, ಪ್ರಜಾಪ್ರಭುತ್ವದ ಅಂತಃಸತ್ವವನ್ನು ಹೆಚ್ಚಿಸುವ ವೈಚಾರಿಕ ಮನೋಧರ್ಮವನ್ನು ಬೆಳೆಸುವುದೇ ಅದರ ಗುರಿ".

ಆದರೆ ನಿಜಕ್ಕೂ ಇದನ್ನು ನಾವು ಸಾಧಿಸುತ್ತಿದ್ದೇವೆಯೇ?

**–ಟಿ. ಮಂಜುಳಾದೇವಿ, ಬೆಂಗಳೂರು**

# ಹಲವು ಗೋಜಲುಗಳಿಗೆ ಬಲಿಯಾಗಿರುವ ಪದವಿ ಶಿಕ್ಷಣ



**ಆ**ತ್ಮವಿಶ್ವಾಸ ನಿರ್ಮಾಣ, ಗುಣಮಟ್ಟದ ಕಲಿಕೆ, ಜ್ಞಾನಾರ್ಜನೆ, ಪೂರ್ಣ ವ್ಯಕ್ತಿತ್ವ ಇತ್ಯಾದಿ ಘನ ಉದ್ದೇಶಗಳನ್ನು ಈಡೇರಿಸುವ ಆಶಯ ಹೊಂದಿರುವ ಪದವಿ ಶಿಕ್ಷಣ ಇಂದು ದಿಕ್ಕುದೆಸೆಯಿಲ್ಲದೆ ನಿರುದ್ಯೋಗಿಗಳನ್ನು ಹಾಗೂ ಅರೆಬೆಂದ ವಿದ್ಯಾರ್ಥಿಗಳನ್ನು ಸೃಷ್ಟಿಸುತ್ತಿರುವ ಕಾರ್ಖಾನೆಗಳಾಗಿ ಬದಲಾಗಿರುವುದು ದುರಂತವೇ ಸರಿ. ಯಾಂತ್ರಿಕವಾಗಿರುವ ಕಲಿಕೆ, ಮಾಹಿತಿ ಪ್ರಧಾನ ಪರೀಕ್ಷಾ ವ್ಯವಸ್ಥೆ, ಒತ್ತಡವನ್ನು ಸೃಷ್ಟಿಸುವ ಸೆಮಿಸ್ಟರ್ ಪದ್ಧತಿ, ಸಮಕಾಲೀನ ಮೌಲ್ಯಗಳನ್ನು ಕಳೆದುಕೊಂಡಿರುವ ಪಠ್ಯಕ್ರಮ ಈ ಹೊತ್ತಿನ ಪದವಿ ಶಿಕ್ಷಣವನ್ನು ಕಾಡುತ್ತಿರುವ ಕೆಲ ಮೂಲಭೂತ ಸಮಸ್ಯೆಗಳಾಗಿವೆ. ಹತ್ತೊಂಬತ್ತನೇ ಶತಮಾನದಲ್ಲಿ ಜಾರಿಗೆ ಬಂದ ಮೆಕಾಲೆ ಪ್ರಣೀತ ಆಧುನಿಕ ಶಿಕ್ಷಣ ವ್ಯವಸ್ಥೆ ಇವತ್ತಿಗೂ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಮುಂದುವರೆಯುತ್ತಿರುವುದು ಏನನ್ನು ಸೂಚಿಸುತ್ತದೆ? ಕೇವಲ ಅಂಕಗಳ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಅಳೆಯುವ ಪದವಿ ಶಿಕ್ಷಣವು ಸಮಕಾಲೀನ ಸಮಾಜದ ಸವಾಲುಗಳನ್ನು ಮತ್ತು ಒತ್ತಡಗಳನ್ನು ಎದುರಿಸಲು ವಿಫಲವಾಗುತ್ತಿರುವುದು ಕಣ್ಣಿಗೆ ರಾಚುತ್ತದೆ. ನಾವು ಬದುಕುತ್ತಿರುವ ವಾಸ್ತವ ಪ್ರಪಂಚಕ್ಕೂ ವಿದ್ಯಾರ್ಥಿಯು ಕಲಿಯುತ್ತಿರುವ ಪಠ್ಯಕ್ರಮಕ್ಕೂ ಇರುವ ಬೃಹತ್ ಕಂದರ ಶೈಕ್ಷಣಿಕ ಅಧೋಗತಿಗೆ ಮುಖ್ಯ ಕಾರಣವಾಗಿದೆ.

೧೯೯೦ ರ ನಂತರ ಭಾರತೀಯ ಸಮಾಜ ಜಾಗತೀಕರಣದ ಯುಗಕ್ಕೆ ತನ್ನನ್ನು ತಾನು ತೆರೆದುಕೊಂಡಿದ್ದರಿಂದ ಶೈಕ್ಷಣಿಕ ನೀತಿಯನ್ನು ಇವತ್ತು ನಿರ್ಧರಿಸುವವರು ಕಾರ್ಪೊರೇಟ್ ಜಗತ್ತಿನ ಒಡೆಯರುಗಳು. ಇವರ ಒತ್ತಾಸೆ ಇರುವುದು ತಾಂತ್ರಿಕ ಶಿಕ್ಷಣಕ್ಕೆ ಹೊರತು ಶುದ್ಧ ವಿಜ್ಞಾನ ಅಥವಾ ಮಾನವಿಕ ವಿಜ್ಞಾನದ ಕ್ಷೇತ್ರಗಳಿಗಲ್ಲ. ಬಿ.ಎ ಪದವಿ ಕೋರ್ಸ್‌ಗಳಂತೂ ವಿದ್ಯಾರ್ಥಿಗಳ ಕೊರತೆಯಿಂದ ಬಳಲುತ್ತಿವೆ. ಉನ್ನತ ಶಿಕ್ಷಣವನ್ನು ನಿಯಂತ್ರಿಸುವ ಯು.ಜಿ.ಸಿ ಹೇಳುವ 'ಮಾರುಕಟ್ಟೆಗೆ ತಕ್ಕಂತ ಶಿಕ್ಷಣ' ಎಂಬ ನೀತಿ ಅರೆಬೆಂದ ವಿದ್ಯಾರ್ಥಿಗಳನ್ನು ಮಾತ್ರ ತಯಾರು ಮಾಡುತ್ತಿದೆ. ಆದ್ದರಿಂದ ನಿಜವಾದ 'ಜ್ಞಾನ', ಪಾಂಡಿತ್ಯ ಮತ್ತು ಆಳವಾದ ಅಧ್ಯಯನಶೀಲತೆಗಳು ಶಿಕ್ಷಣ ಕ್ಷೇತ್ರದಿಂದಲೇ ನಿರ್ಗಮಿಸುತ್ತಿರುವಂತೆ ನನಗೆ ಭಾಸವಾಗುತ್ತಿದೆ. ಇದು ಮುಂದೆ ಭಾರತದಲ್ಲಿ ಬೌದ್ಧಿಕ ಬರಡುತನಕ್ಕೆ ಕಾರಣವಾಗಬಹುದು ಎಂಬ ಆತಂಕವೂ ಇದೆ. ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಯು.ಜಿ.ಸಿ.ಯ ನೀತಿಯಲ್ಲೇ ಮೂಲಭೂತವಾಗಿ ಒಂದು ದ್ವಂದ್ವ ಇದೆ. ಜಾಗತೀಕರಣದ ಈ ದಿನಗಳಲ್ಲಿ ಜಗತ್ತಿನ ತುಂಬೆಲ್ಲ ನಾನಾ ರೀತಿಯ ಮಾರುಕಟ್ಟೆಗಳಿದ್ದು, ಪದವಿ ಶಿಕ್ಷಣ ವ್ಯವಸ್ಥೆ ಯಾವ ಮಾರುಕಟ್ಟೆಗಾಗಿ ವಿದ್ಯಾರ್ಥಿಗಳನ್ನು ಸಜ್ಜು ಮಾಡಬೇಕು? ಹಾಗಾಗಿ ಅತ್ತ ಮಾರುಕಟ್ಟೆಗೂ ಸಲ್ಲದೇ ಇತ್ತ ಜ್ಞಾನಿಗಳೂ ಆಗದೇ ವಿದ್ಯಾರ್ಥಿಗಳು ತ್ರಿಶಂಕು ಸ್ಥಿತಿಯಲ್ಲಿ ನೇತಾಡುತ್ತಿದ್ದಾರೆ.

ಪದವಿ ಶಿಕ್ಷಣದ ಸವಾಲುಗಳು ಮತ್ತು ಬಿಕ್ಕಟ್ಟುಗಳು ಪಠ್ಯಕ್ರಮವನ್ನು ತಯಾರಿಸುವ ಬಿ.ಒ.ಎಸ್ ಮಂಡಳಿಯ ರಚನೆಯಿಂದಲೇ ಆರಂಭವಾಗುತ್ತದೆ. ಈ ಮಂಡಳಿಗೆ ಸೇವಾ ಹಿರಿತನದ ಆಧಾರದಲ್ಲಿ ಸದಸ್ಯರು ನೇಮಕವಾಗುತ್ತಾರೆ. ಒಂದು ಸಮರ್ಥ ಸಮಕಾಲೀನ ಮೌಲ್ಯವಿರುವ ಪಠ್ಯಕ್ರಮ ರೂಪಿಸಲು ಕೇವಲ ಸೇವಾ ಹಿರಿತನ ಅಥವಾ ಅನುಭವವಷ್ಟೇ ಸಾಲದು. ಇದಕ್ಕೆ ಬೇಕಾಗುವ ವಿಷಯ ತಜ್ಞತೆ, ಜ್ಞಾನ, ತಾತ್ವಿಕ ನೆಲಗಟ್ಟು, ಆಳವಾದ ಅಧ್ಯಯನ, ಮುನ್ನೋಟ ಮತ್ತು ದರ್ಶನ ಬಹುಪಾಲು ಶೈಕ್ಷಣಿಕ ಮಂಡಳಿ ಸದಸ್ಯರಿಗೆ ಇರುವುದಿಲ್ಲ. ಚೇತೋಹಾರಿ ಪಠ್ಯಕ್ರಮ ರೂಪಿಸಲು ಅಗತ್ಯವಿರುವ ನಿರಂತರ ಚರ್ಚೆ, ಸಂವಾದ, ಕಾರ್ಯಾಗಾರ ಇತ್ಯಾದಿಗಳೇನೂ ಜರುಗದೇ ಕೇವಲ ಒಂದೆರಡು ದಿನಗಳಲ್ಲಿ ಪದವಿ ಕೋರ್ಸ್‌ಗಳ ಸಿಲೆಬಸ್ ತಯಾರಾಗಿ ಅನುಮೋದನೆಗೊಳ್ಳುತ್ತದೆ. ಕನ್ನಡದಂತಹ ವಿಷಯದಲ್ಲಿ ಯಾವ ಲೇಖಕರ ಪಠ್ಯ ಇರಬೇಕು– ಇರಬಾರದು ಎಂಬುದರಿಂದಲೇ ರಾಜಕೀಯ ಪ್ರಾರಂಭವಾಗುತ್ತದೆ. ಇಂಗ್ಲಿಷ್‌ನಂತಹ ವಿಷಯದ ಸಮಸ್ಯೆ ಮತ್ತೊಂದು ತರಹದ್ದು. ಅತ್ಯುತ್ತಮ ಕಾಲೇಜುಗಳಿಂದ ಬಂದಿರುವ ಮೆಟ್ರೊಪಾಲಿಟನ್ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಪಠ್ಯದ ಮಟ್ಟವೇ ತೀರಾ ತೆಳು. ಉಳಿದವರಿಗೆ ಇಂಗ್ಲಿಷೆಂಬುದು ಕಬ್ಬಿಣದ ಕಡಲೆ. ನಾನು ಶಿಕ್ಷಕ ವೃತ್ತಿಗೆ ಬಂದಂದಿನಿಂದ (೧೯೯೩) ಇವತ್ತಿಗೂ ಅದೇ ಗದ್ಯ–ಪದ್ಯ–ವರ್ಕ್‌ಬುಕ್(ವ್ಯಾಕರಣ) ಎಂಬ ಕೃತಕ ವಿಭಜನೆಯಲ್ಲೇ ನಮ್ಮ ಪಠ್ಯಕ್ರಮ ರೂಪಿತವಾಗುತ್ತಿದೆ. ಬಹುಪಾಲು ಸಮಯದಲ್ಲಿ ಸಿಲೆಬಸ್ ಏಕತಾನತೆಗೂ ಎಡೆ ಮಾಡಿಕೊಡುತ್ತಿದೆ. ಈ ಅರ್ಥದಲ್ಲಿ ಬಹುತೇಕ ಪದವಿ ಶಿಕ್ಷಣದ ಪಠ್ಯಕ್ರಮಗಳು ಕೆಲವೊಮ್ಮೆ ಜಡತೆ ಇನ್ನು ಕೆಲವೊಮ್ಮೆ ಏಕತಾನತೆಯಿಂದ ಬಳಲುತ್ತಿವೆ.

ಇದರ ಇನ್ನೊಂದು ಮುಖವೆಂದರೆ ಯಾರಾದರೂ ಪಠ್ಯಕ್ರಮದಲ್ಲಿ ಅಮೂಲಾಗ್ರ ಬದಲಾವಣೆ ತರಲು ಇಚ್ಚಿಸಿದಾಗ ಅದಕ್ಕೆ ಉಗ್ರ ಪ್ರತಿರೋಧ ಬರುವುದು ಅಧ್ಯಾಪಕ ಸಮೂಹದಿಂದಲೇ! 'ವಿದ್ಯಾರ್ಥಿಗಳಿಗೆ ಇದೆಲ್ಲಾ ಅರ್ಥವಾಗುವುದಿಲ್ಲ' ಎಂಬ ಸವಕಳಿ ಮಾತನಾಡುತ್ತಾ ಅಧ್ಯಾಪಕರೇ ಯಥಾಸ್ಥಿತಿಯನ್ನು ಮುಂದುವರೆಸುತ್ತಾರೆ. ಶೈಕ್ಷಣಿಕ ಮಂಡಳಿ ಸದಸ್ಯರಿಗೆ ತಜ್ಞತೆ, ವಿವೇಕ ಮತ್ತು ಸರಿಯಾದ ಲೋಕದೃಷ್ಟಿ ಇಲ್ಲದಿದ್ದರಿಂದಾಗಿ ದಶಕದ ಹಿಂದಿನ ಪಠ್ಯಕ್ರಮವೇ ಇವತ್ತಿಗೂ ಮುಂದುವರೆದು ಅವು ತಮ್ಮ ಮೌಲ್ಯಗಳನ್ನೇ ಕಳೆದುಕೊಂಡಿವೆ. ಒಬ್ಬ ಪದವಿ ವಿದ್ಯಾರ್ಥಿಗೆ ತನ್ನ ಸುತ್ತ ಮುತ್ತಲಿನ ಸಮಾಜದಲ್ಲಿ ನಡೆಯುತ್ತಿರುವ ಚರ್ಚೆಯ ಪ್ರಾಥಮಿಕ ಜ್ಞಾನವೂ ಇಲ್ಲದಿದ್ದರೆ ಈ ಪದವಿಗಳಿಂದ ಆಗುವ ಪ್ರಯೋಜನವೇನು? ಹಾಗಾಗಿಯೇ ಈ ಹೊತ್ತಿನ ಮುಖ್ಯ ಸಾಂಸ್ಕೃತಿಕ ಚರ್ಚೆಗಳೆಲ್ಲವೂ ಅಕೆಡೆಮಿಕ್ ವಲಯದ–ಕಾಲೇಜು ಕ್ಯಾಂಪಸ್ಸುಗಳ ಹೊರಗಿನಿಂದಲೇ ಬರುತ್ತಿದೆ.

ಅನುಮೋದನೆಗೊಂಡ ಪಠ್ಯಕ್ರಮವನ್ನು ಬೋಧಿಸುವ ರೀತಿಯಲ್ಲೂ ಹಲವಾರು ವಿರೋಧಾಭಾಸಗಳಿವೆ. ಯುಜಿಸಿ–ನ್ಯಾಕ್ ಹೊಸ ಬಗೆಯ ಕಲಿಕಾ ಕ್ರಮವನ್ನು ಪ್ರೋತ್ಸಾಹಿಸುವುದು ನಿಜವಾದರೂ ಪದವಿ ಕೋರ್ಸ್‌ಗಳಲ್ಲಿ ಕಲಿಸುವ ವಿಧಾನ ಇನ್ನೂ ಸಾಂಪ್ರದಾಯಿಕವಾದದ್ದು. ಹೊಸ ದೃಷ್ಟಿಕೋನವಿಲ್ಲದ, ಅಧ್ಯಯನವಿಲ್ಲದ, ಚರ್ವಿತ ಚರ್ವಣವನ್ನೇ ಬೋಧಿಸುವ ಅಧ್ಯಾಪಕರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಮಾನವಿಕ ವಿಜ್ಞಾನ ಸಮಕಾಲೀನ ಡಿಸ್‌ಕೋರ್ಸ್‌ಗಳಿಗೆ ಮುಖಾಮುಖಿಯಾಗಲು ನಿರಾಕರಿಸುತ್ತಿದ್ದರೆ ಇಂಗ್ಲಿಷ್ ಭಾಷೆಯ ಕಲಿಕಾ ವಿಧಾನ ತೀವ್ರ ನ್ಯೂನ್ಯತೆಯಿಂದ ಬಳಲುತ್ತಿದೆ. ಇವತ್ತು ಹೆಚ್ಚಿನ ವಿದ್ಯಾರ್ಥಿಗಳು ಇಂಗ್ಲಿಷ್ ಕಲಿಯಬೇಕೆನ್ನುವ ತವಕದಲ್ಲಿದ್ದಾರೆ ನಿಜ. ಆದರೆ ಇದನ್ನು ಬೋಧಿಸುವ ಕ್ರಮದಲ್ಲೇ ನಾವು ಎಡವುತ್ತಿದ್ದೇವೆ. "ಕಮ್ಯುನಿಕೇಟಿವ್ ಸ್ಕಿಲ್ಸ್" ಎಂಬ ಹಣೆಪಟ್ಟಿಯಲ್ಲಿ ಬಂದಿರುವ ಕಲಿಕಾ ವಿಧಾನ ಭಾಷೆಯನ್ನು ಒಂದು ತುಣುಕನ್ನಾಗಿ ಮಾತ್ರ ಗ್ರಹಿಸುವುದರಿಂದ ಭಾಷೆಯ ಸುತ್ತಮುತ್ತಲಿನ ಸಾಂಸ್ಕೃತಿಕ ತಿಳವಳಿಕೆಗಳು ಹಿನ್ನೆಲೆಗೆ ಸರಿದಿವೆ. ಆದ್ದರಿಂದ ಭಾಷಾ ಕಲಿಕೆ ಯಾಂತ್ರಿಕವಾಗಿ ಯಾವ ದೃಷ್ಟಿಕೋನವನ್ನೂ ಹೊಂದಿರದ 'ತಟಸ್ತ' ವಿದ್ಯಾರ್ಥಿಗಳನ್ನು ಸೃಷ್ಟಿಸುತ್ತಿದೆ. ಯುಜಿಸಿ ಪ್ರಕಾರ ಇದೇ ಸರಿಯಾದ ಕಲಿಕಾ ವಿಧಾನವಂತೆ! ವಾರ್ಷಿಕ ಪದ್ಧತಿಯ ನ್ಯೂನತೆಗಳನ್ನು ಸರಿಪಡಿಸಲು ಬಂದಿರುವ ಸೆಮಿಸ್ಟರ್ ಪದ್ಧತಿ ವಿದ್ಯಾರ್ಥಿಗಳ ಮತ್ತು ಬೋಧಕರ ಮೇಲೆ ಅನಗತ್ಯ ಒತ್ತಡ ಸೃಷ್ಟಿಸುತ್ತಿದೆ. ಆದ್ದರಿಂದ ಆಳವಾದ ಪಾಂಡಿತ್ಯಪೂರ್ಣ ಪಾಠಕ್ಕೆ ಈ ಪದ್ಧತಿ ಒಂದು ಸೀಮಿತ ಚೌಕಟ್ಟನ್ನು ಹಾಕಿದೆ.

ಉನ್ನತ ಪದವಿ ಶಿಕ್ಷಣವನ್ನು ರೂಪಿಸುವ ಮತ್ತು ನಿಯಂತ್ರಿಸುವ ಯು.ಜಿ.ಸಿ ಯುರೋಪ್ ಕೇಂದ್ರಿತ ಶೈಕ್ಷಣಿಕ ನೀತಿಗಳಿಗೆ ಜೋತು ಬಿದ್ದಿರುವುದರಿಂದ

ಯು.ಜಿ.ಸಿ ಪ್ರಣೀತ ಶೈಕ್ಷಣಿಕ ಬದಲಾವಣೆ ಕೇವಲ ಹೊರನೋಟಕ್ಕೆ ಮಾತ್ರ ಗೋಚರವಾಗುತ್ತಿದೆ. ಶೈಕ್ಷಣಿಕ ಮಟ್ಟವನ್ನು ಅಳೆಯಲು ನಿಯಮಿಸಿರುವ ನ್ಯಾಕ್ (NAAC) ಸಂಸ್ಥೆಗೆ ಶಿಕ್ಷಣ ಸಂಸ್ಥೆಗಳು ಉತ್ಪ್ರೇಕ್ಷಿತ ಅರೆಸತ್ಯ, ಅರೆಸುಳ್ಳಿನ ರಿಪೋರ್ಟ್‌ನ್ನು ನೀಡುತ್ತಿರುವುದಿಂದ ಇದರ ಉದ್ದೇಶವು ಸಂಪೂರ್ಣ ನೆರವೇರುತ್ತಿಲ್ಲ. ನ್ಯಾಕ್ ಸಂಸ್ಥೆಯು ಮೆಟ್ರೊಪಾಲಿಟನ್ ನಗರದಲ್ಲಿರುವ ಆರ್ಥಿಕವಾಗಿ ಸಬಲವಾಗಿರುವ ಕ್ರೈಸ್ಟ್ ಅಥವಾ ಜೈನ್ ರೀತಿಯ ಸಂಸ್ಥೆಗಳನ್ನು ಮತ್ತು ಗ್ರಾಮಾಂತರ ಪ್ರದೇಶದ ಒಂದು ಸರ್ಕಾರಿ ಸಂಸ್ಥೆಯನ್ನು ಅಳೆಯಲು ಒಂದೇ ಮಾನದಂಡ ಬಳಸುವುದರಿಂದ 'ಎ' ಗ್ರೇಡ್ ಮತ್ತು 'ಸಿ' ಗ್ರೇಡ್ ಸಂಸ್ಥೆಗಳ ಅಂತರ ಯಥಾವತ್ತಾಗಿ ಮುಂದುವರೆಯುತ್ತಿದೆಯೇ ಹೊರತು ಅದು ಕಡಿಮೆಯಾಗುತ್ತಿಲ್ಲ. ಅದರಲ್ಲೂ ಅಧ್ಯಾಪಕರನ್ನು ಅಳೆಯಲು ಈ ಸಂಸ್ಥೆ ಉಪಯೋಗಿಸುವ ಮಾನದಂಡಗಳು– ಅಂದರೆ ISSN/ISBN ಸಂಖ್ಯೆ ಹೊಂದಿರುವ ಸಂಶೋಧನಾ ಪ್ರಕಟಣೆ ದೊಡ್ಡ ಮಟ್ಟದ ಮೋಸ, ಕೃತಿಚೌರ್ಯ, ಕಟ್ ಮತ್ತು ಪೇಸ್ಟ್ ಮಾಡುವ ವಂಚನೆಗೆ ಎಡೆಮಾಡಿಕೊಟ್ಟಿದೆ. ಇಂಟರ್‌ನೆಟ್‌ನಲ್ಲಿ "ಅಂತರರಾಷ್ಟ್ರೀಯ ಜರ್ನಲ್‌ಗಳು" ಎಂಬ ಹಣೆಪಟ್ಟಿ ಇರುವ, ಹಣ ಕೊಟ್ಟರೆ ಯಾವುದೇ ಜೊಳ್ಳು ಪ್ರಬಂಧ ಪ್ರಕಟಿಸಲು ಸಿದ್ಧವಿರುವ ದಗಾಕೋರರ ದೊಡ್ಡ ಜಾಲವೇ ಈ ನನ್ನ ಮೇಲ್ಕಾಣಿಸಿದ ಮಾತಿಗೆ ಸಾಕ್ಷಿ. ಒಂದೊಂದು ಕಾಲೇಜಿನಲ್ಲಿ ಕೆಲವು ಅಧ್ಯಾಪಕರು ಕೇವಲ ಮೂರ್‍ನಾಲ್ಕು ವರ್ಷಗಳ ಅವಧಿಯಲ್ಲಿ ೩೦–೪೦–೫೦ ಸಂಶೋಧನಾ ಪ್ರಬಂಧಗಳನ್ನು ಈ "ಅಂತರರಾಷ್ಟ್ರೀಯ ಜರ್ನಲ್"ಗಳಲ್ಲಿ ಪ್ರಕಟಿಸುತ್ತಾರೆಂದರೆ ನೀವು ನಂಬಲೇಬೇಕು.

ಇನ್ನು ಪದವಿ ಶಿಕ್ಷಣದ ಹಲವು ಸಮಸ್ಯೆಗಳನ್ನು ಸೂತ್ರ ರೂಪದಲ್ಲಿ ಈ ಕೆಳಗಿನಂತೆ ಪಟ್ಟಿ ಮಾಡಬಹುದು–

ಅ) ಕಾಲೇಜಿನ ಮುಖ್ಯಸ್ಥರು ಅಥವಾ ವಿಶ್ವವಿದ್ಯಾಲಯದ ಅಧಿಕಾರಿಗಳು ತಮ್ಮ ವಂದಿಮಾಗಧರು, ಜಾತ್ಯಸ್ಥರನ್ನು ಸದಾ ತಮ್ಮ ಜೊತೆಗಿರಿಸಿಕೊಂಡು ಆಡಳಿತ ನಡೆಸುವುದರಿಂದ ಕ್ರಿಯಾಶೀಲ ಅಧ್ಯಾಪಕರು ಕಾಲೇಜಿನಲ್ಲಿ ಮೂಲೆಗುಂಪಾಗುತ್ತಾರೆ. ಇವರು ಕಾಲಕ್ರಮೇಣ ತಮ್ಮ ಉತ್ಸಾಹವನ್ನೇ ಕಳೆದುಕೊಂಡರೆ ಆಶ್ಚರ್ಯವೇನಲ್ಲ. ಪ್ರತಿಭೆ ಇಲ್ಲದ ಪುಢಾರಿತನದ ಅಧ್ಯಾಪಕರುಗಳೇ ಕಾಲೇಜಿನಲ್ಲಿ ವಿಜೃಂಭಿಸುತ್ತಾ ಸಮರ್ಥ ಅಧ್ಯಾಪಕರು ಹಿನ್ನಲೆಗೆ ಸರಿಯುವುದು ಆಡಳಿತಾತ್ಮಕ ಸಮಸ್ಯೆ ಆಗಿದೆ.

ಆ) ವಿಶ್ವವಿದ್ಯಾನಿಲಯ ಅಥವಾ ಕೆಪಿಎಸ್ಸಿ ಅಧ್ಯಾಪಕರ ನೇಮಕಾತಿಯಲ್ಲಿ ದೊಡ್ಡಮಟ್ಟದ ಭ್ರಷ್ಟಾಚಾರ ಮಾಡುತ್ತಿದೆ. ಇದು ಬೌದ್ಧಿಕ ಬರಡುತನಕ್ಕೆ ಎಡೆ ಮಾಡಿಕೊಟ್ಟಿದೆ.

ಇ) ಕಲಿಕಾ ವಿಧಾನದಲ್ಲಿ ಕ್ರಾಂತಿಕಾರಕ ಮಾರ್ಪಾಡಾಗದೇ ನಿಜವಾದ ಕಲಿಕೆ ಸಾಧ್ಯವಿಲ್ಲ. ವಿಭಿನ್ನ ಸಾಮಾಜಿಕ ಸ್ತರದಿಂದ ಬಂದ ವಿದ್ಯಾರ್ಥಿಗಳನ್ನು ದೊಡ್ಡ ತರಗತಿಗಳಲ್ಲಿ (೮೦–೧೫೦ರಷ್ಟು ವಿದ್ಯಾರ್ಥಿಗಳು) ನಿಭಾಯಿಸಬೇಕಾದ ಸಂವಹನಾ ಸಾಮರ್ಥ್ಯ ಅಧ್ಯಾಪಕರಿಗೆ ಇರಬೇಕಾಗುತ್ತದೆ.

ಈ) ಪರೀಕ್ಷಾ ಕೇಂದ್ರಿತ ಕಲಿಕೆಗೆ ಸರಿಯಾದ ಪರ್ಯಾಯ ವಿಧಾನವೂ ದಕ್ಕಿಲ್ಲ. ಈಗಿನ ಪ್ರಶ್ನೆಪತ್ರಿಕೆ ಸಿದ್ಧಗೊಳಿಸುವುದು ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ತೀರಾ ವ್ಯಕ್ತಿಗತವಾಗಿವೆ. ಏಕ ಅಂಕದ ಪ್ರಶ್ನೆಪತ್ರಿಕೆಯ ವಿಧಾನ ವಿದ್ಯಾರ್ಥಿಗಳ ಬರವಣಿಗೆಯ ಕೌಶಲ್ಯ–ಕಲಿಕೆಯನ್ನೇ ಕೊಂದು ಹಾಕಿದೆ.

ಉ) ಸಮಕಾಲೀನ ಚರ್ಚೆ–ಡಿಸ್‌ಕೋರ್ಸ್‌ಗಳು ಪಠ್ಯಕ್ರಮದಲ್ಲಿ ಅಗತ್ಯವಾಗಿರಬೇಕಾಗುತ್ತದೆ. ಸರ್ಕಾರ ತರಲು ಉದ್ದೇಶಿಸಿರುವ ಏಕರೀತಿಯ ಶಿಕ್ಷಣ ವ್ಯವಸ್ಥೆ ಸ್ಥಳೀಯ ತಿಳವಳಿಕೆಗಳಿಗೆ ಮಾರಕವಾಗಿವೆ.

ಊ) ಯು.ಜಿ.ಸಿ ಪ್ರೋತ್ಸಾಹಿಸುವ ಸ್ವಾಯತ್ತ ಕಾಲೇಜುಗಳಿಂದ ಹೆಚ್ಚಿನ ಪ್ರಯೋಜನ ಕಂಡುಬಂದಿಲ್ಲ. ಸ್ವಾಯತ್ತ ಖಾಸಗಿ ಕಾಲೇಜುಗಳು ಹಣದ ವ್ಯಾಪಾರ ಮಾಡುತ್ತಿದ್ದರೆ ಸರ್ಕಾರಿ–ಗ್ರಾಮೀಣ ಪ್ರದೇಶದ ಸ್ವತಂತ್ರ ಕಾಲೇಜುಗಳು ವಿಶೇಷವಾಗಿದ್ದೇನು ಸಾಧಿಸಿಲ್ಲ. ಖಾಸಗಿ ಸ್ವತಂತ್ರ ಕಾಲೇಜುಗಳು ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನೇ ಸಂಪೂರ್ಣ ನಿರ್ಲಕ್ಷಿಸಿವೆ. ಇವುಗಳ ಪಠ್ಯಕ್ರಮದಲ್ಲಿ ಕನ್ನಡ ಐಚ್ಛಿಕ ವಿಷಯವೇ ಮಾಯವಾಗಿದೆ.

ಹಾಗಾಗಿ ಪಠ್ಯದ ಸಮಕಾಲೀನತೆ, ಕಲಿಕಾ ವಿಧಾನದಲ್ಲಿ ಮಾರ್ಪಾಡು, ಖಾಸಗಿಯವರ ನಿಯಂತ್ರಣದಲ್ಲಿರುವ ಶೈಕ್ಷಣಿಕ ನೀತಿಗಳು, ಭಾಷಾ ಕಲಿಕೆಯಲ್ಲಾಗಬೇಕಾದ ಮೂಲಭೂತ ಮಾರ್ಪಾಡು, ಬೌದ್ಧಿಕ ಬರಡುತನ, ಪರೀಕ್ಷಾ ಕೇಂದ್ರಿತ ಕಲಿಕೆಯನ್ನು ಎದುರಿಸುವ ಬಗೆ ಸದ್ಯದ ಶೈಕ್ಷಣಿಕ ಸವಾಲುಗಳಲ್ಲಿ ಪ್ರಮುಖವಾದವು ಎಂದು ನನಗನ್ನಿಸುತ್ತಿದೆ.

**–ಪ್ರೊ. ಟಿ. ಅವಿನಾಶ್** , ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಿವಮೊಗ್ಗ

---

## ಉನ್ನತ ಶಿಕ್ಷಣ: ತಾಂಡವವಾಡುತ್ತಿರುವ ಬೌದ್ಧಿಕ ದಾರಿದ್ರ್ಯ

**–ಡಾ. ರಾಜೇಂದ್ರ ಚೆನ್ನಿ**

ಉನ್ನತ ಶಿಕ್ಷಣಕ್ಕೆ ಇರಬೇಕಾದ ಎರಡು ಉದ್ದೇಶಗಳೆಂದರೆ ಒಂದು, ಹೊಸದಾದ ಜ್ಞಾನದ ಉತ್ಪಾದನೆಯನ್ನು ಮಾಡುವುದು; ಎರಡನೇಯದು ಸಮಕಾಲೀನ ಸಮಾಜದ ಸೂಕ್ಷ್ಮವಾದ ಪರಾಮರ್ಶೆಯನ್ನು ನೀಡುವುದು. (critique ಎನ್ನುವ ಅರ್ಥದಲ್ಲಿ). ಇವೆರಡು ಉದ್ದೇಶಗಳು ಈಡೇರುವುದು ಸ್ವತಂತ್ರವಾದ, ಸ್ವಂತಿಕೆಯುಳ್ಳ ವಿಚಾರಶೀಲತೆಯಿಂದ. ವೈಚಾರಿಕ ಸ್ವಾತಂತ್ರ್ಯದಿಂದ. ಚರ್ಚೆ, ವಿರೋಧ, ಸಂವಾದ, ಅಸಮ್ಮತಿ ಇವುಗಳ ಮೂಲಕವೇ ಇದು ಸಾಧ್ಯವಾಗಬಲ್ಲದು. ಆದರೆ, ಅದಕ್ಕೆ ಅವಶ್ಯಕವಾದ ಪ್ರಜಾತಂತ್ರ ಮಾದರಿಯ ಕಲಿಕೆಗೆ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಆಸ್ಪದವೇ ಇಲ್ಲ. ನಾವು ಈಗಲೂ ಶಿಕ್ಷಣವೆಂದರೆ ಸಿದ್ಧ ಮಾಹಿತಿಯ ವರ್ಗಾವಣೆಯೆಂದೇ ನಂಬಿಕೊಂಡಿದ್ದೇವೆ. ನಾವು ಕಲಿಸುವ ಜ್ಞಾನಶಿಸ್ತಿನಲ್ಲಿ ಈಗಾಗಲೇ ಸ್ವೀಕೃತವಾದದ್ದನ್ನು ವಿದ್ಯಾರ್ಥಿಗಳಿಗೆ ವರ್ಗಾಯಿಸುವುದು ಮುಖ್ಯವೆಂದುಕೊಂಡಿದ್ದೇವೆ. ಹೀಗಾಗಿ ನಮ್ಮ ತರಗತಿಗಳಲ್ಲಿ ವಿದ್ಯಾರ್ಥಿಗಳು ಕೂಡುವ, ಶಿಕ್ಷಕರು ನಿಲ್ಲುವ ರೀತಿಯಲ್ಲಿಯೇ ಒಂದು ಅಸಮಾನತೆಯ ವಾತಾವರಣ ಸೃಷ್ಟಿಯಾಗುತ್ತದೆ. ಜ್ಞಾನದ ಅಧಿಕಾರಯುತ ಹಾಗೂ ಅಧಿಕೃತ ಸ್ರೋತವಾಗಿರುವ ಶಿಕ್ಷಕನು ವಿನೀತರಾಗಿ ಮತ್ತು ಯಾವ ಕ್ರಿಯಾಶೀಲತೆಯಿಲ್ಲದೆ ಅದನ್ನು ಸ್ವೀಕರಿಸುವ ವಿದ್ಯಾರ್ಥಿಗಳಿಗೆ "ವಿದ್ಯಾ ದಾನ" ವನ್ನು ಮಾಡುತ್ತಾನೆ ಎನ್ನುವ ನಂಬಿಕೆ ಈಗಲೂ ಪ್ರಬಲವಾಗಿಯೇ ಇದೆ. ಇಂಥ ಶಿಕ್ಷಣ ವ್ಯವಸ್ಥೆಯಲ್ಲಿ ವೈಯಕ್ತಿಕ ಕುತೂಹಲ, ಜಿಜ್ಞಾಸೆ, ವೈಚಾರಿಕ ಸಾಹಸ, ಪ್ರಯೋಗಶೀಲತೆ ಮುಂತಾದ ಯಾವುದೇ ಗುಣವಿರುವ ವಿದ್ಯಾರ್ಥಿಗೆ ಅವಕಾಶವೇ ಇಲ್ಲ. ಇದೇ ಕಾರಣದಿಂದಾಗಿ ಸಂಶೋಧನೆಯ ಪ್ರವೃತ್ತಿಗೂ ಶಿಕ್ಷಣಕ್ಕೂ



ಸಂಬಂಧವೇ ಇಲ್ಲದಂತಾಗಿದೆ. ಅಂದರೆ ಶಿಕ್ಷಣವೆಂದರೆ ಜ್ಞಾನದ ಸ್ವೀಕಾರ ಮಾತ್ರವಾಗಿದ್ದರಿಂದ ಅದರಲ್ಲಿ ವೈಚಾರಿಕ ಅನ್ವೇಷಣೆಗೆ ಸ್ಥಾನವೇ ಇಲ್ಲದಂತಾಗಿದೆ. ತುಂಬಾ ಹಿಂದೆಯೇ ೧೯೬೮ರಲ್ಲಿ, ಶಿಕ್ಷಣ ವ್ಯವಸ್ಥೆಯ ಬಗ್ಗೆ ತಲಸ್ಪರ್ಶಿಯಾಗಿ ಬರೆದ ಪಾವೊಲೋ ಫ್ರೇರ್, ಇಂಥ ಶಿಕ್ಷಣವನ್ನು safe deposit ಮಾದರಿಯ

ಶಿಕ್ಷಣವೆಂದು ವಿವರಿಸಿದ. ಬ್ಯಾಂಕ್‌ನ ಲಾಕರ್‌ನಲ್ಲಿ ಸುರಕ್ಷಿತವಾಗಿ ಇಡುವಂತೆ ಜ್ಞಾನವನ್ನು ಶಿಕ್ಷಕರಲ್ಲಿ, ವಿದ್ಯಾರ್ಥಿಗಳಲ್ಲಿ ಇಡುವ ಶಿಕ್ಷಣದ ಮಾದರಿ ಇದಾಗಿದೆ. ವಾಸ್ತವಿಕ ಸಾಮಾಜಿಕ ಅನುಭವದ ಮೂಲಕ, ಅದರ ವೈಚಾರಿಕ ನಿಷ್ಕರ್ಷೆಯ ಮೂಲಕ ಬೆಳೆಯುವ ಜ್ಞಾನವು ಈ ವ್ಯವಸ್ಥೆಯಲ್ಲಿ ಸಿಕ್ಕಲಾರದು. ಈ ವ್ಯವಸ್ಥೆಯಲ್ಲಿ ಪಠ್ಯಕ್ರಮವು ಅಸಾಧಾರಣವಾದ ಅಧಿಕಾರವನ್ನು ಹೊಂದಿರುತ್ತದೆ. ಅದು ಆಖೈರಾಗಿ ಜ್ಞಾನದ ಸ್ವರೂಪ ಮತ್ತು ಮಿತಿಗಳನ್ನು ಗುರುತಿಸಿಬಿಡುತ್ತದೆ. ಪಠ್ಯಕ್ರಮಕ್ಕೆ ಅನುಗುಣವಾಗಿರುವ ಪಠ್ಯಗಳು ಅಥವಾ ಪಠ್ಯವಸ್ತುಗಳು ಇಂಥದೇ ಅಧಿಕಾರವನ್ನು ಪಡೆದಿರುತ್ತವೆ. ಇವುಗಳು ಜ್ಞಾನದ ಉತ್ಪಾದನೆಗೆ ಇರುವ ಸಾಧನಗಳು ಮಾತ್ರ ಎನ್ನುವುದು ಗೊತ್ತೇ ಆಗುವುದಿಲ್ಲ. ಉದಾಹರಣೆಗೆ ಕನ್ನಡ ಎಂ.ಎ. ಪಠ್ಯಕ್ರಮವು ಪೂರ್ವನಿರ್ಧಾರಿತವಾದ ಪಠ್ಯಗಳ ಹಾಗೂ ಮಾಹಿತಿಗಳ ಒಂದು ಪಟ್ಟಿಯಾಗಿಬಿಡುತ್ತದೆ. ಅದು ಕನ್ನಡ ಸಾಹಿತ್ಯದ ಕಲಿಕೆಯನ್ನೇ ನಿರ್ಧರಿಸಿಬಿಡುತ್ತದೆ. ಕನ್ನಡವೆಂದರೇನು, ಕನ್ನಡ ಸಾಹಿತ್ಯವನ್ನು ಚಾರಿತ್ರಿಕವಾಗಿ ಯಾರು ಹೇಗೆ ನಿರ್ವಚಿಸಿಕೊಟ್ಟರು? ಯಾಕೆ ಕನ್ನಡ ಸಾಹಿತ್ಯವೆಂದರೆ ಪ್ರಧಾನ ಪಠ್ಯಗಳ, ಮುಖ್ಯ ಪರಂಪರೆಯ ಪಟ್ಟಿಯಾಗಿರಬೇಕು? ಪಠ್ಯಕ್ರಮದಲ್ಲಿ ಅಧಿಕೃತವಾಗಿ ಸೇರಿಕೊಳ್ಳುವ ಬಹುಪಾಲು ಸಂಗತಿಗಳು ನಮಗೆ ಅನಾವಶ್ಯಕವೂ, ಅಪ್ರಸ್ತುತವೂ ಅಲ್ಲವೆ? ಈ ಯಾವ ಪ್ರಶ್ನೆಗಳಿಗೂ ಶೈಕ್ಷಣಿಕ ಓದಿನಲ್ಲಿ ಅವಕಾಶವಿರುವುದಿಲ್ಲ. ಈಗ ಕಲಿಯಲಾಗುತ್ತಿರುವ ಕನ್ನಡ ಸಾಹಿತ್ಯ ಚರಿತ್ರೆಯ ಹಿಂದಿನ ವೈಚಾರಿಕ ಮಾದರಿಗಳು ಸಮಕಾಲೀನ ಸಿದ್ಧಾಂತಗಳಿಗೆ ಸ್ವೀಕಾರಾರ್ಹವೇ ಎಂದು ಪ್ರಶ್ನಿಸಲಾಗದು. ಇದರ ಪರಿಣಾಮವೆಂದರೆ ಈಗಾಗಲೇ ಕನ್ನಡ ಸಾಹಿತ್ಯದ ಸಿದ್ಧಮಾದರಿಯೊಂದು ಇದ್ದು ಅದನ್ನು ವಿದ್ಯಾರ್ಥಿಗಳಿಗೆ ವರ್ಗಾಯಿಸಲಾಗುತ್ತಿದೆ.

ಅಲ್ಲದೆ "ಪ್ರಧಾನ" ಪಠ್ಯಗಳ ಓದು ಹಾಗೂ ವ್ಯಾಖ್ಯಾನಗಳೂ ಕೂಡ ಸ್ಥಿರೀಕರಣಗೊಂಡು ಬಿಟ್ಟಿವೆ. ೧೯೭೪ ರಲ್ಲಿ ಪ್ರಕಟವಾದ *ಪಂಪ: ಒಂದು ಅಧ್ಯಯನ* (ಸಂ.ಜಿ.ಎಸ್. ಶಿವರುದ್ರಪ್ಪ) ಈ ಕೃತಿಯಲ್ಲಿ ಇರುವ ವ್ಯಾಖ್ಯಾನ ಮಾದರಿಗಳಿಂದಾಚೆಗೆ ಪಂಪನ ಕೃತಿಗಳ ಬೋಧನೆ/ಕಲಿಕೆ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಹೆಜ್ಜೆ ಇಟ್ಟಿದೆ ಎಂದು ನನಗೆ ಅನ್ನಿಸಿಲ್ಲ. ಬಹುಪಾಲು ಶಿಕ್ಷಕರು ಈ ಕೃತಿಯನ್ನೂ ಓದಿಲ್ಲವೆಂಬುದು ನಿಜವೇ ಆಗಿದೆ. ಇಂಥ ಪರಿಸ್ಥಿತಿಯಲ್ಲಿ ಕನ್ನಡದ ಮೂಲಕ ಇಡೀ ಜಗತ್ತನ್ನೇ ಅರಿಯಬಹುದೆಂದು ನಂಬಿರುವವರು ವಿಶ್ವವಿದ್ಯಾನಿಲಯಗಳ ನಿರ್ಜೀವ ಶಿಕ್ಷಣವನ್ನು ಏನೆಂದು ಅರ್ಥಮಾಡಿಕೊಳ್ಳುವುದು?

ಕನ್ನಡ ಪರಂಪರೆಯ ಯಾವುದೇ ಪಠ್ಯವನ್ನು ಅರ್ಥೈಸಿ, ಚರ್ಚಿಸಿ, ವಿವೇಚಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಿಗೆ ಕೊಡುವುದು ಉನ್ನತ ಶಿಕ್ಷಣದ ಉದ್ದೇಶವಾಗಬೇಕಲ್ಲವೆ? ಈ ಮಾತನ್ನು ಸಮಾಜವಿಜ್ಞಾನಗಳ ಬಗ್ಗೆ ಇನ್ನೂ ಹೆಚ್ಚು ನಿಷ್ಠುರವಾಗಿ ಹೇಳಬಹುದಾಗಿದೆ. ಈ ಶಿಸ್ತುಗಳಲ್ಲಿ ಇಂದಿಗೂ ಬಳಕೆಯಲ್ಲಿರುವವು ಯೂರೋಪಿನ ಸಮಾಜವಿಜ್ಞಾನಗಳ ವೈಚಾರಿಕ ಚೌಕಟ್ಟುಗಳು, ಸಿದ್ಧಾಂತಗಳು ಹಾಗೂ ಪರಿಕಲ್ಪನೆಗಳು. ಭಾರತೀಯ ಸಮಾಜವಿಜ್ಞಾನಗಳ ನಿರ್ವಸಾಹತೀಕರಣವು ಆಗಲೇ ಇಲ್ಲ. ವಿಪರ್ಯಾಸವೆಂದರೆ ಪಶ್ಚಿಮದ ನೂರಾರು ವಿದ್ವಾಂಸರು ಉನ್ನತ ಶಿಕ್ಷಣದ ಚೌಕಟ್ಟಿನೊಳಗೇ ಭಾರತೀಯ ಸಮಾಜ, ಚರಿತ್ರೆ, ರಾಜಕೀಯ ಇವುಗಳ ಬಗ್ಗೆ ಉತ್ಕೃಷ್ಟವಾದ ಜ್ಞಾನವನ್ನು ಸೃಷ್ಟಿಸಿದ್ದಾರೆ. ಅವರು ವಿಶ್ವವಿದ್ಯಾನಿಲಯಗಳ ಶಿಕ್ಷಕರು ಹಾಗೂ ಸಂಶೋಧಕರಾಗಿಯೇ ಇದೆಲ್ಲವನ್ನು ಸಾಧಿಸಿದ್ದಾರೆ. ಇನ್ನೂ ದೊಡ್ಡ ವಿಪರ್ಯಾಸವೆಂದರೆ ಕಳೆದ ಕೆಲವು ದಶಕಗಳಲ್ಲಿ ಇಲ್ಲಿಯ ವಿಶ್ವವಿದ್ಯಾನಿಲಯಗಳಲ್ಲಿ ಓದಿ, ಯೂರೋಪಿನ ವಿಶ್ವವಿದ್ಯಾನಿಲಯಗಳಿಗೆ ವಲಸೆ ಹೋಗಿ ಸಂಶೋಧನೆಯನ್ನು ಕೈಕೊಂಡ ನೂರಾರು ಭಾರತೀಯ ಶಿಕ್ಷಕರು ಇಂದಿನ ಶ್ರೇಷ್ಠ ವಿದ್ವತ್ತನ್ನು ಸಮಾಜವಿಜ್ಞಾನಗಳಲ್ಲಿ ಸೃಷ್ಟಿಸಿದ್ದಾರೆ. ಒಂದು ಉದಾಹರಣೆ ಕೊಡುವುದಾದರೆ ಮಹಾರಾಷ್ಟ್ರದ ದಲಿತ ಚಳುವಳಿ ಹಾಗೂ ಅಂಬೇಡ್ಕರ್ ಬಗ್ಗೆ ಇತ್ತೀಚೆಗೆ ಅತ್ಯುತ್ತಮ ಕೃತಿಯೊಂದನ್ನು ರಚಿಸಿರುವ ಅನುಪಮಾ ರಾವ್ ಅವರು ಕೂಡ ಇಂಥ ಒಬ್ಬ ಪ್ರಾಧ್ಯಾಪಕರೇ. ಈ ವಿಪರ್ಯಾಸಗಳ ವಿವರಣೆಯೆಂದರೆ ಉನ್ನತ ಶಿಕ್ಷಣ ಹಾಗೂ ಸಂಶೋಧನೆಗಳ ಪರಿಕಲ್ಪನೆಯೇ ನಮ್ಮಲ್ಲಿ ತಪ್ಪಾಗಿದೆ.

ಮೇಲೆ ಹೇಳಿದ ಮಾತುಗಳ ಅರ್ಥವೆಂದರೆ ಯೂರೋಪಿನ ವಿದ್ವತ್ತು ನಮಗೆ ಪ್ರಸ್ತುತವಾಗಿದೆ ಅಥವಾ ಅನುಕರಿಸಬೇಕಾದ ಮಾದರಿಯಾಗಿದೆಯೆಂದಲ್ಲ. ಆ ವಿದ್ವತ್ತನ್ನು ಸೃಷ್ಟಿ ಮಾಡುವಂಥ ಶಿಕ್ಷಣ ವ್ಯವಸ್ಥೆ ಅಲ್ಲಿದೆಯೆನ್ನುವುದು ಮುಖ್ಯ. ಇಲ್ಲಿನ ಸದ್ಯದ ಶಿಕ್ಷಣದ ಸ್ಥಿತಿಯನ್ನು ನೋಡಿದರೆ ಅದು ಸಂಕೀರ್ಣವಾಗಿದೆ. ಇಲ್ಲಿಯ ಅನೇಕ ಏಕೈಕ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ (stand alone institutions), ಉದಾಹರಣೆಗೆ ಭಾರತೀಯ ವಿಜ್ಞಾನ ಸಂಸ್ಥೆ, ದೆಹಲಿಯ CSDS, ಹಲವಾರು ಐ.ಐ.ಟಿ.ಗಳು, ಇವುಗಳಲ್ಲಿ ಕಲಿಕೆ ಹಾಗೂ ಸಂಶೋಧನೆಗಳು ವೈಚಾರಿಕ ಸ್ವಂತಿಕೆ, ಆಳವಾದ ಅಧ್ಯಯನ, ವಸ್ತುನಿಷ್ಠತೆ ಇವುಗಳನ್ನು ಬೆಂಬಲಿಸಲಾಗುತ್ತಿದೆ. ಇವು elitist ಆಗಿ ಕಂಡರೂ ಕೂಡ ತಾವು ಮಾಡಬೇಕಾದ ಕೆಲಸಗಳನ್ನು ಸಮರ್ಪಕವಾಗಿ ಮಾಡುತ್ತಿವೆ.

ಆದರೆ ನಮ್ಮ ರಾಜ್ಯ ವಿಶ್ವವಿದ್ಯಾನಿಲಯಗಳು ಇಂಥ ಶ್ರೇಷ್ಠತೆಯ ವ್ಯಸನವನ್ನೇ ತ್ಯಜಿಸಿಬಿಟ್ಟಿವೆ! ಇವು ಕಲಿಕೆ, ಸಂಶೋಧನೆಗಳ ದೃಷ್ಟಿಯಲ್ಲಿ ಜ್ಞಾನದ ಉತ್ಪಾದನೆಯ ಅಳತೆಗೋಲಿನಲ್ಲಿ ಅತ್ಯಂತ ಕಳಪೆಯಾಗಿವೆ. ಅಷ್ಟು ಸಾಲದು ಎನ್ನುವಂತೆ ಭ್ರಷ್ಟಾಚಾರ, ಜಾತೀಯತೆಗಳ ಕೂಪಗಳಾಗಿವೆ. ಇದು ಯಾಕೆ ಭಯಾನಕವಾದ ಸಂಗತಿಯೆಂದರೆ ಬಿ.ಎಂ.ಶ್ರೀ.ಯವರಿಂದ ಅನಂತಮೂರ್ತಿಯವರ ವರೆಗೆ, ಅಂಬೇಡ್ಕರ್‌ರಿಂದ ಅಮರ್ತ್ಯಸೇನ್‌ರವರೆಗೆ ನಾವು ಬಲ್ಲ ಬಹುಪಾಲು ವಿದ್ವಾಂಸರು ಉನ್ನತ ಶಿಕ್ಷಣದ ವಲಯದಿಂದಲೇ ಬಂದವರು. ಈ ವಲಯವು ಇಂದು ಕಳಪೆತನವನ್ನು ಬಿಟ್ಟರೆ ಇನ್ನೇನನ್ನೂ ಸೃಷ್ಟಿಸಲಾಗದ ಸ್ಥಿತಿಗೆ ತಲುಪಿಬಿಟ್ಟಿವೆಯೆ? ಮೇಲೆ ಹೇಳಿದ ಕಾರಣಕ್ಕಾಗಿಯೇ ಸಾಮಾಜಿಕ ಪರಿಸ್ಥಿತಿಯ ಆಳವಾದ ಪರಾಮರ್ಶೆಯು ಉನ್ನತ ಶಿಕ್ಷಣದ ಮೂಲಕ ಸಾಧ್ಯವಾಗುತ್ತಿಲ್ಲ. ಜಾಗತೀಕರಣ, ಅಭಿವೃದ್ಧಿಯ ಹುಸಿ ಪರಿಕಲ್ಪನೆಗಳು, ಕೋಮುವಾದ ಇವುಗಳ ಬಗ್ಗೆಯಾಗಲೀ, ದೇಶದ ಸರಕಾರಗಳು ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ತಳಹದಿಯನ್ನೇ ನಾಶಮಾಡುತ್ತಿರುವ ಬಗೆಗಾಗಲಿ ಸಮಗ್ರವಾದ ಪರಾಮರ್ಶೆಯನ್ನು ವಿಶ್ವವಿದ್ಯಾನಿಲಯಗಳು ನಿರ್ಮಿಸಿಲ್ಲ. ಇದರ ಪ್ರಯೋಜನವನ್ನು ಪಡೆದುಕೊಂಡ ಇಂದಿನ ಬಲಪಂಥೀಯ ಸರಕಾರವು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಗಳಲ್ಲಿ ಪೆದ್ದಗುಂಡರಾದ ಆರ್.ಎಸ್.ಎಸ್. ಚೇಲಾಗಳನ್ನು ನೇಮಕ ಮಾಡಿದೆ. ವೈಚಾರಿಕತೆ ಮತ್ತು ವಿದ್ವತ್ತುಗಳನ್ನೂ ತೀವ್ರವಾಗಿ ದ್ವೇಷಿಸುವ ಬಲಪಂಥೀಯರು ಆಧುನಿಕ ಭಾರತೀಯ ಶಿಕ್ಷಣದ ಶವಪೆಟ್ಟಿಗೆಯ ಮೇಲೆ ಕೊನೆಯ ಮೊಳೆಯನ್ನು ಹೊಡೆಯುತ್ತಿದ್ದಾರೆ. *

## ಪತ್ರಿಕೆಯ ಚಂದಾ ಇತ್ಯಾದಿ ಕುರಿತು

**ಪ್ರಿಯ ಓದುಗರೇ,**

**'ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗಬಯಸುವವರಿಗೆ ಆಗಸ್ಟ್ 2015ರ ವಿಶೇಷ ಸಂಚಿಕೆಯಿಂದ ಆಗಸ್ಟ್ 2016ರ ಆಗಸ್ಟ್ ವಿಶೇಷ ಸಂಚಿಕೆಯವರೆಗೆ ಒಟ್ಟು ಚಂದಾ ರೂ. 200/–. ಈ ಮೊತ್ತವನ್ನು *ಸಂಪಾದಕರು, ಹೊಸ ಮನುಷ್ಯ*–ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ (IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ತಮ್ಮ ವಿಳಾಸವನ್ನು ತಪ್ಪದೆ ಸಂಪಾದಕರಿಗೆ ತಿಳಿಸಬೇಕು.**

**ಇನ್ನು ಪತ್ರಿಕೆಯಲ್ಲಿನ ಲೇಖನಗಳ ಬಗ್ಗೆ ತಮ್ಮ ಅಭಿಪ್ರಾಯ/ಪ್ರತಿಕ್ರಿಯೆಗಳನ್ನು ಕಳಿಸಬಯಸುವವರು ಆದಷ್ಟೂ ಸಂಕ್ಷಿಪ್ತವಾಗಿ–ಹೆಚ್ಚೆಂದರೆ 200 ಶಬ್ದಗಳಲ್ಲಿ–ಆಯಾ ಸಂಚಿಕೆಯ ತಿಂಗಳ 20ರೊಳಗೆ ಬರೆದು ಕಳಿಸಬಹುದು ಅಥವಾ ಮೇಲ್ ಮಾಡಬಹುದು.**

**ಪತ್ರಿಕೆಯ ಬಹಳಷ್ಟು ಲೇಖನಗಳು ಆಹ್ವಾನಿತವಾಗಿರುವುದರಿಂದ, ಸ್ವಯಂಪ್ರೇರಣೆಯಿಂದ ಲೇಖನಗಳನ್ನು ಕಳಿಸಬಯಸುವವರು ಮೊದಲು ಸಂಪಾದಕರೊಂದಿಗೆ ದೂರವಾಣಿ ಮೂಲಕ ಸಮಾಲೋಚಿಸಿ ಲೇಖನಗಳನ್ನು ಕಳಿಸಬೇಕಾಗಿ ಕೋರಲಾಗಿದೆ.**

**ಪತ್ರಿಕೆಯ ದೂರವಾಣಿ ಸಂಖ್ಯೆ, ಈ ಮೇಲ್ ಹಾಗೂ ಅಂಚೆ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ**–ಸಂಪಾದಕ.

**ಸಾಹಿತ್ಯ–ಸಂಸ್ಕೃತಿ–ರಾಜಕಾರಣ**

# ಒಂದು ವಿದಾಯ ಮತ್ತು ಇಬ್ಬರು ಗೆಳೆಯರ ಪುಸ್ತಕಗಳು



**ಕಾ**ಸರಗೋಡಿನ ಕವಿ ಕಯ್ಯಾರ ಕಿಂಯ್ಞಣ್ಣ ರೈ ಇನ್ನಿಲ್ಲ. ಅವರು ಇನ್ನು ನೆನಪಾಗುವುದು ಅಥವಾ ನೆನಪಿನಲ್ಲಿ ಉಳಿಯುವುದು ಬಹುಶಃ ಕವಿಯಾಗಿ ಅಲ್ಲ. ಏಕೆಂದರೆ ಅವರ ಕವಿತೆಗಳು ಕಾಲದಲ್ಲಿ ಕಳೆದುಹೋಗುವಂತಹವವು. ಆದರೆ ತಮ್ಮ ಶತಾಯುಷ್ಯದ ಬದುಕಿನುದ್ದಕ್ಕೂ ಅವರು ತಾವಿದ್ದ ಕಾಸರಗೋಡು ಪ್ರದೇಶದಲ್ಲಿ ಕನ್ನಡದ ಪೋಷಣೆ ಮತ್ತು ಉಳಿವಿಗಾಗಿ ಹಾಗೂ ಅದನ್ನು ಕರ್ನಾಟಕದಲ್ಲಿ ವಿಲೀನಗೊಳಿಸಲು ನಡೆಸಿದ ಹೋರಾಟವನ್ನು ಕನ್ನಡಿಗರು ಮರೆಯುವುದಿಲ್ಲ. ಏಕೆಂದರೆ ಇಂತಹ ಹೋರಾಟ ನಡೆಸಿದ ಕಯ್ಯಾರರು ಹುಟ್ಟಿನಿಂದ ತುಳುವರು; ಇದ್ದುದು ಮಲೆಯಾಳದಲ್ಲಿ. ಆದರೆ ಕನ್ನಡ ನಾಡು–ನುಡಿ ಕುರಿತ ಅವರ ಈ ಬದ್ಧತೆ ಬೆರಗುಗೊಳಿಸುವಂತಹದ್ದು. ನಾನು ಇದನ್ನೆಲ್ಲ ಇಲ್ಲಿ ನೆನಪಿಸಿಕೊಳ್ಳಲು ಕಾರಣ, ಮೂರು ತಿಂಗಳ ಹಿಂದೆ ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನ್ನಡ ನಾಡು ನುಡಿಗಳಿಗಾಗಿ ಕ್ರಿಯಾಶೀಲರಾಗಿ ಹೋರಾಡುತ್ತಾ ಬಂದ ಧೀಮಂತರಿಗೆ 'ಸಂಗೊಳ್ಳಿ ರಾಯಣ್ಣ' ಹೆಸರಿನ ಪ್ರಶಸ್ತಿ ನೀಡಲು ಹೆಸರುಗಳನ್ನು ಸೂಚಿಸುವಂತೆ ನನ್ನನ್ನು ಕೇಳಿತ್ತು. ಕಳೆದ ವರ್ಷ ಈ ಪ್ರಶಸ್ತಿಯನ್ನು ವಾಟಾಳ್ ನಾಗರಾಜರಿಗೆ ನೀಡಿದ್ದಾಗಿಯೂ ತಿಳಿಸಿತ್ತು. ಪ್ರಶಸ್ತಿ ದೊಡ್ಡ ಮೊತ್ತದ ನಗದನ್ನೂ ಒಳಗೊಂಡಿದ್ದರಿಂದ ನಾನು ಸಾಕಷ್ಟು ಯೋಚಿಸಿ ಮೂರು ಹೆಸರುಗಳನ್ನು ಸೂಚಿಸಿದೆ. ಮೊದಲನೆಯದು ಕಯ್ಯಾರರದ್ದಾದರೆ, ಮಿಕ್ಕೆರಡು ಡಾ. ಪಾಟೀಲ ಪುಟ್ಟಪ್ಪ ಮತ್ತು ಡಾ. ಚಿದಾನಂದಮೂರ್ತಿಯವರದ್ದಾಗಿತ್ತು. ಆದರೆ ಇಲಾಖೆ ಈ ಪ್ರಶಸ್ತಿಯನ್ನು ಘೋಷಿಸಿದ್ದು ಯಾರಿಗೆ ಗೊತ್ತೆ? ಶ್ರೀಮತಿ ಬಿ.ಟಿ. ಲಲಿತಾ ನಾಯಕರಿಗೆ! ನನ್ನ ಅಭಿಪ್ರಾಯದಲ್ಲಿ ಇವರಿಗೆ ಈ ಪ್ರಶಸ್ತಿ ಕೊಡುವುದಾದರೆ, ಅದಕ್ಕೆ ಮುನ್ನ ಕನಿಷ್ಟ ೨೫ ಜನರಿಗೆ ಈ ಪ್ರಶಸ್ತಿಯನ್ನು ನೀಡಬೇಕಾಗುತ್ತದೆ!

ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಈ ಸರ್ಕಾರ ಮಾಡುವ ಅನ್ಯಾಯಗಳಿಗೆ ಎಣೆಯೇ ಇಲ್ಲವೆಂದು ಕಾಣುತ್ತದೆ..




ಗೆಳೆಯ ಎನ್ ಎಸ್. ಶಂಕರ್ ಲಂಕೇಶರನ್ನು ಕುರಿತಂತೆ 'ಲಂಕೇಶ್; ಇಂತಿ ಕೆಲ ಪ್ರಶ್ನೆಗಳು...!' ಎಂಬ ಒಂದು ಪುಟ್ಟ ಪುಸ್ತಕವನ್ನು ಹೊರತಂದಿದ್ದಾರೆ. ಪುಸ್ತಕದ ಶೀರ್ಷಿಕೆಯೇ ಸೂಚಿಸುವಂತೆ ಈ ಪುಸ್ತಕದಲ್ಲಿ ಶಂಕರ್ ಅವರು, ಲಂಕೇಶ್ ಮತ್ತು ಡಿ.ಆರ್. ನಾಗರಾಜ್‌ರ ಬಗ್ಗೆ ನಟರಾಜ ಹುಳಿಯಾರ್ ಬರೆದ 'ಇಂತೀ ನಮಸ್ಕಾರಗಳು' ಪುಸ್ತಕಕ್ಕೆ ನೀಡಿದ ಒಂದು ಪ್ರತಿಕ್ರಿಯೆಯೂ ಆಗಿದ್ದು(ಇದನ್ನು ಪುಸ್ತಕದಲ್ಲಿ ಪದೇ ಪದೇ ನಿರಾಕರಿಸಲಾಗಿದೆಯಾದರೂ!) ಲಂಕೇಶರ ವ್ಯಕ್ತಿತ್ವ ಮತ್ತು ಸಾಹಿತ್ಯ ಕುರಿತಂತೆ ಹುಳಿಯಾರರು ಮಾಡಿರುವ ಹಲವು ವ್ಯಾಖ್ಯಾನಗಳನ್ನು ಪ್ರಶ್ನಿಸುತ್ತಾ ತಮ್ಮದೇ ಮಾತುಗಳನ್ನೂ ಆಡುತ್ತಾರೆ. ಶಂಕರ್ ಮತ್ತು ನಟರಾಜ್ ಒಂದು ಕಾಲದಲ್ಲಿ ಲಂಕೇಶರೊಂದಿಗೆ ಅವರ ಪತ್ರಿಕೆಯಲ್ಲಿ ಒಟ್ಟಿಗೆ ಕೆಲಸ ಮಾಡಿದವರಾದ್ದರಿಂದ ಶಂಕರ್ ಅವರ ಬರವಣಿಗೆಗೊಂದು ಸಾಂದರ್ಭಿಕ ಅಥೆಂಟಿಸಿಟಿಯೂ ಒದಗಿದೆ. ಮುಖ್ಯವಾಗಿ ಲಂಕೇಶರ ಒಡೆದ ವ್ಯಕ್ತಿತ್ವ, ಮೀಸಲಾತಿ ಕುರಿತ ಅವರ ಬದ್ಧತೆ, ಮನುಷ್ಯ ಮೂಲತಃ ಈವಿಲ್ ಎಂಬ ಅವರ ನಂಬಿಕೆ –ಇವುಗಳನ್ನು ನಟರಾಜ್‌ರು ಆರಾಧನೆಯ ಮಳೆಯಲ್ಲಿ ತೊಯ್ದ ತಮ್ಮ ತುಂಬ ಸರಳೀಕೃತ ಮತ್ತು ಒಂದು ರೀತಿಯಲ್ಲಿ ರೋಚಕವೆನ್ನಬಹುದಾದ ಶೈಲಿಯ ಬರವಣಿಗೆಯ ಕಾರಣದಿಂದಾಗಿ ವೈಭವೀಕರಿಸಿದ್ದು, ಅವುಗಳ ಪ್ರಾಮಾಣಿಕ ಶೋಧನೆ ಲಂಕೇಶರ ವ್ಯಕ್ತಿತ್ವದ ದೌರ್ಬಲ್ಯಗಳನ್ನು ಹೊರಹಾಕಬಲ್ಲುದು ಎಂದು ಶಂಕರ್ ಹಲವು ಉದಾಹರಣೆಗಳ ಮೂಲಕ ವಾದಿಸುತ್ತಾರೆ.

ಹುಳಿಯಾರ್ ಮತ್ತು ಶಂಕರ್‌ರ ವಾದಗಳನ್ನು ಇಲ್ಲಿ ವಿವರವಾಗಿ ಪರಿಶೀಲಿಸಲು ಸಾಧ್ಯವಿಲ್ಲವಾದ್ದರಿಂದ, ನಾನೂ ಈ ಇಬ್ಬರಗಿಂತ ಬಹು ಮುಂಚೆ ಲಂಕೇಶರೊಂದಿಗೆ ಅವರ ಪತ್ರಿಕೆಗಾಗಿ ಕೆಲಸ ಮಾಡಲು ಹೆಣಗಿದವನಾಗಿ ಈ ಸಂಬಂಧ ಈ ಒಂದು ಮಾತನ್ನು ಹೇಳಬಲ್ಲೆ: ಲಂಕೇಶ್‌ರನ್ನು ಓರ್ವ ಲೇಖಕರಾಗಿ ಮತ್ತು ಓರ್ವ ಪತ್ರಕರ್ತರಾಗಿ ಒಟ್ಟಿಗೇ ಹಿಡಿದು ನೋಡಲು, ತೀರ್ಮಾನಗಳನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ಲೇಖಕ ಮಾಡುವ ಶೋಧನೆಯ ನೆಲೆಗಳೇ ಬೇರೆ ಮತ್ತು ಅದರ ಪರಿಶೀಲನೆಯ ನೆಲೆಗಳೇ ಬೇರೆ. ಹಾಗೇ ಪತ್ರಕರ್ತನ ಶೋಧನೆಯ ನೆಲೆಗಳೂ, ಅದರ ಪರಿಶೀಲನೆಯ ನೆಲೆಗಳೂ. ಈ ದೃಷ್ಟಿಯಿಂದ ಹೇಳುವುದಾದರೆ, ಕಥೆಗಾರನಾಗಿ ಲಂಕೇಶ್ ನಡೆಸಿರುವ ಜೀವನ ಶೋಧನೆಯ ನೆಲೆಗಳ ಬಗ್ಗೆ ಹಲವು ತಕರಾರುಗಳನ್ನು ಎತ್ತಬಹುದಾದರೂ, ಅದರ ಪ್ರಾಮಾಣಿಕತೆಯನ್ನು ಪ್ರಶ್ನಿಸುವುದು ಕಷ್ಟ. ಆದರೆ ಇದೇ ಮಾತನ್ನು ಅವರ ಪತ್ರಕರ್ತತನದ ಬಗ್ಗೆ ಹೇಳಲಾಗದು. ಅವರು ನನಗೆ ಅನಿಸಿದಂತೆ, ಸ್ಥಗಿತತೆಗೆ ಬಂದಂತಿದ್ದ ತಮ್ಮ ಸೃಜನಶೀಲತೆಯನ್ನು ಪುನರ್‌ಶ್ಚೇತನಗೊಳಿಸಿಕೊಳ್ಳುವ ಒಂದು ಪ್ರಯತ್ನವಾಗಿ ಆರಂಭಿಸಿದ ಪ್ರಾಯೋಗಿಕ ಪತ್ರಕರ್ತತನ, ಅದು ಯಶಸ್ವಿ ವೃತ್ತಿಯಾಗಿ ಹಣದ ರಾಶಿ ತರುತ್ತಿದ್ದಂತೆ ಅವರು ದಾರಿ ತಪ್ಪಿದರು. ಅದು–ದೈಹಿಕ ಅಸ್ವಸ್ಥತೆ ಮತ್ತು ಸಾವಿನ ನೆರಳು ಬಿದ್ದು–ಅವರಿಗೆ ಗೊತ್ತಾಗುವ ವೇಳೆಗೆ ಅವರ ವ್ಯಕ್ತಿತ್ವಕ್ಕೆ ಸಾಕಷ್ಟು ಜಖಂ ಆಗಿತ್ತು. 'ಲಂಕೇಶ್ ಮಾಫಿಯಾ' ಎಂಬು ಪದ ಆಗಲೇ ನಮ್ಮ ಸಾಂಸ್ಕೃತಿಕ ಲೋಕದಲ್ಲಿ ಚಾಲ್ತಿಗೆ ಬಂದಿತ್ತು. ಆದರೆ ಆಶ್ಚರ್ಯವೆಂಬಂತೆ ಅವರ ಮೇರುಕೃತಿ 'ಗುಣಮುಖ' ಸೃಷ್ಟಿಯಾದದ್ದು ಆಗಲೇ ಅಲ್ಲವೆ? ಹಾಗಾಗಿ ಇಂತಹ ಸಂದರ್ಭಗಳಲ್ಲಿ ಇಂತಹವರನ್ನು ಕುರಿತು ಆರಾಧನಾ ಸಾಹಿತ್ಯ ಅವರ ಚೇಲಾಗಳಿಂದ ಸೃಷ್ಟಿಯಾಗುವುದು ಸಹಜ. ಅದನ್ನು ಆರಾಧನಾ ಸಾಹಿತ್ಯವೆಂದೇ ಓದುವುದು ಒಳ್ಳೆಯದು. ಅದರ ಮೂಲಕ ಲೇಖಕನೊಬ್ಬನ ವ್ಯಕ್ತಿತ್ವ ಮತ್ತು ಸಾಹಿತ್ಯದ ಪರಾಮರ್ಶೆ ನಡೆಸುವುದು–ಶಂಕರ್ ಅವರ ಈ ಪರಮಾರ್ಶೆಯ ಬಗೆಗೆ ನನ್ನ ವೈಯಕ್ತಿಕ ಸಹಾನುಭೂತಿ ಇರುವುದಾದರೂ–ಅಷ್ಟೇನೂ ಫಲಪ್ರದ ಕೆಲಸವಾಗಲಾರದೆಂದೇ ನನ್ನ ಅಭಿಪ್ರಾಯ.




ನಾನು ಇತ್ತೀಚೆಗೆ ಕುತೂಹಲದಿಂದ ಓದಿದ ಇನ್ನೊಂದು ಪುಸ್ತಕ ಗೆಳೆಯ ಶಿವರಾಮು ಕಾಡನಕುಪ್ಪೆಯವರ ' ಆಸ್ಪತ್ರೆಯಲ್ಲಿ ಐವ್ವತ್ತನಾಲ್ಕು ದಿನಗಳು'. ಹತ್ತು ವರ್ಷಗಳ ಹಿಂದೆ ಕ್ಯಾನ್ಸರ್‌ಗೆ ಒಳಗಾಗಿ, ಸಕಾಲಿಕ ಮತ್ತು ಸೂಕ್ತ ಚಿಕಿತ್ಸೆಯ ಮೂಲಕ ಅದರಿಂದ ಪಾರಾದರೂ, ಮತ್ತೆ ಕಳೆದ ವರ್ಷ ಅದರ ಅಡ್ಡ ಪರಿಣಾಮವೋ ಎಂಬಂತೆ *ಮಯಸ್ತೇನಿಯಾ ಗ್ರೇವಿಸ* ಎಂಬ ಶ್ವಾಸಕೋಶದ ಮಾರಕ ಕಾಯಿಲೆಗೆ ಒಳಗಾಗಿ ಐವ್ವತ್ತೈದು ದಿನಗಳ ಕಾಲ ಆಸ್ಪತ್ರೆಯಲ್ಲಿದ್ದ ಅನುಭವದ ಚಿತ್ರವೊಂದನ್ನು ಶಿವರಾಮು ಈ ಪುಸ್ತಕದಲ್ಲಿ ನೀಡಿದ್ದಾರೆ. ಅವರು ಈ ಪುಸ್ತಕವನ್ನು ನಾನು ಎರಡು ತಿಂಗಳುಗಳ ಹಿಂದೆ ಮೈಸೂರಿನಲ್ಲಿ ಅವರ ಮನೆಯಲ್ಲಿ ಭೇಟಿಯಾಗಿದ್ದಾಗ ನೀಡಿದ್ದರಾದರೂ, ಅದನ್ನು ಕೆಲ ಪುಟ ಓದಿ ಸ್ವಲ್ಪ ಕಳವಳಗೊಂಡಂತಾಗಿ ಹಾಗೇ ಇಟ್ಟುಬಿಟ್ಟಿದ್ದೆ. ಕಾರಣ ಪುಸ್ತಕದಲ್ಲಿನ ಆಸ್ಪತ್ರೆಯ ಅನುಭವ ಅಷ್ಟು ಚಿತ್ರವತ್ತಾಗಿದ್ದು, ಆಸ್ಪತ್ರೆಯಲ್ಲಿ ಇವರಷ್ಟು ದಿನಗಳಲ್ಲದಿದ್ದರೂ, ಎರಡು ಬಾರಿ ಸಾಕಷ್ಟು ದೀರ್ಘ ಅವಧಿಗಳನ್ನು ಕಳೆದಿರುವ ನನ್ನಂಥವನಲ್ಲಿ ಹಳೆಯ ಅಹಿತಕರ ನೆನಪುಗಳನ್ನು ಕೆದಕಬಲ್ಲುದಾಗಿದೆ!

ಶಿವರಾಮು ಅವರು ಈಗ ಅಪಾಯದಿಂದ ಸಂಪೂರ್ಣ ಪಾರಾಗಿದ್ದಾರೆಂದು ಹೇಳುವಂತಿಲ್ಲವಾದರೂ, ಇಂತಹ ಪರಿಣಾಮಕಾರಿ ಪುಸ್ತಕಬರೆಯುವಷ್ಟು ಚೇತರಿಸಿಕೊಂಡಿದ್ದಾರೆ ಎಂಬುದೇ ಒಂದು ಸಂತೋಷದ ಸಂಗತಿ. ಅದಕ್ಕೆ ಕಾರಣ ಅವರ ಜೀವನ ಪ್ರೀತಿ ಮತ್ತು ಜೀವನ ಬದ್ಧತೆ. ಸಾಹಿತ್ಯದ ವಿದ್ಯಾರ್ಥಿ ಮತ್ತು ಅಧ್ಯಾಪಕರೂ ಆದ ಅವರಲ್ಲಿನ ಈ ಗುಣಗಳು ಈ ಪುಸ್ತಕದಲ್ಲಿ ಹಲವು ನೆಲೆಗಳಲ್ಲಿ ಮತ್ತು ಹಲವು ರೂಪಗಳಲ್ಲಿ ವ್ಯಕ್ತವಾಗಿವೆ: ರೋಗ ನಿದಾನ ಮತ್ತು ಚಿಕಿತ್ಸೆಯ ಸಣ್ಣ ಸಣ್ಣ ವಿವರಗಳ ಜೊತೆಗೆ ಬರುವ ತಮ್ಮ ಹೆಂಡತಿ ಮಕ್ಕಳೊಡನೆಯ ಸಂಬಂಧದ ಆಪ್ತ ವಿವರಗಳು, ವೈದ್ಯರ, ಶುಶ್ರೂಷಕರ, ಸಹಾಯಕರ, ಸಹ ರೋಗಿಗಳ ಮತ್ತು ಹಿತೈಷಿ ಗೆಳೆಯರ ನಡೆನುಡಿಗಳ ಆತ್ಮೀಯ ಚಿತ್ರಣ ಈ ಪುಸ್ತಕವನ್ನು ಒಂದು ಮಾನವೀಯ ದಾಖಲೆಯನ್ನಾಗಿಯೂ ಪರಿವರ್ತಿಸಿದೆ. ಒಟ್ಟಿನಲ್ಲಿ ಶಿವರಾಮು ಎರಡು ಬಾರಿ ಭೀಕರ ಅಸ್ವಸ್ಥತೆಯಿಂದ ಹೇಗೆ ಪಾರಾದರು ಎಂಬುದಕ್ಕೆ ಈ ಪುಸ್ತಕ ಸಾಕ್ಷಿಯಾಗಿದೆ. ಈ ಸಮಾಜವಾದಿ ಸಾಥಿಗೆ ಪತ್ರಿಕೆ ಸಕಲ ರೀತಿಯ ಶುಭ ಕೋರುತ್ತದೆ.

**–ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: **ತೇಜಸ್ವಿ ಪತ್ರಗಳು** ಸಂ: **ನರೇಂದ್ರ ರೈ ದೇರ್ಲ** ಗೌ. ಸಂ: **ರಾಜೇಶ್ವರಿ ತೇಜಸ್ವಿ** ಮತ್ತು **ಬಿ.ಎಸ್ ಶ್ರೀರಾಮ** ಪ್ರ: **ಕನಸು ಪ್ರಕಾಶನ,** ಮಾಡಾವು. (ದ.ಕ.) ಪು: **೬೧೬** ಬೆಲೆ: **ರೂ. ೪೫೦/-**

# ನಮ್ಮ ಕಾಲದ ಮಹತ್ವದ ಸಾಂಸ್ಕೃತಿಕ ದಾಖಲೆ




**ನ**ಮ್ಮ ಕಾಲದ ಬಹು ಮುಖ್ಯ ಲೇಖಕ-ಚಿಂತಕರಲ್ಲೊಬ್ಬರಾಗಿದ್ದ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಬಾಲ್ಯದಿಂದ ಸಾವಿನವರೆಗೆ ತಮ್ಮ ತಂದೆ ಕುವೆಂಪು ಅವರಿಂದ ಹಿಡಿದು ತಮ್ಮ ಅನಾಮಿಕ ಸಾಹಿತ್ಯಾಭಿಮಾನಿಗಳವರೆಗೆ ಬರೆದ ಮತ್ತು ಹಾಗೇ ಆ ಕಡೆಯಿಂದ ಅವರಿಗೆ ಬಂದ ಸಾವಿರಾರು ಪತ್ರಗಳಿಂದ ಆಯ್ದ ೭೫೦ ಪತ್ರಗಳ ಸಂಗ್ರಹವಿದು. ತೇಜಸ್ವಿ ಕೇವಲ ಲೇಖಕ ಮಾತ್ರವಲ್ಲದೆ, ನಮ್ಮ ಬಹು ಮುಖ್ಯ ಸಂಸ್ಕೃತಿ ಚಿಂತಕರೂ ಮತ್ತು ರಾಜಕೀಯ ಜಿಜ್ಞಾಸುವೂ ಆಗಿದ್ದರು. ಹಾಗಾಗಿ ತೇಜಸ್ವಿಯವರ ನಿಲುವು-ಚಿಂತನೆಗಳನ್ನಷ್ಟೇ ಅಲ್ಲ; ಕಾಲ, ವಸ್ತು ವೈವಿಧ್ಯಗಳ ದೃಷ್ಟಿಯಿಂದಲೂ, ಕನ್ನಡ ಸಾಹಿತ್ಯ-ಸಾಮಾಜಿಕ ಚಳುವಳಿ-ರಾಜಕಾರಣ, ಸಂಘರ್ಷ ಸಾಧನೆಗಳ ಬೀಸು ನೋಟವನ್ನು ನೀಡುವಲ್ಲಿಯೂ ಇಲ್ಲಿನ ಪತ್ರಗಳು ಸಾಕ್ಷಿಕಲ್ಲುಗಳಂತೆ ಕಾಣುತ್ತವೆ.

ಸಮಾಜವಾದ, ಲೋಹಿಯಾ ಚಿಂತನ-ಮಂಥನ, ದಲಿತ ಮತ್ತು ರೈತ ಚಳುವಳಿ, ಜಾತಿವಿನಾಶ ಸಮ್ಮೇಳನ, ಕರ್ನಾಟಕ ಬರಹಗಾರ ಮತ್ತು ಕಲಾವಿದರ ಒಕ್ಕೂಟ, ನವ್ಯ ಸಾಹಿತ್ಯ ಸಂದರ್ಭ, ಜೆ.ಪಿ. ನವ ನಿರ್ಮಾಣ ಆಂದೋಲನ, ತುರ್ತು ಪರಿಸ್ಥಿತಿ, ಮೌಲ್ಯಾಧಾರಿತ ರಾಜಕಾರಣ, ಪರಿಸರ ಕಾಳಜಿ, ಭಾಷೆ, ಶಿಕ್ಷಣ ಮಾಧ್ಯಮ, ಗಣಕೀಕರಣ ತಂತ್ರಜ್ಞಾನ, ಜಾಗತೀಕರಣ, ಆರ್ಥಿಕ ಉದಾರೀಕರಣ ಪರಿಕಲ್ಪನೆಗಳ ಬಗ್ಗೆ ತೇಜಸ್ವಿಯವರಿಗಿದ್ದ ಒಲವು ನಿಲುವುಗಳು ಒಂದೆಡೆಯಾದರೆ, ವಿದ್ಯಾರ್ಥಿ ಸಂಘಟನೆ, ಹೋರಾಟ, ಪತ್ರಿಕೆ, ಪ್ರಕಾಶನ, ಫೋಟೋಗ್ರಫಿ, ಕೃಷಿ, ಸಿನಿಮಾ, ನಾಟಕ ಇತ್ಯಾದಿ ಆಸಕ್ತಿಗಳೇ ಕಾರಣವಾಗಿ ತೇಜಸ್ವಿಯವರು ಕೈಗೊಂಡ ಪ್ರಯೋಗಗಳು, ಸಾಹಿತ್ಯ ಲೋಕದ ಸಂವಾದಗಳು ಸಾಹಿತಿ ಮಿತ್ರರೊಂದಿಗಿನ ಗುದ್ದಾಟ-ವಾಗ್ವಾದಗಳು ಈ ಪತ್ರಗಳಲ್ಲಿ ತುಂಬಿ ತುಳುಕಿವೆ. ತೇಜಸ್ವಿ ಅವರ ಚಿಕಿತ್ಸಕ ಮನೋಭಾವ, ದೃಢ ನಿಲುವು, ನಿಷ್ಠುರತೆ, ತಳಮಳ, ತಲ್ಲಣ, ಮುನ್ನೋಟ, ಹತಾಶೆ, ನಿರೀಕ್ಷೆಗಳನ್ನು ಬಿಂಬಿಸುವ ಈ ಪತ್ರಗಳು ತೇಜಸ್ವಿ ಎಂಬ ವ್ಯಕ್ತಿತ್ವ ರೂಪುಗೊಂಡ ಒಂದು ವಿದ್ಯಮಾನವಾದ ಬಗೆಯನ್ನೂ ಕಾಣಿಸುತ್ತದೆ.

ಈ ಸಂಗ್ರಹದ ಮೇರುಭಾಗ ಎಂದರೆ ತಂದೆ ಕುವೆಂಪು ಮಗ ತೇಜಸ್ವಿ ಅವರಿಗೆ ಬರೆದ ಪತ್ರಗಳು. ಕುವೆಂಪು ನಾಡಿಗೆ ಮಹಾಕವಿಯಾದರೇನಂತೆ, ಮಗನಿಗೆ ತಂದೆ ಮಾತ್ರ! ಕುವೆಂಪು ಹೆಜ್ಜೆಹೆಜ್ಜೆಗೂ ತೇಜಸ್ವಿಯವರ ಮೇಲೆ ಕಣ್ಗಾವಲಿರಿಸಿ ಕೈಹಿಡಿದು ನಡೆಸಿರುವುದು ಈ ಪತ್ರಗಳ ಮೂಲಕ ಗೋಚರವಾಗುತ್ತದೆ. "ಸದ್ಯಕ್ಕೆ ಬೇರೆ ಎಲ್ಲವನ್ನೂ ಬದಿಗಿಟ್ಟು ಓದಿನ ಕಡೆ ಲಕ್ಷ್ಯ ಕೊಟ್ಟು ತೇರ್ಗಡೆ ಹೊಂದು, ಪರೀಕ್ಷೆಯು ಮುಗಿದೊಡನೆ ಬೇಕಾದಷ್ಟು ಸಮಯವಿರುತ್ತದೆ ಉಳಿದುದಕ್ಕೆ" ಎನ್ನುತ್ತಲೇ "ನಿನ್ನ ಉಪಾಧ್ಯಾಯರುಗಳೊಂದಿಗೆ ತಾಳ್ಮೆಯಿಂದ ವರ್ತಿಸು. ಅವರ ಆಲೋಚನೆಗಳು ನಿನಗೆ ಹಿಡಿಸದಿದ್ದರೂ ಅಸಭ್ಯವಾಗಿ ವಾದಿಸುವ ಗೋಜಿಗೆ ಹೋಗದಿರು" ಎನ್ನುವರು!(ಪುಟ ೮) ತೇಜಸ್ವಿ ಕಷ್ಟಪಟ್ಟು ಬಿತ್ತಿ ಬೆಳೆದ ಆಲೂಗೆಡ್ಡೆ ಕರಗಿಹೋಗಿದ್ದನ್ನು ಕೇಳಿ, "ಮಾಡಿದ ಕೆಲಸವೆಲ್ಲ ನೀರಿನಲ್ಲಿ ಹೋಮವಾಯಿತಲ್ಲ" ಎಂದು ಸಂಕಟ ಪಡುವರು (ಪುಟ ೧೭). "ಹತ್ತಿ ಎಲ್ಲ ಬಿಡಿಸಿ ಆಯಿತೇ? ಒಟ್ಟು ಎಷ್ಟು ಕೆ.ಜಿ. ಆಯಿತು? ಕೆ.ಜಿ.ಗೆ ಹೇಗೆ?" ಎಂದು ಕೇಳುವರು(ಪುಟ ೧೬). "ಬತ್ತ ಎಲ್ಲ ತೂರಿ ಆಯಿತೇ? ಎಷ್ಟು ಪಲ್ಲ ಆಗಿದೆ? ಜಳ್ಳು ಎಷ್ಟು?" ಎಂದು ವಿಚಾರಿಸುವರು(ಪುಟ ೧೬). ತಾವು ತೇಜಸ್ವಿಗೆ ನೀಡಿದ ಸಾಲವನ್ನು ಸರಿಯಾಗಿ ವಿನಿಯೋಗಿಸುವಂತೆ, ಸರಿಯಾದ ಲೆಕ್ಕವಿಟ್ಟು ಸಕಾಲದಲ್ಲಿ ಪಾವತಿ ಮಾಡುವಂತೆ ಪದೇ ಪದೇ ನೋಟಿಸು ನೀಡುವರು!(ಪುಟ ೨೩-೨೪). "ನೀನು ಸ್ಕೂಟರಿನಲ್ಲಿ ರಾಜೇಶ್ವರಿಯನ್ನು ಕೂರಿಸಿಕೊಂಡು (ಮೈಸೂರಿಗೆ) ಬರುವುದು ಖಂಡಿತಾ ಬೇಡ" ಎಂದು ತಾಕೀತು ಮಾಡುವರು(ಪುಟ೧೫). "ಈ ಸಲದ ಮಾನವ ಪತ್ರಿಕೆಯಲ್ಲಿ ನಿನ್ನ ಭಾಷಾಂತರ ಓದಿದೆ. ನಿನ್ನನ್ನು ಪ್ರಕಾಶಕ ಎಂದು ಘೋಷಿಸಿದ್ದಾರಲ್ಲ... ಏನಾದರೂ ವಿವಾದಾಸ್ಪದವಾದದ್ದು(ವೈಯಕ್ತಿಕ ವಿಚಾರದಲ್ಲಿ) ಕೋರ್ಟು ಮನೆ ಹತ್ತುವ ಪ್ರಸಂಗ ಬಂದರೆ.....ಯೋಚಿಸು" ಎಂದು ಎಚ್ಚರಿಸುವರು!(ಪುಟ ೧೬).

ಇಷ್ಟೇ ಆಸಕ್ತಿದಾಯಕ ಪತ್ರಗಳು ಶಿವರಾಮ ಕಾರಂತ, ಜಿ.ಎಸ್.ಶಿವರುದ್ರಪ್ಪ, ಪಿ.ಲಂಕೇಶ್, ಎಂ.ಡಿ.ಎನ್., ಕಡಿದಾಳು ಶಾಮಣ್ಣ, ಚಂಪಾ, ಜಿ.ಎಚ್. ನಾಯಕ, ರಾಮದಾಸ್, ಬಿ.ಎನ್ ಶ್ರೀರಾಮ್ ಅಡಿಗ, ಕುರ್ತುಕೋಟಿ, ಜಿ.ಬಿ. ಜೋಷಿ ದೇಜಗೌ, ಯು.ಆರ್.ಎ., ಸುಂದರೇಶ್, ಕಾರ್ನಾಡ್, ಡಿ.ಎಸ್.ಎನ್., ಮೊಕಾಶಿ, ಪಟ್ಟಣಶೆಟ್ಟಿ, ದೇವನೂರು ಮೊದಲಾದವರೊಂದಿಗೆ ವಿನಿಮಯವಾಗಿದ್ದು, ಇವೆಲ್ಲ ಒಂದು ಕಾಲದಲ್ಲಿ ಕಟ್ಟಿಕೊಂಡ ಮಹತ್ವದ ಸಾಂಸ್ಕೃತಿಕ-ಸಾಮಾಜಿಕ-ರಾಜಕೀಯ ವಾಗ್ವಾದಗಳ ಸ್ವರೂಪ, ಶೈಲಿ ಮತ್ತು ಲಯಗಳನ್ನು ಹೇಳುತ್ತವಲ್ಲದೆ, ಇವೆಲ್ಲ ಆಯಾಮಗಳೂ ತೇಜಸ್ವಿ ಎಂಬ ಒಂದು ಪ್ರಜ್ಞೆಯಲ್ಲಿ ಅವಿನಾಭಾವದಲ್ಲಿ ಹೇಗೆ ಬೆರೆತು ಒಂದಾಗಿದ್ದವು ಎಂಬ ಸೋಜಿಗವನ್ನೂ ಹುಟ್ಟಿಸುತ್ತವೆ. ಕಾರಂತರಂತೆಯೇ ಪತ್ರ ಬರೆದವರೆಲ್ಲರಿಗೂ ಉತ್ತರ ಬರೆದಂತೆ ತೋರುವ ತೇಜಸ್ವಿ, ಅವರು ಬಹು ಖಾಸಗಿ ಮನುಷ್ಯ ಎಂಬ ಟೀಕೆಯನ್ನು ಅಲ್ಲಗಳೆಯುವಂತಿವೆ. ವ್ಯಕ್ತಿ ಸಂಬಂಧ ಮತ್ತು ವಿಷಯ ಸಂದರ್ಭಗಳನ್ನಾಧರಿಸಿ ಈ ಪತ್ರಗಳ ಶೈಲಿ-ಸೊಗಡುಗಳೂ ಬದಲಾಗುತ್ತಾ ತೇಜಸ್ವಿಯವರ ಗದ್ಯದ ಲವಲವಿಕೆ, ಲಾಲಿತ್ಯ, ಲಾಘವ, ಲಹರಿಗಳು ಬೆರಗು ಹುಟ್ಟಿಸುತ್ತವೆ. ಒಂದು ಸಣ್ಣ ಸ್ಯಾಂಪಲ್:

**ಗೆಳೆಯ ಕಾಳೇಗೌಡ ನಾಗವಾರ,**

**ನಿಮ್ಮ ಕಾಗದ ತಲುಪಿ ಒಂದೆರಡು ದಿನಗಳಾಯ್ತು. ನಾನು ಊರಲ್ಲಿರದುದರಿಂದ ಕೂಡಲೆ ಉತ್ತರ ಬರೆಯಲಾಗಲಿಲ್ಲ. ನೀವು ಮಾಡುತ್ತಿರುವ ಕೆಲಸ ಸ್ತುತ್ಯರ್ಹವಾದುದು. ಆದರೆ ನಾನು ನನ್ನ ಅನೇಕ ಕೆಲಸಗಳ ನಡುವೆ ಬಂಧಿಯಾಗಿ ನಿಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗುತ್ತಿಲ್ಲ. ಈ ನಡುವೆ ಪರ್ಯಾಲೋಚಿಸಿ. ಮೊದಲನೆಯದಾಗಿ ಹರಿಜನರನ್ನು ಮತ್ತಿತರ ಅಸ್ಪೃಶ್ಯರನ್ನು ದೇವಸ್ಥಾನ ಮುಂತಾದವುಗಳಿಗೆ ಹೋಗಿಸುವುದಕ್ಕೆ ನನ್ನ ಸಂಪೂರ್ಣ ವಿರೋಧವಿದೆ. ಶಾಸ್ತ್ರಾಚಾರಗಳ ಹೊಲಸಿನ ಗೊಂಡಾರಣ್ಯದಿಂದ ನಾವು ತಪ್ಪಿಸಿಕೊಂಡು ಹೊರಬರುತ್ತಿರುವ ಸಂದರ್ಭದಲ್ಲಿ ಹರಿಜನರನ್ನೂ ಮತ್ತಿತರ ಹಿಂದುಳಿದವರನ್ನೂ ತೆಗೆದುಕೊಂಡು ಹೋಗಿ, ಆ ಹೇಸಿಗೆಯ ಬಾವಿಗೆ ತಳ್ಳುವುದು ಸರಿಯೇ? ಸಾಂಕೇತಿಕ ಮಾರ್ಗವು ಸಂಪೂರ್ಣವಾಗಿ ಸೋತಿದೆ. ಮೂಢನಂಬಿಕೆಗಳನ್ನು ಆಚರಣೆಗೆ ತಂದವರಿಗೆ, ನೇರವಾಗಿ ತೊಂದರೆ ಕೊಡುವ, ತರಲೆ ಎಬ್ಬಿಸುವ ಮಾರ್ಗಗಳನ್ನು ನಾನು ಆಲೋಚನೆ ಮಾಡುತ್ತಿದ್ದೇನೆ. ಉದಾ, ಪುರೋಹಿತನಿಗೆ, ಜೋಯಿಸನಿಗೆ 'ಇನ್ನೊಂದು ಸಾರಿ ಮೌಢ್ಯ ಪ್ರಚಾರಕ್ಕಿಳಿದರೆ ಕಾಲು ಮುರಿಯುತ್ತೇನೆ ನೋಡು' ಎಂದು ಎಚ್ಚರಿಕೆ ನೀಡುವುದು. ಮದುವೆ ಮನೆಯಲ್ಲಿ, ಊಟದ ಸಮಯದಲ್ಲಿ ಒಂದಷ್ಟು ಹರಿಜನರನ್ನು ಕಟ್ಟಿಕೊಂಡು ನೇರವಾಗಿ ಕುಳಿತು ಬಿಡುವುದು. ಅಕ್ಷತೆಯೊಳಗೆ ನಸುಗುನ್ನಿಕಾಯಿ ಪುಡಿಯನ್ನು ಸೇರಿಸಿ ಪಲ್ಲಕ್ಕಿ ಉತ್ಸವದಲ್ಲಿ ಮಠಾಧಿಪತಿಗಳ ಮೇಲೆ ಎರಚುವುದು. ತೀರ್ಥದೊಳಗೆ ಉಗ್ರವಾದ ಭೇದಿ ಮಾತ್ರೆಗಳನ್ನು ಹಾಕಿಬಿಡುವುದು ಇತ್ಯಾದಿ ಇತ್ಯಾದಿ..... ನನ್ನ ಈ ಸಲಹೆಗಳನ್ನು ತೀವ್ರವಾದ ಆಲೋಚನೆಗೆ ಗುರಿಮಾಡುತ್ತೀರೆಂದು ನಂಬಿರುವೆನು. ಕ್ರಾಂತಿಕಾರಿ ಶುಭಾಶಯಗಳೊಂದಿಗೆ**

**ಪೂರ್ಣಚಂದ್ರ ತೇಜಸ್ವಿ.**

(೨೦.೬.೧೯೭೦ ರಂದು ಬರೆದ ಪತ್ರದ ಕೆಲ ಸಾಲುಗಳು ಪುಟ: ೨೧೭)

ಮೂಲ ಸಂಗ್ರಹದಲ್ಲಿದ್ದ ಒಟ್ಟು ಪತ್ರಗಳು ಎರಡೂವರೆ ಸಾವಿರವಂತೆ. ಇವುಗಳಲ್ಲಿ ೭೫೦ನ್ನು ಸಂಪಾದಕರು ಆಯ್ದು ವಿಂಗಡಿಸಿ ಸುಂದರ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಅಂದರೆ ಇನ್ನೂ ಎರಡು ಸಂಪುಟಗಳು ಬರಬಹುದು. ಬರಲಿ, ಬರದಿರಲಿ, ಈ ಸಂಗ್ರಹ ಕನ್ನಡ ಪತ್ರಸಾಹಿತ್ಯಕ್ಕೊಂದು ಅಮೂಲ್ಯ ಕೊಡುಗೆಯೆಂದು ಹೇಳಲೇಬೇಕು. ಹಾಗೇ ಇದು, ಕರ್ನಾಟಕದ ಆಧುನಿಕ ಸಾಹಿತ್ಯ-ಸಂಸ್ಕೃತಿ ಚರಿತ್ರೆಗೆ ಸೇರಬೇಕಾದ ಮೌಲಿಕ ದಾಖಲೆ ಕೂಡ. ಇದಕ್ಕಾಗಿ ಸಂಪಾದಕರಾದ ನರೇಂದ್ರ ರೈ ದೇರ್ಲ ಮತ್ತು ಗೌರವ ಸಂಪಾದಕರಾದ ರಾಜೇಶ್ವರಿ ತೇಜಸ್ವಿ ಹಾಗೂ ಬಿ.ಎಸ್ ಶ್ರೀರಾಮ ಅವರನ್ನು, ವಿಶೇಷವಾಗಿ ಈ ಎಲ್ಲ ಪತ್ರಗಳನ್ನು ಈವರೆಗೆ ಜತನದಿಂದ ಕಾಪಾಡಿರುವ ರಾಜೇಶ್ವರಿ ಅವರನ್ನು ಕನ್ನಡಿಗರು ಅಭಿನಂದಿಸಬೇಕಿದೆ.

**-ಸವಿತಾ ನಾಗಭೂಷಣ**

‘ಹೊಸ ಮನುಷ್ಯ’ ಪತ್ರಿಕೆಗೆ

ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ

ಹುಟ್ಟುಹಬ್ಬದ ಶುಭಾಶಯಗಳು



–ಎಚ್. ಎಸ್. ಪಾಟೀಲ
ಮತ್ತು ಕುಟುಂಬ
**ಕೊಪ್ಪಳ**

‘ಹೊಸ ಮನುಷ್ಯ’ ಪತ್ರಿಕೆಗೆ

ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ

ಹುಟ್ಟುಹಬ್ಬದ ಶುಭಾಶಯಗಳು



–ಡಾ. ರಾಜಶೇಖರ ನೀರಮಾನ್ವಿ
ಮತ್ತು ಕುಟುಂಬ
**ಬಳ್ಳಾರಿ**

**'ಹೊಸ ಮನುಷ್ಯ'ದ ಓದುಗರೆಲ್ಲರಿಗೂ**
**ಹಾರ್ದಿಕ ಶುಭಾಶಯಗಳು!**



**–ಪ್ರೊ.ಎಸ್. ಪಟೇಲ್**
ಮತ್ತು **ಕುಟುಂಬ**
**ದಾವಣಗೆರೆ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**ತಿಂಗಳ ಸಾಲುಗಳು...**



ಕುಲ ಕುಲ ಕುಲ ಎನ್ನುತಿಹರು
ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ?
ಆತ್ಮ ಯಾವ ಕುಲ, ಜೀವ ಯಾವ ಕುಲ,
ತತ್ವೇಂದ್ರಿಯಗಳ ಕುಲ ಪೇಳಿರಯ್ಯ!

**-ಕನಕದಾಸರು**

**ಪತ್ರಿಕೆಗೆ ಶುಭ ಕೋರುತ್ತಾ...**

**–ಬಿ.ಸುರೇಶ**

**ಡಾ. ವಿಜಯಾ**

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,